ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 40, ₹12

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume -15
Issue - 07
July - 2018



ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ
ಮೈತ್ರಿ ಸರ್ಕಾರದ ಬಜೆಟ್ ಗಾತ್ರ ರೂ. 2,18,488 ಕೋಟಿಗಳು



**ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಸೇವಾಧರ್ಮ ಹಾಗೂ ಸಾಮಾಜಿಕ ಬದ್ಧತೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ**

ಶ್ರೀ ಬಂಡೆಪ್ಪ ಕಾಶೆಂಪೂರ,
ನೂತನ ಸಹಕಾರ ಸಚಿವರು

- ರೈತಸ್ನೇಹಿ, ಅಭಿವೃದ್ಧಿ ಪೂರಕ
- 34 ಸಾವಿರ ಕೋಟಿ ರೂಪಾಯಿ ರೈತರ ರೂ 2 ಲಕ್ಷ ವರೆಗಿನ ಸಾಲ ಮನ್ನಾ
- ಸಾಲ ಮರುಪಾವತಿ ಮಾಡಿದ ರೈತರಿಗೆ ರೂ. 25,000 ಪ್ರೋತ್ಸಾಹ ಧನ
- ಸರ್ಕಾರದ, ಸಹಕಾರಿ ಕ್ಷೇತ್ರಗಳ ಅಧಿಕಾರಿಗಳ ಕುಟುಂಬಗಳ ಸಾಲ ಮನ್ನ ಇಲ್ಲ
- ಕಾರವಾರ ಯಾದಗಿರಿ ತುಮಕೂರು ಹಾವೇರಿಗಳಲ್ಲಿ ಇಸ್ರೇಲ್ ಮಾದರಿ ಕೃಷಿ ಪದ್ಧತಿಗೆ 150 ಕೋಟಿ ರೂಪಾಯಿ ಮೀಸಲು
- ರೈತ ಮಹಿಳೆಯರ ಅಭಿವೃದ್ಧಿಗಾಗಿ ಭೂ ಒಡೆತನ ಯೋಜನೆ ಜಾರಿ.
- ಮಹಿಳೆಯರ ಭೂಮಿಗೆ ಕೊಳವೆ ಬಾವಿ, ಕೃಷಿ ಯಂತ್ರಗಳ ವಿತರಣೆ.

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4345

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1149



> ನೂತನ ಸರಕಾರ ಸಂಪೂರ್ಣವಾಗಿ ರೈತರ, ರೈತ ಕಾರ್ಮಿಕರ, ಕೂಲಿಕಾರರ, ಸಮಾಜದ ಹಿಂದುಳಿದ ವರ್ಗದ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಕಾರ್ಯನಿರ್ವಹಿಸುತ್ತಿದೆ. ಸೌಹಾರ್ದ ಸಹಕಾರಿ ಕ್ಷೇತ್ರವಾದರೂ ಸಹ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ವಿನೂತನ ವ್ಯವಸ್ಥೆಯಾಗಿ ಬೆಳೆದಿದೆ. ಸಹಕಾರ ಕ್ಷೇತ್ರದ ಕಾರ್ಯವೈಖರಿಯಲ್ಲಿ ಮಹತ್ತರ ಬದಲಾವಣೆಯನ್ನು ತಂದಿದೆ.

# ಸಾಮಾಜಿಕ ಕಳಕಳಿ ಸಹಕಾರ ಕ್ಷೇತ್ರದ ಬದ್ಧತೆ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಹೃದಯಪೂರ್ವಕ ನಮಸ್ಕಾರಗಳು. ರಾಜ್ಯದಲ್ಲಿ ಶ್ರೀಯುತ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದಲ್ಲಿ ನೂತನ ಸರಕಾರ ಸ್ಥಾಪಿತಗೊಂಡಿದೆ. ಸನ್ಮಾನ್ಯ ಶ್ರೀ ಬಂಡೆಪ್ಪ ಕಾಶೆಂಪೂರರವರು ಸಹಕಾರ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಸಹಕಾರಿಗಳ ಹಾಗೂ ಅಧಿಕಾರಿಗಳ ಸಭೆಯಲ್ಲಿ ಸಹಕಾರ ಕ್ಷೇತ್ರದ ಕಾರ್ಯವೈಖರಿ ಹೇಗೆ ಇರಬೇಕೆಂಬುದರ ಬಗ್ಗೆ ತಮ್ಮ ಅನಿಸಿಕೆಯನ್ನು ಹಂಚಿಕೊಂಡಿರುವುದು ಸಹಕಾರಿಗಳಿಗೆ ಸಂತೋಷವನ್ನುಂಟು ಮಾಡಿದೆ. ಮಾನ್ಯ ಸಹಕಾರ ಸಚಿವರಿಗೆ ಸಹಕಾರ ಕ್ಷೇತ್ರದ ಸಾಧನೆ, ಕಾರ್ಯವೈಖರಿ ಹಾಗೂ ಅವರಿಗೆ ಸಹಕಾರ ತತ್ವಗಳಲ್ಲಿ ಅಪಾರ ನಂಬಿಕೆ ಇರುವುದನ್ನು ಗಮನಿಸಬಹುದಾಗಿದೆ. ಇದು ಸಹಕಾರಿಗಳು ಸಂತೋಷಪಡಬೇಕಿರುವ ವಿಷಯ.

ಸಹಕಾರ ಕ್ಷೇತ್ರಕ್ಕೆ 114 ವರ್ಷಗಳ ಸುದೀರ್ಘ ಇತಿಹಾಸ, ಕ್ಷೇತ್ರದ ಸಾಧನೆ, ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ, ಸೌಹಾರ್ದ ಸಹಕಾರಿ ಕ್ಷೇತ್ರದ ಹುಟ್ಟು-ಬೆಳವಣಿಗೆ - ಕಾರ್ಯಚಟುವಟಿಕೆಗಳೆಲ್ಲವೂ ಸೇರಿದಂತೆ ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸಹಕಾರ ತತ್ವ ಸಾಮಾಜಿಕ ಬದ್ಧತೆಯ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂಬುದು ಅವರ ಅಪೇಕ್ಷೆಯಾಗಿದೆ. ಇದಕ್ಕೆ ಸಹಕಾರಿಗಳೆಲ್ಲರೂ ಬದ್ಧತೆಯಿಂದ ಕಾರ್ಯನಿರ್ವಹಿಸುವ ಅಗತ್ಯತೆ ಹಿಂದಿನಕ್ಕಿಂತ ಇಂದು ಹೆಚ್ಚಿಗೆ ಇದೆ.

ನೂತನ ಸರಕಾರ ಸಂಪೂರ್ಣವಾಗಿ ರೈತರ, ರೈತ ಕಾರ್ಮಿಕರ, ಕೂಲಿಕಾರರ, ಸಮಾಜದ ಹಿಂದುಳಿದ ವರ್ಗದ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಕಾರ್ಯನಿರ್ವಹಿಸುತ್ತಿದೆ. ಸೌಹಾರ್ದ ಸಹಕಾರಿ ಕ್ಷೇತ್ರವಾದರೂ ಸಹ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ವಿನೂತನ ವ್ಯವಸ್ಥೆಯಾಗಿ ಬೆಳೆದಿದೆ. ಸಹಕಾರ ಕ್ಷೇತ್ರದ ಕಾರ್ಯವೈಖರಿಯಲ್ಲಿ ಮಹತ್ತರ ಬದಲಾವಣೆಯನ್ನು ತಂದಿದೆ. ಸರಕಾರದ ಆರ್ಥಿಕ ನೆರವಿಲ್ಲದೇ ಸರಕಾರದ ಪ್ರೋತ್ಸಾಹದಿಂದ ಸಹಕಾರ ತತ್ವಗಳಡಿಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಂಡು ಸಾಂಪ್ರದಾಯಿಕತೆಯಿಂದ ಹೊರಬಂದು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಸರಕಾರದ ಗಮನ ಸೆಳೆಯುವುದು ಅವಶ್ಯಕ. ಅವಕಾಶವಿರುವಾಗಲೆಲ್ಲಾ ಸೌಹಾರ್ದ ಸಹಕಾರಿಗಳು ಮಾನ್ಯ ಸಹಕಾರ ಸಚಿವರ ಗಮನಕ್ಕೆ ಹಾಗೂ ನೂತನ ಶಾಸಕರಿಗೆ ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಚಯಿಸುವುದರ ಜೊತೆಗೆ ಸಹಕಾರ ಕ್ಷೇತ್ರದ ಬಲವೃದ್ಧಿಗೆ ನೆರವು ನೀಡಲು ಮನವಿ ಸಲ್ಲಿಸುವ ಹಾಗೂ ಸಹಕಾರ ಕ್ಷೇತ್ರದ ಮೂಲಕ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ.

ಈ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಮಾದರಿಯನ್ನು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಅನುಷ್ಠಾನಗೊಳಿಸುವ ಪ್ರಯತ್ನಗಳು ನಡೆಯುತ್ತಿರುವುದನ್ನು, ಈ ಕ್ಷೇತ್ರ ಅಧ್ಯಯನ ಯೋಗ್ಯ ಕ್ಷೇತ್ರವಾಗಿರುವುದನ್ನು ಸರಕಾರದ ಹಾಗೂ ಮಾನ್ಯ ಸಹಕಾರ ಸಚಿವರ ಗಮನಕ್ಕೆ ತರುವ ಪ್ರಯತ್ನವನ್ನು ಸಂಯುಕ್ತ ಸಹಕಾರಿಯು ಮಾಡಲಿದೆ. ಈಗಾಗಲೇ ಮಾನ್ಯ ಸಹಕಾರ ಸಚಿವರನ್ನು ಭೇಟಿ ಮಾಡಿ ಅಭಿನಂದಿಸಲಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಲಾಗಿದೆ. ಮನವಿ ಪತ್ರವನ್ನು ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗಳ ಬಗ್ಗೆ ಹೆಚ್ಚಿನ ಉತ್ಸಾಹವನ್ನು ಹೊಂದಲಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಮಾಡುವುದರಲ್ಲಿ ಮತ್ತು ಕಾರ್ಯಗತ ಮಾಡುವುದರಲ್ಲಿ ಸಂಯುಕ್ತ ಸಹಕಾರಿಯ ಜೊತೆಗೆ ತಮ್ಮ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸಿದೆ.

**- ಬಿ.ಹೆಚ್.ಕೃಷ್ಣಾರೆಡ್ಡಿ**

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜಿ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ . . .

ಜ್ಞಾನ ಜ್ಯೋತಿ ............................ 4
ಸಂಯುಕ್ತ ಸಹಕಾರಿ ಸಮಾಚಾರಗಳು .. ............................................ 5-22
ಸೌಹಾರ್ದ ಸಹಕಾರಿಗಳ ಸಮಾಚಾರಗಳು ..................................... 23 - 27
ಯಶೋಗಾಥೆ ಮಾಲಿಕೆ ....... 28-31
ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ .. 32
ಲೇಖನ ............................ 33-37
ಆರ್‌ಬಿಐ ನ್ಯೂಸ್ ................ 38-39

# ಸಂಪಾದಕೀಯ

## ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಕಡ್ಡಾಯ ವ್ಯವಸ್ಥಾಪನಾ ಮಂಡಳಿ ನೇಮಕಕ್ಕೆ ಆರ್‌ಬಿಐ ಕ್ರಮ

(RBI guidelines for Board of Management in Urban Cooperative Banks)

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಈ ದೇಶದ ಎಲ್ಲಾ ಬ್ಯಾಂಕುಗಳ ಆರ್ಥಿಕ ವಹಿವಾಟುಗಳನ್ನು ನಿರೂಪಿಸುವ ಹಾಗೂ ನಿಯಂತ್ರಿಸುವ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಅದರಂತೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿನ ಸಾರ್ವಜನಿಕರ ಠೇವಣಿ ಹಣ ಭದ್ರತೆಗೆ ಕ್ರಮವಿಡುವುದು ಅವಶ್ಯಕ. ಈ ಹಿನ್ನೆಲೆಯಲ್ಲಿ ಈಗ ಇರುವ ಆಡಳಿತ ಮಂಡಳಿಯ ನಿರ್ದೇಶಕರ ಜೊತೆಗೆ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ನೇಮಕಾತಿಯನ್ನು ಕಡ್ಡಾಯಗೊಳಿಸುವ ಕರಡು ನಿಯಮಗಳನ್ನು ಸಿದ್ಧಪಡಿಸಿರುವುದು ಸ್ವಾಗತಾರ್ಹ. ಯಾವುದೇ ಬ್ಯಾಂಕು ರೂ.100 ಕೋಟಿಯ ಠೇವಣಿಯ ಮೊತ್ತವನ್ನು ದಾಟುತ್ತಿದ್ದಂತೆ 1 ವರ್ಷದೊಳಗೆ ವ್ಯವಸ್ಥಾಪನಾ ಮಂಡಳಿಯನ್ನು ಹೊಂದುವುದು ಕಡ್ಡಾಯವೆಂದು ಕರಡು ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ. ರೂ.100 ಕೋಟಿಯ ಸಹಕಾರ ಬ್ಯಾಂಕುಗಳು ಕನಿಷ್ಠ ಜನರನ್ನು ಹಾಗೂ ರೂ.100 ಕೋಟಿ ದಾಟಿದ ಸಹಕಾರ ಬ್ಯಾಂಕುಗಳು ಕನಿಷ್ಠ 5 ಜನರನ್ನು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ಗೆ ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಬೋರ್ಡ್ ಆಫ್ ಡೈರೆಕ್ಟರ್ ಅವಧಿಯ ಜೊತೆಗೆ ಇವರುಗಳ ಅವಧಿಯೂ ಮುಕ್ತಾಯವಾಗುತ್ತದೆ. 2010ರಲ್ಲಿ ರಚಿಸಲಾಗಿದ್ದ ಮಾಲೇಗಾಂವ ಕಮಿಟಿ ಶಿಫಾರಸ್ಸಿನ ಮೇರೆಗೆ 2015ರಲ್ಲಿ ಶ್ರೀ ಆರ್.ಗಾಂಧಿಯವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಈ ಕ್ರಮವಿಡಲಾಗುತ್ತಿದೆ.

ಈ ಶಿಫಾರಸ್ಸಿನ ಪ್ರಕಾರ ಹಾಲಿ ಇರುವ ನಿರ್ದೇಶಕ ಮಂಡಳಿಯವರು ಈ ವ್ಯವಸ್ಥಾಪನಾ ಮಂಡಳಿಯವರ ನೇಮಕಾತಿಯನ್ನು ಮಾಡುತ್ತಾರೆ. ಈ ಸಮಿತಿಯಲ್ಲಿ ಬ್ಯಾಂಕಿಂಗ್ ತಜ್ಞರು ಇರುತ್ತಾರೆ. ಬ್ಯಾಂಕಿನ ಹಣಕಾಸಿನ ನಿರ್ವಹಣೆಯಲ್ಲಿ ಈ ವ್ಯವಸ್ಥಾಪನಾ ಮಂಡಳಿಯವರು ಸಲಹೆ, ಮಾರ್ಗದರ್ಶನಗಳನ್ನು ಪಡೆಯಲು ಅವಕಾಶವಾಗುತ್ತದೆ.

ಆರ್.ಬಿ.ಐ. ಹೊರಡಿಸಿದ ಕರಡು ಮಾರ್ಗದರ್ಶಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಬ್ಯಾಂಕಿನ ಉಪವಿಧಿಗಳಲ್ಲಿ (ಬೈಲಾಗಳಲ್ಲಿ) ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಮಾಡಿಕೊಳ್ಳಲು ತಿದ್ದುಪಡಿಗಳನ್ನು ಮಾಡಿಕೊಳ್ಳುವುದು ಅವಶ್ಯಕ. ಶಾಖಾ ಅನುಮತಿ, ಕಾರ್ಯಕ್ಷೇತ್ರ ವಿಸ್ತರಣೆ ಇತ್ಯಾದಿ ಶಾಸನಬದ್ಧ ಮಂಜೂರಾತಿಗಳು ಈ ತಿದ್ದುಪಡಿಗಳನ್ನು ಮಾಡಿಕೊಂಡ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಅವಕಾಶವಿರುತ್ತದೆ. ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಸಹಕಾರಿಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ದಿನಾಂಕ 24 ಜುಲೈ 2018ರವರೆಗೆ ಅವಕಾಶ ನೀಡಲಾಗಿದೆ.

ಸಹಕಾರ ಬ್ಯಾಂಕುಗಳಲ್ಲಿ ಆರ್ಥಿಕ ಶಿಸ್ತು ಅಳವಡಿಸಿಕೊಳ್ಳುವುದಕ್ಕೆ ಇದು ಮಹತ್ವದ ಹೆಜ್ಜೆ ಎನಿಸುತ್ತದೆ. ಸದಸ್ಯರ, ಸಾರ್ವಜನಿಕರ ಹಾಗೂ ಸಹಕಾರಿಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವಾಗಿರುವುದರಿಂದ ಆರ್.ಬಿ.ಐ.ನ ಈ ಕ್ರಮ ಸ್ವಾಗತಿಸಬಹುದಾಗಿದೆ.



## ಜ್ಞಾನ ಜ್ಯೋತಿ

▸▸ ಶ್ರೀ ರಂಭಾಪುರಿಶ್ವರರ ಸಂದೇಶ

### ಸಮಾಜದ ಉನ್ನತಿ

ಸಮಾಜದ ಉನ್ನತಿಗೆ ಸರ್ವರೂ ಶ್ರಮಿಸಬೇಕಾದುದು ಅತ್ಯಗತ್ಯ. ಧರ್ಮದ ಯಥಾರ್ಥವಾದ ವಿಚಾರಗಳು ಜನಮನದಲ್ಲಿ ಬೇರೂರಬೇಕು. ತತ್ವ ಸಿದ್ಧಾಂತಗಳ ಹಿರಿಮೆಯನ್ನು ಅರಿಯುವ ಆದರ್ಶ ಒಡಮೂಡಿ ಬರಬೇಕು. ವಿವಿಧತೆಯಲ್ಲಿ ಏಕತೆಯನ್ನು ಕಾಣುವುದೇ ನಮ್ಮ ಸಂಸ್ಕೃತಿಯ ಲಕ್ಷಣ. ಹತ್ತು ಹಲವು ರೀತಿಯಲ್ಲಿ ವಿಚಾರ ಮಾಡಬೇಕಾದ ಅವಶ್ಯಕತೆ ಮನುಷ್ಯನಿಗಿದೆ.

ಮಾನವನಲ್ಲಿ ಅತ್ಯದ್ಭುತವಾದ ಶಕ್ತಿ ಇದೆ. ಇದನ್ನು ಅರಿತು ಆಚರಿಸಿದಾಗ ಮಾತ್ರ ಮನುಷ್ಯನಲ್ಲಿ ದೈವಿಗುಣಗಳು ಮನೆಮಾಡಿಕೊಳ್ಳುತ್ತವೆ. ಹಾಗೆಯೇ ಅಸುರಿ ಗುಣಗಳು ಇವೆ. ಒಂದರ ಪ್ರಾಬಲ್ಯ ಹೆಚ್ಚಾದಾಗ ಮತ್ತೊಂದು ಕಣ್ಮರೆಯಾಗುತ್ತದೆ. ಮನಸ್ಸಿನಲ್ಲಿ ವಿಷ ಬೀಜ ಬಿತ್ತುವುದನ್ನು ನಿಲ್ಲಿಸಿ, ಸತ್ಯ ವಿಚಾರಗಳನ್ನು ಅರಿಯುವುದು ಬಲು ಮುಖ್ಯ. ಮನುಷ್ಯನಲ್ಲಿ ದೈವ ಗುಣಗಳು ಬೆಳೆದು ಸಜ್ಜನರಾಗುವಲ್ಲಿ ಶ್ರೇಯಸ್ಸು ಇದೆ. ಇವುಗಳ ಸಂಪ್ರಾಪ್ತಿಗಾಗಿ ಸತ್ಸಂಗದ ಸಮಾಗಮವನ್ನು ಮಾಡಬೇಕಾಗುತ್ತದೆ. ಧರ್ಮವಿದ್ದೆಡೆ ಜಯ ಇರುವುದೆಂಬುದು ಅನುಭವಿಕರ ವಾಣಿಯಲ್ಲಿ ಸತ್ಯವಿದೆ. ಅವರವರು ಬಿತ್ತಿ ಬೆಳೆದ ಬೀಜದ ಫಲವನ್ನು ಅವರು ಪಡೆದೇ ಪಡೆಯುತ್ತಾರೆ.

ಅಶಾಂತಿ ಅಜ್ಞಾನಗಳ ತಾಕಲಾಟದಲ್ಲಿ ಸಮಾಜ ಒಡವಾಗ ಬಾರದು. ನಾಗರೀಕತೆಯ ಸೋಗಿನಲ್ಲಿ ನಿಜವಾದ ತತ್ವಗಳು ಕಣ್ಮರೆಯಾಗಬಾರದು. ಇದನ್ನು ಬೋಧಿಸಲೆಂದೇ ಧರ್ಮಪೀಠಗಳು ಶ್ರಮಿಸುತ್ತವೆ. ಸಾಮಾಜಿಕ ಜೀವನದ ಮೌಲ್ಯಗಳನ್ನು ಪ್ರತಿಯೊಬ್ಬರು ಉಳಿಸಿ ಬೆಳೆಸಿಕೊಂಡು ಬರಬೇಕಾದುದು ಕರ್ತವ್ಯವಾಗಿದೆ. ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸುಭದ್ರ ಮತ್ತು ಸುಶೀಲ ಸಮಾಜವನ್ನು ಕಟ್ಟಬೇಕಾಗಿದೆ. ಈ ದಿಶೆಯಲ್ಲಿ ಎಲ್ಲರ ಗಮನವು ಕೇಂದ್ರೀಕೃತವಾಗಬೇಕು. ಸಮಾಜದ ಮುನ್ನಡೆಗೆ ಎಲ್ಲರೂ ದುಡಿಯುವ ಸಂಕಲ್ಪ ನಮ್ಮದಾಗಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2773 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2094 ಪ್ರಕರಣಗಳು ಸೇರಿದಂತೆ ಒಟ್ಟು 4867 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2454 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 913 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 57 ಪ್ರಕರಣಗಳು ಇತ್ಯರ್ಥಗೊಂಡಿದೆ. 800 ಪ್ರಕರಣಗಳು ಪ್ರಗತಿಯಲ್ಲಿದ್ದು, 56 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 952 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 14 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಸಂಯುಕ್ತ ಸಹಕಾರಿಯ ಮುಂಬರುವ ಕಾರ್ಯಕ್ರಮಗಳು

- **ಕೇಂದ್ರ ಕಛೇರಿ : ಬೇಸಿಕ್ ಟ್ರೈನಿಂಗ್ ಕೋರ್ಸ್ :** ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬ್ಯಾಂಕುಗಳ ನೂತನ ಸಿಬ್ಬಂದಿಯವರಿಗಾಗಿ 7 ದಿನಗಳ "ಬೇಸಿಕ್ ಟ್ರೈನಿಂಗ್ ಕೋರ್ಸ್" ಅನ್ನು ದಿನಾಂಕ 07 ರಿಂದ 13 ಜುಲೈ 2018ರವರೆಗೆ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.
- **ವಿಭಾಗವಾರು ವಿಷಯಾಧಾರಿತ ತರಬೇತಿ :** ದಿನಾಂಕ 19, 20 & 21 ಜುಲೈ 2018ರಂದು ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವಿಭಾಗವಾರು 3 ದಿನಗಳ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ.
- **ಶಾಖೆಗಳ ನಿರ್ವಹಣೆ ಕುರಿತು ತರಬೇತಿ :** ಶಾಖೆಗಳ ನಿರ್ವಹಣೆ ಕುರಿತು ವಿಭಾಗವಾರು ತರಬೇತಿ ಕಾರ್ಯಕ್ರಮವನ್ನು ಆಗಸ್ಟ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

# ಜುಲೈ ಮಾಹೆಯ ಪ್ರಥಮ ಶನಿವಾರ : ಅಂತರ ರಾಷ್ಟ್ರೀಯ ಸಹಕಾರಿಗಳ ದಿನ

ಪ್ರತಿ ವರ್ಷ ಜುಲೈ ಮಾಹೆಯ ಪ್ರಥಮ ಶನಿವಾರವನ್ನು ಅಂತರ ರಾಷ್ಟ್ರೀಯ ಸಹಕಾರಿಗಳ ದಿನವನ್ನಾಗಿ ಆಚರಿಸಲಾಗುತ್ತಿದೆ. 2018ರ ಜುಲೈ ಮಾಹೆಯ ಪ್ರಥಮ ಶನಿವಾರ ದಿನಾಂಕ : 07–07–2018ರಂದು ಆಚರಿಸಲಾಗುತ್ತಿದೆ. ಅಂತರ ರಾಷ್ಟ್ರೀಯ ಸಹಕಾರಿಗಳ ದಿನದ ಘೋಷಣೆ "ಸುಸ್ಥಿರ ಉತ್ಪಾದನೆ ಹಾಗೂ ಬಳಕೆ." ಸಹಕಾರಿಗಳು ಈ ದಿನದಂದು ಹಾಗೂ ನಿರಂತರವಾಗಿ ಅಳವಡಿಸಿಕೊಂಡು ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮವಿಡಬೇಕೆಂದು ಮತ್ತು ಈ ದಿನದಂದು ಸಹಕಾರ ಕ್ಷೇತ್ರದ ಮೂಲಕ ಸುಸ್ಥಿರ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಕ್ರಮವಿಡಬೇಕೆಂದು ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ಕರೆ ನೀಡಿದ್ದಾರೆ.



**2018 International Day of Cooperatives "Sustainable consumption and production"**

The theme for the 2018 International Day of Cooperatives (IDC) is "Sustainable consumption and production", creating an opportunity for cooperatives to show how they run successful businesses while respecting our natural environment and the resources it offers.

The slogan of the Day "Sustainable societies through cooperation" was selected by cooperators from around the world. Through the IDC, local and global policymakers can learn how cooperatives contribute to more sustainable and resilient societies and work towards including cooperatives in policy processes related to sustainability issues.

The 2018 International Day of Cooperatives will be celebrated on the 7th of July.

Cooperatives have sustainability in their DNA, with 'concern for community' as the seventh of their guiding principles.

The 2018 IDC theme is aligned with that of the 2018 High-level Political Forum for Sustainable Development (HLPF): "Transformation towards sustainable and resilient societies". During the HLPF in July, UN Member States will review progress towards achieving the following Sustainable Development Goals: 6 (clean water and sanitation), 7 (clean and affordable energy), 11 (sustainable cities and communities), 12 (responsible consumption and production) and 15 (life on land).

Cooperatives have two centuries' experience building sustainable and resilient societies. Agricultural cooperatives work to maintain the longevity of the land where they grow crops through sustainable farming practices. Consumer cooperatives support sustainable sourcing for their products and educate consumers about responsible consumption. Housing cooperatives help ensure safe dwellings. Utility cooperatives are engaged in the transition to cleaner electricity and rural access to energy and water. Worker and social cooperatives aim to provide goods and services in an efficient, planet-friendly way while creating long-term, sustainable jobs.

### ನೂತನ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಸಿದ್ದರಾಮಪ್ಪ ಕಾಶೆಂಪುರ

# ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಸೇವಾ ಧರ್ಮ ಹಾಗೂ ಸಾಮಾಜಿಕ ಬದ್ಧತೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ

ರಾಜ್ಯದ ನೂತನ ಸಹಕಾರ ಸಚಿವರಾಗಿ ಶ್ರೀ ಬಂಡೆಪ್ಪ ಸಿದ್ದರಾಮಪ್ಪ ಕಾಶೆಂಪುರರವರು ಅಧಿಕಾರ ವಹಿಸಿಕೊಂಡಿದ್ದಾರೆ. ಶ್ರೀಯುತರು ಮೂಲ ಬೀದರ ಜಿಲ್ಲೆಯ ಬೀದರ ತಾಲ್ಲೂಕಿನ ಗ್ರಾಮದವರು. ಪಶು ಸಂಗೋಪನೆಯಲ್ಲಿ ಪದವೀಧರರು. (B.Sc) Veterinary Science. ವೃತ್ತಿಯಲ್ಲಿ ಕೃಷಿಕರು. ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯದಲ್ಲೂ ಉತ್ತಮ ಕೆಲಸಗಳನ್ನು ನಿರ್ವಹಿಸಿದ್ದಾರೆ. ಶ್ರೀಯುತರು 2006 ರಿಂದ 2009ರವರೆಗೆ ಅಂದಿನ ಸರಕಾರದಲ್ಲಿ ಕೃಷಿ ಸಚಿವರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.

### "ರೈತರಿಗೆ ಋಣ ಮುಕ್ತ ಪತ್ರ"

ರೈತರ ಸಾಲ ಮನ್ನಾ ವಿಷಯದಲ್ಲಿ ದುರುಪಯೋಗವಾಗದ ಹಾಗೇ ಅಧಿಕಾರಿಗಳು ಕ್ರಮವಿಡಬೇಕು. ರೈತರಿಗೆ ಸಾಲ ಮನ್ನಾ ಮಾಡಿದ ನಂತರ ಋಣ ಮುಕ್ತ ಪತ್ರ ನೀಡಲಾಗುವುದು. ಸಾಲ ಮನ್ನಾ ವಿಷಯದಲ್ಲಿ ರೈತರಿಗೆ ವಂಚನೆ, ದಿಕ್ಕು ತಪ್ಪಿಸುವ ಕೆಲಸಗಳನ್ನು ಮಾಡುವ ಅಧಿಕಾರಿಗಳಿಗೆ ಹಾಗೂ ಬ್ಯಾಂಕುಗಳ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ.



ರಾಜ್ಯದ ನೂತನ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಸಿದ್ದರಾಮಪ್ಪ ಕಾಶೆಂಪುರರವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಆಡಳಿತ ಮಂಡಲಿ ಸದಸ್ಯರು ಭೇಟಿ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು.

## ಅಭಿನಂದನೆ ಮತ್ತು ಸನ್ಮಾನ

**ಬೆಂಗಳೂರು :** ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ (National Council for Cooperative Training-NCCT) ದ ಕಾರ್ಯನಿರ್ವಾಹಕ ಮಂಡಳಿ (Executive Council)ಗೆ ಶ್ರೀ ಸತೀಶ್ ಮರಾಠೆ, ಶ್ರೀ ಮಾರ್ಕಂಡೇಯ ಸಿಂಗ್, ಶ್ರೀ ಎಂ.ಜಿ. ಪಾಟೀಲರವರು ನಾಮನಿರ್ದೇಶನವಾಗಿದ್ದು, ಶ್ರೀಯುತರುಗಳಿಗೆ ದಿನಾಂಕ 19 ಜೂನ್ 2018ರಂದು ನಡೆದ ಆಡಳಿತ ಮಂಡಲಿ ಸಭೆಯಲ್ಲಿ ಅಭಿನಂದನೆಗಳನ್ನು ಸಲ್ಲಿಸಲಾಯಿತು. ನಂತರ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರದ ಕಾರ್ಯನಿರ್ವಾಹಕ ಮಂಡಳಿಗೆ ನಾಮನಿರ್ದೇಶಿತರಾಗಿರುವ ಸಂಯುಕ್ತ ಸಹಕಾರಿಯ ಆಹ್ವಾನಿತ ಸದಸ್ಯರಾದ ಶ್ರೀ ಎಂ.ಜಿ.ಪಾಟೀಲರವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಪರವಾಗಿ ಸನ್ಮಾನಿಸಲಾಯಿತು.

ನಂತರ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇದರ ಆಡಳಿತ ಮಂಡಳಿಯ ಸದಸ್ಯರಾಗಿ ನೇಮಕವಾಗಿರುವ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ



ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಪರವಾಗಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಹಿಂದಿನ ಅಧ್ಯಕ್ಷರು ಹಾಗೂ ನಿರ್ದೇಶಕರಾಗಿದ್ದ, ಪ್ರಸ್ತುತ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇದರ ಆಡಳಿತ ಮಂಡಳಿಯ ಸದಸ್ಯರಾಗಿ ನೇಮಕವಾಗಿರುವ ಹಿನ್ನೆಲೆಯಲ್ಲಿ ಶೀಯುತರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## ಕೇಂದ್ರ ಕೃಷಿ ಸಚಿವರ ಭೇಟಿ

**ಬೆಂಗಳೂರು** : ದಿನಾಂಕ : 30-06-2018ರಂದು ಮಾನ್ಯ ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಖಾತೆಯ ಸಚಿವರಾದ ಶ್ರೀ ರಾಧಾಮೋಹನ್ ಸಿಂಗ್‌ರವರನ್ನು ಭೇಟಿ ಮಾಡಿ, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ಬಗ್ಗೆ ವಿವರಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು.



## ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮೌಲ್ಯಮಾಪನ ವರದಿ ಅವಲೋಕನ



ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಅಧ್ಯಯನ, ಆರ್ಥಿಕ ಸ್ಥಿತಿಗತಿ, ಸ್ವಾವಲಂಬನೆ, ವ್ಯವಹಾರಿಕ ಸ್ವಾತಂತ್ರ್ಯದ ಪರಿಮಿತಿ, ಈ ಕ್ಷೇತ್ರದ ಶಕ್ತಿ, ಸಾಮರ್ಥ್ಯ, ಸವಾಲುಗಳು, ಅವಕಾಶಗಳು, ಆಡಳಿತ ಪರಿಣಿತಿಗಳ ಅಧ್ಯಯನ ಹಾಗೂ ಸಂಯುಕ್ತ ಸಹಕಾರಿಯ ಶಾಸನಬದ್ಧ ಚಟುವಟಿಕೆಗಳು, ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳ ಅಧ್ಯಯನ ಹಾಗೂ ಮೌಲ್ಯಮಾಪನ ಕಾರ್ಯವನ್ನು ಮೈಸೂರು ವಿಶ್ವವಿದ್ಯಾಲಯದ ಥರ್ಡ್ ಸೆಕ್ಟರ್ ರಿಸೋರ್ಸ್ ರೀಸರ್ಚ್ ಸೆಂಟರ್ ಇವರಿಗೆ ವಹಿಸಿಕೊಡಲಾಗಿತ್ತು. ಸದರಿಯವರು ಡಾ. ಯಶವಂತ ಡೋಂಗ್ರೆಯವರ ಮಾರ್ಗ ದರ್ಶನದಲ್ಲಿ ಡಾ. ಎಂ.ಇಂದಿರಾರವರ ನೇತೃತ್ವದಲ್ಲಿ ಡಾ. ಉಮಾ, ಡಾ.ಎಂ.ಮೀರ, ಡಾ. ನಿಂಗಮ್ಮ ಇವರುಗಳ ಸಹಯೋಗದೊಂದಿಗೆ ಹಲವು ಸಿಬ್ಬಂದಿಯವರ ಸಹಾಯದಲ್ಲಿ ರಾಜ್ಯದ 204ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳನ್ನು ಭೇಟಿ ಮಾಡಿ ತಮ್ಮ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ. ದಿನಾಂಕ : 12-06-2018ರಂದು ತಮ್ಮ ವರದಿಯ ಹೆಚ್ಚುವರಿ ಭಾಗವನ್ನು ಸಲ್ಲಿಸಿ ಡಾ. ಎಂ. ಮೀರರವರು ತಮ್ಮ ಅಭಿಪ್ರಾಯವನ್ನು ಹೀಗೆ ತಿಳಿಸಿದ್ದಾರೆ.

## Report on Self Reliant Act in India, ' VAMNICOM, Pune, 2017

"The autonomy and flexibility entrusted with the Souharda Cooperatives, through the Karnataka Souharda SahakariAct-1997, and the strong enabling environment coupled with timely guidance provided by KSSFCL, Bangalore has made some of the progressive-thinking Souharda Cooperatives to conceive and effectively implement innovative/ unique business practices, and to extend variety of benefits to their customers (which were unheard of in cooperative sector earlier) "

**Concluding remarks :** There are a host of other factors that are very positive. The potential is huge; sooner or later these Co-operatives tend to grow with need based activities and they are the pioneers in real people driven Co-operatives. Good Souhardha Co-operatives are generally more innovative, take business decisions quickly, exhibit better efficiency and performance standards; most importantly have demonstrated that Co-operatives can Survive and thrive without the hand-holding of the government. This is indeed a much needed tonic for the Co-operative movement in the country.

# ಕರ್ನಾಟಕ ಸೌಹಾರ್ದ ಸಹಕಾರಿ ಮಾದರಿ ದೇಶಾದ್ಯಂತ ವಿಸ್ತರಿಸುವುದು ಅಗತ್ಯ

## (Karnataka souharda Model should be extended to entire country) - ಡಾ. ಎಂ.ಮೀರ

ಸೌಹಾರ್ದ ಸಹಕಾರಿಯು ಒಂದು ಉತ್ತಮ ಮಾದರಿಯಾಗಿದ್ದು, ದೇಶದ ಎಲ್ಲೆಡೆ ಈ ಮಾದರಿ ಅನುಷ್ಠಾನಗೊಳ್ಳುವ ಅಗತ್ಯವಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಡಾ. ಎಂ. ಮೀರ ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ತೃತೀಯ ಕ್ಷೇತ್ರ ಸಂಶೋಧನಾ ಕೇಂದ್ರದ ವತಿಯಿಂದ ನಡೆಸಿದ ಕರ್ನಾಟಕದ ಸೌಹಾರ್ದ ಸಹಕಾರಿಗಳ ಬಗೆಗಿನ ಸ್ವತಂತ್ರ ಅಧ್ಯಯನದ ಸಹಸಂಶೋಧಕರಾದ ಇವರು ದಿನಾಂಕ: 12.06.2018ರಂದು ಸಂಶೋಧನಾ ಅಧ್ಯಯನದ ಅಂತಿಮ ವರದಿಯ ಹೆಚ್ಚುವರಿ ಭಾಗವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರಿಗೆ ಹಸ್ತಾಂತರಿಸಿ ಮಾತನಾಡಿದರು. ಅಧ್ಯಯನ ತಂಡದ ಪರವಾಗಿ ಮಾತನಾಡಿದ ಅವರು ಈ ಕೆಳಗಿನಂತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

### ಸೌಹಾರ್ದ ಸಹಕಾರಿ ಮಾದರಿ ಏಕೆ ಅಗತ್ಯ (Why it is model)

ಸಹಕಾರಿ ಸಂಘಟನೆಗಳು ಸ್ವತಂತ್ರವಾಗಿ, ಸರಕಾರದ ಆಶ್ರಯ, ಅನುದಾನದ ಮೇಲೆ ಅವಲಂಬಿತವಾಗದೇ ಉತ್ತಮ ಆರ್ಥಿಕ ಸಂಘಟನೆಗಳಾಗಿ ವ್ಯವಹಾರಿಕ ಸ್ವಾತಂತ್ರವನ್ನು ಹೊಂದಿ ಸಾಂಪ್ರದಾಯಿಕತೆಯಿಂದ ಹೊರಬಂದು ಆಧುನಿಕತೆಯನ್ನು ಮೈಗೂಡಿಸಿಕೊಂಡು ಕಾರ್ಯನಿರ್ವಹಿಸುವುದು ಸಾಧ್ಯವೆನ್ನುವುದನ್ನು ಸೌಹಾರ್ದ ಸಹಕಾರಿಗಳು ಶೃತಪಡಿಸಿವೆ. ದೇಶದ ಎಲ್ಲೆಡೆ ಇಂತಹ ಪ್ರಯತ್ನಗಳು ಆರಂಭವಾದರೆ, ಖಂಡಿತವಾಗಿಯೂ 97ನೇ ಸಂವಿಧಾನ ತಿದ್ದುಪಡಿಯ ಮೂಲ ಆಶಯವಾದ "ಕಾರ್ಯಸ್ವಾತಂತ್ರ ಹೊಂದಿದ, ಜನರ ಅಗತ್ಯತೆಯ ಆಧಾರದಲ್ಲಿ ರೂಪಿತವಾದ, ಸದಸ್ಯ ಕೇಂದ್ರಿತ" ಸಹಕಾರಿ ಸಂಘಟನೆಗಳು ರೂಪುಗೊಳ್ಳುವುದು ಸಾಧ್ಯವಾಗುತ್ತದೆ.

### ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿಯ ಉತ್ತಮ ಬೆಳವಣಿಗೆಗೆ ಏನು ಮಾಡಬೇಕಿದೆ?

ಮೊದಲನೆಯದಾಗಿ ಸೌಹಾರ್ದ ಸಹಕಾರಿ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ಮಾಡಿ ಹೆಚ್ಚಿನ ಕಾರ್ಯ ಸ್ವಾತಂತ್ರ ದೊರೆಯುವಂತೆ ಮಾಡಬೇಕಿದೆ. ಸಂಯುಕ್ತ ಸಹಕಾರಿಯ ನಿರ್ದೇಶಕರ ಅವಧಿ, ಸೌಹಾರ್ದ ಸಹಕಾರಿಗಳು ಸದಸ್ಯರಲ್ಲದ ಮೂಲಗಳಿಂದ ನಿಧಿ ಸಂಗ್ರಹಿಸಲು ಅವಕಾಶ, ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ಸಂಘಟಿಸಲು ಅವಕಾಶ ಮತ್ತು ಕೆಲವು ರೀತಿಯ ಸೌಹಾರ್ದ ಸಹಕಾರಿಗಳನ್ನು ನೋಂದಾಯಿಸಲು ಇರುವ ಮಿತಿಯನ್ನು ತೆಗೆಯುವುದು ಇಂತಹ ತಿದ್ದುಪಡಿಗಳು ಬಹುಮುಖ್ಯ. ನಮ್ಮ ವರದಿಯಲ್ಲಿ ತಿಳಿಸಿರುವಂತೆ ಸೌಹಾರ್ದ ಸಹಕಾರಿ ಕಾಯಿದೆಯಲ್ಲಿ ತಿದ್ದುಪಡಿ ತರಲು ಸರಕಾರ ಕ್ರಮ ಕೈಗೊಳ್ಳುವುದೆಂದು ಆಶಿಸುತ್ತೇವೆ.

### ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಪಾತ್ರ (Role of KSSFCL)

ಕೆಲವು ರಾಜ್ಯಗಳಲ್ಲಿ ಸೌಹಾರ್ದ ಸಹಕಾರಿ ಕಾಯಿದೆಯ ಮಾದರಿಯ ಕಾಯಿದೆಗಳಿದ್ದು, ಸ್ವತಂತ್ರ ಸಹಕಾರಿ ಸಂಘಟನೆಗಳು ಕಾರ್ಯ ನಿರ್ವಹಿಸುತ್ತಿವೆಯಾದರೂ, ಸಂಯುಕ್ತ ಸಹಕಾರಿಯು ಸ್ಥಾಪನೆಯಾಗಿರುವುದು ಕರ್ನಾಟಕದಲ್ಲಿ ಮಾತ್ರ. ಸ್ವಯಂ ಆಡಳಿತದ (Self Governance) ಆಶಯ ಈಡೇರಬೇಕಾದರೆ ಸಂಯುಕ್ತ ಸಹಕಾರಿಯ ಪಾತ್ರ ಬಹಳ ಮುಖ್ಯ. ಕರ್ನಾಟಕದಲ್ಲಿ ಸಂಯುಕ್ತ ಸಹಕಾರಿಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ತರಬೇತಿ, ಸಹಕಾರಿ ಕಾನೂನಿನ ಸಲಹೆಗಳು, ಹೊಸ ಸಹಕಾರಿಗಳಿಗೆ ಮಾರ್ಗದರ್ಶನ ಮತ್ತು ಹೊಸ ವ್ಯವಹಾರ ಸಂಘಟನೆಗೆ ಪ್ರೋತ್ಸಾಹ ಇಂತಹ ಕೆಲಸಗಳು ಸದಸ್ಯ ಸಹಕಾರಿಗಳ ಮೆಚ್ಚುಗೆ ಗಳಿಸಿವೆ.

ಸಂಯುಕ್ತ ಸಹಕಾರಿಗೆ ಮೂರು ವಿಭಿನ್ನ ಪಾತ್ರಗಳಿವೆ ಎಂದು ಭಾವಿಸುತ್ತೇನೆ. ಮೊದಲನೆಯದು Co-operative Promotion. ಈ ಕೆಲಸವನ್ನು ಕರ್ನಾಟಕದ ಸಂಯುಕ್ತ ಸಹಕಾರಿಯು ಉತ್ತಮವಾಗಿ ನಿರ್ವಹಿಸುತ್ತಿದೆ. ಎರಡನೆಯದು Liaisoning with government – ಸರಕಾರದೊಂದಿಗೆ ಸಂವಾದ, ಬದಲಾವಣೆಗಳಿಗೆ, ಹೊಸ ನೀತಿ ಕಾನೂನಿನ ತಿದ್ದುಪಡಿಗೆ ಒತ್ತು ನೀಡುವುದು ಇತ್ಯಾದಿ. ಈ ದಿಸೆಯಲ್ಲಿ ಸಂಯುಕ್ತ ಸಹಕಾರಿಯು ಉತ್ತಮ ಹೆಜ್ಜೆ ಇಡುತ್ತಿದೆ. ಮುಖ್ಯವಾಗಿ Liaisoning ಪಾತ್ರದ ಪ್ರಮುಖತೆಯನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ ಮತ್ತು ಈ ದಿಸೆಯಲ್ಲಿ ಪ್ರಯತ್ನಶೀಲವಾಗಿದೆ. ಮೂರನೆಯದು ಹೊಸ ವ್ಯವಹಾರಗಳನ್ನು ಹುಟ್ಟು ಹಾಕುವುದು (Promotion of New business) ಈ ಪಾತ್ರದ ಬಗೆಗೆ ಇನ್ನೂ ಹೆಚ್ಚಿನ ಅರಿವು ಮತ್ತು ಒತ್ತು ನೀಡುವ ಅಗತ್ಯವಿದೆ.

### ಶಿಕ್ಷಣ ಮತ್ತು ತರಬೇತಿ

ನಮ್ಮ ಅಧ್ಯಯನದಲ್ಲಿ ನಾವು ಗಮನಿಸಿರುವಂತೆ ಸಹಕಾರಿ ಶಿಕ್ಷಣ ಮತ್ತು ತರಬೇತಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ಶ್ಲಾಘನೀಯ ಕೆಲಸ ಮಾಡುತ್ತಿದೆ. ಸೌಹಾರ್ದ ಸಹಕಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರು ತರಬೇತಿಗಳು ಅಗತ್ಯಗಳಿಗನುಸಾರವಾಗಿ ಇವೆಯೆಂದೂ, ಯಾವುದೇ ಹೊಸ ಬದಲಾವಣೆಗಳಾದಾಗ ತರಬೇತಿ ನಡೆಸಲಾಗಿದೆಯೆಂದೂ ತಿಳಿಸಿರುವುದಲ್ಲದೇ, ತರಬೇತಿಯ ಗುಣಮಟ್ಟದ ಬಗ್ಗೆಯೂ ಸಕಾರಾತ್ಮಕ ಅಭಿಪ್ರಾಯ ಹೊಂದಿದ್ದಾರೆ.

ಆದರೆ, ಸದಸ್ಯರ ಶಿಕ್ಷಣ ಮಾತ್ರ ಇನ್ನೂ ಹೆಚ್ಚಿನ ಕ್ಷಮತೆಯಿಂದ ನಡೆಯಬೇಕಿದೆ. ದೊಡ್ಡ ಸಂಖ್ಯೆಯಲ್ಲಿರುವ ಸದಸ್ಯರ ಶಿಕ್ಷಣ ಕಠಿಣವಾದುದೇ. ಇದನ್ನು ರಾಜ್ಯ ಅಥವಾ ಜಿಲ್ಲಾ ಮಟ್ಟದಲ್ಲಿ

ನಡೆಸುವುದರಿಂದ ಎಲ್ಲ ಸದಸ್ಯರನ್ನು ತಲುಪುವುದು ಸಾಧ್ಯವಿಲ್ಲ. ಆದುದರಿಂದ ಪ್ರತಿ ಸಹಕಾರಿಯ ಮಟ್ಟದಲ್ಲಿ ಸದಸ್ಯರ ಶಿಕ್ಷಣ/ತರಬೇತಿ ನಡೆಯುವಂತಾಗಬೇಕು. ವರ್ಷದಲ್ಲಿ ಕನಿಷ್ಠ ಎರಡು ಬಾರಿ ಸಹಕಾರಿಯ ಸದಸ್ಯರು ಒಂದೆಡೆ ಸೇರುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಆ ಸಂದರ್ಭದಲ್ಲಿ ಸದಸ್ಯರುಗಳಿಗೆ ಶಿಕ್ಷಣದ ಕಾರ್ಯಕ್ರಮವೂ ನಡೆಯುವಂತಾಗಬೇಕು. ಪ್ರತಿ ಸಹಕಾರಿಯ ಮಟ್ಟದಲ್ಲಿ ಸದಸ್ಯ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಒಂದು ಮೊತ್ತವನ್ನು ಪ್ರತಿ ವರ್ಷ ವಿನಿಯೋಗಿಸುವಂತೆ ಯೋಜನೆ ಹಮ್ಮಿಕೊಳ್ಳಬೇಕು. ದೀರ್ಘಾವಧಿಯಲ್ಲಿ ಸೌಹಾರ್ದ ಸಹಕಾರಿಯು ಸ್ಥಿರತೆ ಸಾಧಿಸಬೇಕಾದರೆ, ಉತ್ತಮ ಜ್ಞಾನ ಹೊಂದಿದ ಸದಸ್ಯರ ಅಗತ್ಯವಿದೆ. ಇದು ಸಾಧ್ಯವಾಗಬೇಕಾದರೆ ಶಿಕ್ಷಣ/ತರಬೇತಿ ಪ್ರತಿ ಸದಸ್ಯನಿಗೂ ದೊರೆಯುವಂತಾಗಬೇಕು. ಈ ಬಗ್ಗೆ ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳೊಂದಿಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಿದಲ್ಲಿ ಖಂಡಿತ ಉತ್ತಮ ಫಲಿತಾಂಶ ದೊರೆಯುತ್ತದೆ.

### ಸಂಯುಕ್ತ ಸಹಕಾರಿಯ ಹೊಸ ಪಾತ್ರಗಳು

ಸೌಹಾರ್ದ ಸಹಕಾರಿ ಕಾಯಿದೆಯನ್ವಯ ಸಂಯುಕ್ತ ಸಹಕಾರಿಗೆ ಹಲವು ಅಭಿವೃದ್ಧಿ ಮತ್ತು ನಿಯಂತ್ರಣದ ಪಾತ್ರಗಳಿವೆ. ಆದರೆ ಸಹಕಾರಿ ಸಂಸ್ಥೆಗಳು ವ್ಯವಹಾರ ಸಂಸ್ಥೆಗಳಾದ್ದರಿಂದ ಮತ್ತು ವ್ಯವಹಾರ ಸಂಸ್ಥೆಗಳಿಗೆ ಕ್ಷಮತೆ ಮತ್ತು ಗಾತ್ರ ಎರಡೂ ಮುಖ್ಯವಾದುದರಿಂದ ಸಂಯುಕ್ತ ಸಹಕಾರಿ ಅಥವಾ ಅದರ ಒಡೆತನದಲ್ಲಿ ಆರಂಭ ಮಾಡಬಹುದಾದ ಯಾವುದೇ ಸಂಸ್ಥೆ ರಾಜ್ಯ ಮಟ್ಟದಲ್ಲಿ ವ್ಯವಹಾರಗಳನ್ನು ಸಂಘಟಿಸುವಂತೆ ಮಾಡುವುದೂ ಮುಖ್ಯ. ಉದಾಹರಣೆಗೆ ಎಲ್ಲ ಸದಸ್ಯ ಸಹಕಾರಿಗಳೂ ಉಪಯೋಗಿಸಲು ಸಾಧ್ಯವಾಗುವಂತೆ ಒಂದೇ ಕಂಪ್ಯೂಟರ್ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ಸಂಯುಕ್ತ ಸಹಕಾರಿಯ ವತಿಯಿಂದ ನಿರ್ವಹಿಸುವುದು, ಸಹಕಾರಿ ಬ್ರಾಂಡ್‌ನ ವಸ್ತುಗಳ ಅಭಿವೃದ್ಧಿ ಮತ್ತು ವಿತರಣೆ, ರಾಜ್ಯಮಟ್ಟದ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಸ್ಥಾಪನೆ, ಸದಸ್ಯ ಸಹಕಾರಿಗಳ ಪರವಾಗಿ ಉತ್ಪಾದಕರೊಡನೆ ಚರ್ಚಿಸಿ ಬೆಲೆಗಳ ಹೊಂದಾಣಿಕೆ ಮಾಡುವುದು ಇಂತಹ ಹಲವು ಹೊಸ ಪಾತ್ರಗಳನ್ನು ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಿದೆ.

### ನಾಯಕತ್ವ ಬೆಳವಣಿಗೆಗೆ ಒತ್ತು ನೀಡುವುದು

ನಮ್ಮ ಅಧ್ಯಯನದ ಸಂದರ್ಭದಲ್ಲಿ ಗಮನಿಸಿದ ಒಂದು ಪ್ರಮುಖ ಅಂಶವೆಂದರೆ ಎರಡನೇ ತಲೆಮಾರಿನ ನಾಯಕರುಗಳ ಅಗತ್ಯತೆ. ಹಲವು ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ, ಒಬ್ಬರೇ ನಾಯಕರನ್ನು ಅವಲಂಬಿಸಿವೆ. ಆದುದರಿಂದ ಹೊಸ ನಾಯಕತ್ವವು ಮೂಡಿ ಬರಲು ಅನುವಾಗುವಂತೆ ಪ್ರತಿ ಬಾರಿ ಚುನಾವಣೆಗಳು ನಡೆದಾಗಲೂ ಕನಿಷ್ಠ ಶೇ.20ರಷ್ಟು ಯುವಕರು ಆಡಳಿತ ಮಂಡಲಿಯ ಸದಸ್ಯರಾಗುವಂತೆ ಮತ್ತು ಕನಿಷ್ಠ ಶೇ.10 ರಷ್ಟು ಪ್ರಥಮ ಬಾರಿಗೆ ಆಡಳಿತ ಮಂಡಲಿಯ ಸದಸ್ಯರಾಗುವಂತೆ ನೋಡಿಕೊಳ್ಳಬೇಕು. ನಿರಂತರವಾಗಿ ಎರಡು ಅವಧಿಗಿಂತ ಹೆಚ್ಚು ಯಾವ ಒಬ್ಬರು ಸಹಕಾರಿಯ ಅಧ್ಯಕ್ಷರಾಗಿ ಮುಂದುವರೆಯದಂತೆಯೂ ನೋಡಿಕೊಳ್ಳಬೇಕು.

ಆಡಳಿತ ಮಂಡಲಿಯ ಸದಸ್ಯರು ಉತ್ತಮ ಶೈಕ್ಷಣಿಕ ಅರ್ಹತೆ ಹೊಂದಿರುವುದು, ಮಹಿಳಾ ಸದಸ್ಯರು ಆಡಳಿತ ಮಂಡಲಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದು ಮುಂತಾದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಒಟ್ಟಾರೆಯಾಗಿ ಒಂದು ದಶಕದ ಅವಧಿಯಲ್ಲಿ ಹೊಸ ತಲೆಮಾರಿನ ನಾಯಕರು ಸಂಘವನ್ನು ಮುನ್ನಡೆಸಲು ಸಾಧ್ಯವಾಗುವಂತೆ ನಾಯಕತ್ವ ಬೆಳವಣಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು.


### ಡಾ. ಎಂ.ಮೀರ



ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಕೇಂದ್ರದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿರುವ ಡಾ. ಎಂ. ಮೀರ ರವರು ಸೌಹಾರ್ದ ಸಹಕಾರಿಗಳ ಬಗೆಗಿನ ಅಧ್ಯಯನದಲ್ಲಿ ಸಹ ಸಂಶೋಧಕರಾಗಿ ಕೆಲಸ ನಿರ್ವಹಿಸಿದ್ದಾರೆ. ಸಹಕಾರ ಮತ್ತು ಮಹಿಳಾ ಸಬಲೀಕರಣ ಕುರಿತಂತೆ, ಕರ್ನಾಟಕದ ಹೈನುಗಾರಿಕಾ ಸಹಕಾರ ಸಂಘಗಳ ಪಾತ್ರ ಕುರಿತಂತೆ ಉನ್ನತ ಸಂಶೋಧನೆ ನಡೆಸಿ, ಪಿಹೆಚ್‌ಡಿ ಪದವಿ ಪಡೆದಿದ್ದಾರೆ.

ಇಸ್ರೇಲ್ ಸರಕಾರದ ಮ್ಯಷಾವ್ ಶಿಷ್ಯ ವೇತನ ಪಡೆದು, ಭಾರತದ ಪ್ರತಿನಿಧಿಯಾಗಿ ಇಸ್ರೇಲ್ ದೇಶಕ್ಕೆ ತೆರಳಿ ತರಬೇತಿ ಪಡೆದಿರುವುದರ ಜೊತೆಗೆ ಅಲ್ಲಿಯ ಸಹಕಾರ ಚಳುವಳಿಯ ಬಗ್ಗೆಯೂ ಅಧ್ಯಯನ ನಡೆಸಿದ್ದಾರೆ. ವಿಶ್ವವಿದ್ಯಾನಿಲಯವನ್ನು ಸೇರುವ ಮೊದಲು ಒಂದು ದಶಕಕ್ಕೂ ಅಧಿಕ ಕಾಲ ಅಂತರರಾಷ್ಟ್ರೀಯ ಎನ್‌ಜಿಒಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಕುರಿತಂತೆ ಕೆಲಸ ನಿರ್ವಹಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ತೃತೀಯ ಕ್ಷೇತ್ರ ಸಂಶೋಧನಾ ಕೇಂದ್ರದ ಸಂಯೋಜನಾ ಸಮಿತಿಯ ಸದಸ್ಯರಾಗಿ ಮತ್ತು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವಿಭಾಗದ ವಿಶೇಷಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಿರುವ ಡಾ. ಎಂ.ಮೀರಾರವರಿಗೆ ಸಹಕಾರ ಕ್ಷೇತ್ರದಲ್ಲಿ ಯುವ ಜನರ ಮತ್ತು ಮಹಿಳೆಯರ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ವಿಶೇಷ ಅಧ್ಯಯನ ಮತ್ತು ಸಂಶೋಧನಾ ಆಸಕ್ತಿಗಳಿವೆ.



# 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ

## ಕಲಿಕೆ ನಿರಂತರ, ಅದನ್ನು ಜೀವನದಲ್ಲಿ ಅಳವಡಿಸಿ ವ್ಯಕ್ತಿತ್ವ ವಿಕಸನಪಡಿಸಿಕೊಳ್ಳಿ - ಶ್ರೀ ಎಂ.ಡಿ.ನರಸಿಂಹಮೂರ್ತಿ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 19ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರವನ್ನು ದಿನಾಂಕ : 06.06.2018 ರಿಂದ 15.06.2018 ರವರೆಗೆ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.



ಉದ್ಘಾಟನೆ



ತರಬೇತಿಯಲ್ಲಿ ಶಿಬಿರಾರ್ಥಿಗಳು

ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 06.06.2018ರಂದು ಬೆಂಗಳೂರು ಪ್ರಾಂತದ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಎಂ.ಡಿ. ನರಸಿಂಹಮೂರ್ತಿರವರು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಹಕಾರಿಗಳ ಸಿಬ್ಬಂದಿಗಳಿಗೆ ಹಮ್ಮಿಕೊಳ್ಳುತ್ತಿರುವ ತರಬೇತಿಗಳು ಉತ್ತಮ ಗುಣಮಟ್ಟದ ತರಬೇತಿಗಳಿಂದಾಗಿ ಸಹಕಾರ ಕ್ಷೇತ್ರಕ್ಕೆ ಉಪಯೋಗವಾಗಿದೆ.

ಒಂದು ಕ್ಷೇತ್ರದಲ್ಲಿ ನಿರಂತರವಾಗಿ ಕೆಲಸ ನಿರ್ವಹಿಸುವಾಗ ನಿಧಾನಗತಿಯಲ್ಲಿ ಕಾರ್ಯಕ್ಷಮತೆ ಕುಂಠಿತವಾಗುವುದನ್ನು ತಡೆಗಟ್ಟಲು ಇಂತಹ ತರಬೇತಿಗಳಲ್ಲಿ ಭಾಗವಹಿಸುವಿಕೆಯಿಂದ ನಮ್ಮ ಕಾರ್ಯಕ್ಕೆ ವೇಗ ಸಿಗುತ್ತದೆ.

ಪ್ರತಿಯೊಬ್ಬ ವ್ಯಕ್ತಿಗೆ ಕಲಿಕೆ ಎಂಬುವುದು ನಿರಂತರ, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಾವು ಪರಿಪೂರ್ಣತೆ ಕಡೆಗೆ ಹೋಗಲು ಸಾಧ್ಯ. ಆದ್ದರಿಂದ, ಕಲಿಕೆಯನ್ನು ನಿರಂತರವಾಗಿ ಜೀವನದಲ್ಲಿ ಅಳವಡಿಸಿಕೊಳುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ವ್ಯಕ್ತಿತ್ವ ವಿಕಸನ ಹೊಂದಲು ಶಿಬಿರಾರ್ಥಿಗಳಿಗೆ ಕರೆ ನೀಡಿದರು.

## ತರಬೇತಿಯ ಲಾಭ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯಲ್ಲಿ ಕಾಣಬಹುದಾಗಿದೆ - ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ 10 ದಿನಗಳ ತರಬೇತಿ ಸಹಕಾರ ಕ್ಷೇತ್ರದಲ್ಲಿ ಒಂದು ಮಾದರಿ ತರಬೇತಿಯಾಗಿದೆ. ಇದಕ್ಕೆ ಸಾಕ್ಷಿ ಈ 19ನೇ ತಂಡ. ಇಲ್ಲಿ ಪಡೆದಿರುವ ತರಬೇತಿಯಿಂದಾಗಿ ಇಂದು ನೂರಾರು ಶಿಬಿರಾರ್ಥಿಗಳು ಯಶಸ್ವಿಯಾಗಿ ತಮ್ಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇದರಿಂದಾಗಿ ಹಲವು ಸಹಕಾರಿಗಳು ಸದಸ್ಯರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವುದರ ಮುಖಾಂತರ ಸಹಕಾರಿಗಳ ಬೆಳವಣಿಗೆಗೆ ಪೂರಕವಾಗಿದೆ. ಆದ್ದರಿಂದ, ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ತರಬೇತಿಗಳಿಗೆ ಭಾಗವಹಿಸಿ ಲಾಭವನ್ನು ಪಡೆದುಕೊಳ್ಳಲು ಕರೆ ನೀಡಿದರು.

ಮುಖ್ಯ ಅಥಿತಿಗಳಾಗಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ



ನಿರ್ದೇಶಕರಾದ ಡಾ. ಆರ್.ಇಳಂಗೋವನ್ ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ಕುರುಹಿನಶೆಟ್ಟಿ ಸೌಹಾರ್ದ ಸಹಕಾರಿಯ ಸಿಬ್ಬಂದಿಯಾದ ಕು. ದಿವ್ಯಾರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ಹಾಗೂ ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ಶಂಕರರವರು ನಡೆಸಿಕೊಟ್ಟರು. ಕಿರಿಯ ಅಧಿಕಾರಿ ಶ್ರೀ ಪ್ರಭಯ್ಯ ಹಿರೇಮಠರವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

**ಪ್ರತಿ ದಿನದ ಕಾರ್ಯಕ್ರಮಗಳು :** ಪ್ರತಿ ದಿನ ಬೆಳಿಗ್ಗೆ 6.00 ಗಂಟೆಗೆ ಯೋಗ ಶಿಕ್ಷಣದಿಂದ ಪ್ರಾರಂಭವಾಗುತ್ತಿದ್ದ ಈ ತರಬೇತಿಯ 10 ದಿನಗಳ ತರಬೇತಿಯ ಅವಧಿಯಲ್ಲಿ ಶಿಬಿರಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಗೆ ಅವಕಾಶವಾಗುವಂತೆ ವಿವಿಧ ತಂಡಗಳ ರಚನೆ, ತಂಡಗಳಿಂದ ಪ್ರಾರ್ಥನೆ, ಸ್ವಾಗತ, ಮುಖ್ಯ ಅತಿಥಿಗಳ ಪರಿಚಯ, ವಂದನಾರ್ಪಣೆ ಮತ್ತು ಪ್ರತಿ ದಿನದ ವರದಿಗಳ ಸಿದ್ಧಪಡಿಸುವಿಕೆಗಳನ್ನು ವಹಿಸಿಕೊಡಲಾಗಿತ್ತು. ಉತ್ತಮ ಅಧ್ಯಯನ ಸಾಹಿತ್ಯವನ್ನು ಒದಗಿಸಲಾಗಿತ್ತು. ಪ್ರತಿ ದಿನ ಯೋಗ ಶಿಕ್ಷಣವನ್ನು ಡಾ. ಹರೀಶರವರು ನಡೆಸಿಕೊಟ್ಟರು.



ಯೋಗ ಶಿಕ್ಷಣ



ಮೌನ ಭೋಜನ

**ತರಬೇತಿ ವಿಷಯಗಳು :** ಸೌಹಾರ್ದ ಸಹಕಾರಿಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಲು ಸಂಪನ್ಮೂಲ ವ್ಯಕ್ತಿಗಳಿಂದ ಸಹಕಾರ, ಸಹಕಾರ ತತ್ವಗಳು, ಸಹಕಾರಿ ಚಳುವಳಿ ನಡೆದು ಬಂದ ದಾರಿ ಹಾಗೂ ಪ್ರಚಲಿತ ವಿಷಯಗಳು, ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು, ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಹಕಾರ ಸಂಘಗಳ ಕಾಯ್ದೆಯ ಪ್ರಮುಖ ವ್ಯತ್ಯಾಸಗಳು, ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಮುಖ ಅಂಶಗಳು, ಪ್ರಾಯೋಗಿಕವಾಗಿ – ಸಹಕಾರಿಗಳ ಆಡಳಿತ ವ್ಯವಸ್ಥೆ, ಸಭೆಗಳು, ಸಭೆಗಳನ್ನು ನಡೆಸುವ ವಿಧಾನ, ಕೋರಂ, ನಡವಳಿಗಳನ್ನು ದಾಖಲು ಮಾಡುವುದು, ಡಿಜಿಟಲೀಕರಣ, ಆರ್ಥಿಕ ಅಭಿವೃದ್ಧಿ, ಆಡಳಿತದಲ್ಲಿ ಪಾರದರ್ಶಕತೆ, ಕಛೇರಿ ಆಡಳಿತ, ಕಡತಗಳ ನಿರ್ವಹಣೆ, ಸಮಯ ನಿರ್ವಹಣೆ, ಪರಿಣಾಮಕಾರಿ ಸಂವಹನ ಹಾಗೂ ಸಾಲ ವಸೂಲಾತಿ ಕ್ರಮಗಳು, ಮಾರಾಟ ಅಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ಧಾರಿಗಳು, ಗುಣಾತ್ಮಕ ಸಾಲಗಳ ದಾಖಲಾತಿಗಳ ನಿರ್ವಹಣೆ, ವ್ಯಕ್ತಿತ್ವ ವಿಕಸನದ ವಿವಿಧ ಹಂತಗಳು, ಗ್ರಾಹಕ ಸೇವೆಗಳ ನಿರ್ವಹಣೆ, ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳು, ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ., ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ, ಲೆಕ್ಕಪರಿಶೋಧನೆ ಸಿದ್ಧತೆ ಹಾಗೂ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿ ಸಿದ್ಧಪಡಿಸುವುದು ಮತ್ತು ಅಂತಿಮ ಲೆಕ್ಕಪತ್ರಗಳನ್ನು ಹಾಗೂ ಬ್ಯಾಂಕ್ ಸಮನ್ವಯ ಪಟ್ಟಿ ಸಿದ್ಧಪಡಿಸುವುದು, ಸೌಹಾರ್ದ ಸಹಕಾರಿಗಳಲ್ಲಿ ಕಾರ್ಯಯೋಜನೆ, ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಸಂವಾದ ಹಾಗೂ ಸಂಪನ್ಮೂಲ ಸಂಗ್ರಹ – ಲಾಭದಾಯಕ ಹೂಡಿಕೆ, ಬಡ್ಡಿಯೇತರ ಆದಾಯಗಳ ಮೂಲಗಳು ಹಾಗೂ ಹಣಕಾಸಿನ ನಿರ್ವಹಣೆಗಳು ಹಾಗೂ ಮಾನವೀಯ ಮೌಲ್ಯಗಳ ನಿರ್ವಹಣೆ, ಶಕ್ತಿ ಸಾಮರ್ಥ್ಯ, ಸವಾಲು, ದುರ್ಬಲತೆ ಹಾಗೂ ಅವಕಾಶಗಳು, ಇ–ಸ್ಟ್ಯಾಂಪಿಂಗ್ ಕಾರ್ಯನಿರ್ವಹಣೆ ಮಾಹಿತಿ, ಅನೌಪಚಾರಿಕ ಅವಧಿಯಲ್ಲಿ ಯುವಕರು ಸಹಕಾರ ಕ್ಷೇತ್ರದಲ್ಲಿ ಭಾಗವಹಿಸುವಿಕೆಯ ಮಹತ್ವ ಹಾಗೂ ಅಧ್ಯಯನ ಪ್ರವಾಸ, ಬೆಂಗಳೂರು ನಗರದ ಜೀವನ ಸಬಲತೆಯ ಕುರಿತು ಶಿಬಿರಾರ್ಥಿಗಳಿಗೆ ತಿಳಿಸಿ ಕೊಡುವಂತಹ ಪ್ರಯತ್ನವನ್ನು ಮಾಡಲಾಗಿದೆ.

## ಸಮಾರೋಪ ಕಾರ್ಯಕ್ರಮ : ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರು ಸೌಹಾರ್ದ ಸಹಕಾರಿ ಕ್ಷೇತ್ರದ ಸರದಾರರಾಗಿರಬೇಕು – ಶ್ರೀ ಎಸ್.ಆರ್.ಸತೀಶ್ಚಂದ್ರ




ಸಮಾರೋಪ ಭಾಷಣಕಾರರಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರರವರು ಮಾತನಾಡಿ ಸಹಕಾರ ಕ್ಷೇತ್ರದಲ್ಲಿ ಸಿಬ್ಬಂದಿಯವರು ಮೊದಲು ತಮ್ಮ ಸದಸ್ಯರಿಗೆ ಪ್ರಾಮಾಣಿಕ ಸೇವೆ ನೀಡಲು ಮುಂದಾಗಬೇಕು. ಸೌಹಾರ್ದ ಸಹಕಾರಿ ಕ್ಷೇತ್ರ ಸಹಕಾರ ಕ್ಷೇತ್ರದಲ್ಲಿ ನೂತನ ಪ್ರಯೋಗ. ಈ ಸೌಹಾರ್ದ ಸಹಕಾರಿ ಕ್ಷೇತ್ರ ಯಶಸ್ವಿಯಾಗಿದೆ. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಾಂಪ್ರದಾಯಿಕ ಸಹಕಾರ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 100 ವರ್ಷಗಳ ಇತಿಹಾಸವಿರುವ ಸಹಕಾರ ಸಂಸ್ಥೆಗಳಿಗಿಂತಲೂ ಕೇವಲ 8–10 ವರ್ಷಗಳ ಅವಧಿಯಲ್ಲಿ ಉತ್ತಮ ಸಾಧನೆಯನ್ನು ಮಾಡಿರುವುದು ಸೌಹಾರ್ದ ಸಹಕಾರಿಗಳಿಗೆ ಹೆಮ್ಮೆಯ ವಿಷಯ.

ಈ ಕ್ಷೇತ್ರವನ್ನು ಉಳಿಸಬೇಕು, ಬೆಳೆಸಬೇಕು ಹಾಗೂ ನಮ್ಮ ಶ್ರೇಷ್ಠತೆಯನ್ನು ಸಾರಬೇಕಾದರೆ ಉತ್ತಮ ಪರಿಶ್ರಮದ ಅಗತ್ಯವಿದೆ. ಸೌಹಾರ್ದ ಸಹಕಾರಿ ಸಿಬ್ಬಂದಿಯವರಿಗೆ ಉತ್ತಮ ಭವಿಷ್ಯವಿದೆ. ಈ ತರಬೇತಿಯಿಂದ ತಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡು ಸೌಹಾರ್ದ ಸಹಕಾರಿಗಳಿಗೆ ಜವಾಬ್ದಾರಿಯಾಗದೇ ಆಸ್ತಿಯಂತಾಗಬೇಕು. ಹೊಸ ಹೊಸ ವಿಚಾರಗಳನ್ನು ಅಳವಡಿಸಿಕೊಂಡು ಹೊಸ ಹೊಸ ಸೌಹಾರ್ದ ಸಹಕಾರಿಗಳನ್ನು ಹುಟ್ಟು ಹಾಕುವ ಕ್ಷಮತೆಯನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು. ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಡಾ. ಆರ್. ಇಳಂಗೋವನ್ ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭಾಗವಹಿಸಿ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನಗಳನ್ನು ವಿತರಿಸಿದರು. ತರಬೇತಿಯಲ್ಲಿ 41 ಸೌಹಾರ್ದ ಸಹಕಾರಿಗಳಿಂದ 55 ಶಿಬಿರಾರ್ಥಿಗಳು ಭಾಗವಹಿಸಿದ್ದರು.



ಬಹುಮಾನ ವಿತರಣೆ



ಬಹುಮಾನ ವಿತರಣೆ



ಪ್ರಮಾಣ ಪತ್ರ ವಿತರಣೆ

### ಆಡಳಿತ ಪರಿಣಿತಿ ತರಬೇತಿ

# ಸಹಕಾರ ಕ್ಷೇತ್ರದ ಯಶಸ್ಸು ಮನಸ್ಸು ಮತ್ತು ಹೃದಯದ (Byelaws - Business) ಮೇಲೆ ಅವಲಂಬಿತ – ಡಾ. ಆರ್.ಇಳಂಗೋವನ್



ಉದ್ಘಾಟನೆ



ಪ್ರತಿನಿಧಿಗಳು

**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ದಿನಾಂಕ : 22–06–2018 ರಿಂದ 23–06–2018ರವರೆಗೆ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಡಾ. ಆರ್. ಇಳಂಗೋವನ್‌ರವರು ಉದ್ಘಾಟಿಸಿ, ಒಂದು ಸಹಕಾರ ಸಂಸ್ಥೆಯ ಅಭಿವೃದ್ಧಿ ಸದರಿ ಸಂಸ್ಥೆಯ ಮನಸ್ಸು ಹಾಗೂ ಹೃದಯಗಳ ಕಾರ್ಯನಿರ್ವಹಣೆಯ ಮೇಲೆ ಅವಲಂಬಿತವಾಗಿರುತ್ತದೆ. ಮನಸ್ಸು ಎಂದರೆ ಉಪವಿಧಿಗಳು, ಹೃದಯ ಎಂದರೆ ವ್ಯವಹಾರ ಇವುಗಳು ಆರೋಗ್ಯಕರವಾಗಿದ್ದರೆ ಸಂಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯ ಎಂದು ತಿಳಿಸಿದರು. ಸಂಸ್ಥೆಯಲ್ಲಿ ನಾನು ಯಾರು, ನನ್ನ ಕರ್ತವ್ಯಗಳೇನು, ನನ್ನ ಪಾತ್ರ ಎಷ್ಟಕ್ಕೆ ಸೀಮಿತವಾಗಿ ನನ್ನ ಜವಾಬ್ಧಾರಿಗಳೇನು ಎಂಬುದನ್ನು ನಿರ್ದೇಶಕರು ತಿಳಿದುಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

## ಕನಿಷ್ಠ ವ್ಯವಹಾರ ಹಾಗೂ ಕನಿಷ್ಠ ಹಾಜರಾತಿ ಗೊಂದಲಕ್ಕೆ ಶೀಘ್ರದಲ್ಲಿ ಪರಿಹಾರಕ್ಕೆ ಚಿಂತನೆ - ಶ್ರೀ ಬಿ.ಎಸ್.ಗುಂಡುರಾವ್

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರು ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯರ ಕನಿಷ್ಠ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಅರ್ಹ ಸದಸ್ಯರ ಪಟ್ಟಿ ಸಿದ್ಧಪಡಿಸುವಿಕೆಯ ವಿಷಯದಲ್ಲಿ ಕೆಲವು ಗೊಂದಲಗಳು ಸೃಷ್ಟಿಯಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದರ ಪರಿಹಾರಕ್ಕೆ ಕ್ರಮವಿಡಲಾಗುವುದು ಎಂದು ತಿಳಿಸಿದರು.

## ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ - ಶ್ರೀ ಶಶಿಧರ

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಹಕಾರಿಗಳ ಉಪನಿಬಂಧಕರಾದ ಶ್ರೀ ಶಶಿಧರರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಉತ್ತಮ ಚಟುವಟಿಕೆಗಳನ್ನು ಮಾಧ್ಯಮದವರಿಗೆ ತಿಳಿಸಿ ಇಲ್ಲವಾದರೆ ಎಲ್ಲೋ ನಡೆದ ಒಂದು ಘಟನೆಯನ್ನೇ ಪದೇ ಪದೇ ಬಿಂಬಿಸಿ ಸಹಕಾರ ಕ್ಷೇತ್ರದ ಬಗ್ಗೆ ಜನರಲ್ಲಿ ಆಸಕ್ತಿ ಕಡಿಮೆಯಾಗುವ ಹಾಗೇ ಮಾಡುತ್ತಾರೆ. ವಿಶೇಷವಾಗಿ ಸೌಹಾರ್ದ ಸಹಕಾರಿಗಳು ಚುನಾವಣೆ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹೊಂದಿರುವುದು ಅವಶ್ಯಕ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆಯವರು ಸ್ವಾಗತ ಕೋರಿದರು. ಶ್ರೀ ವಿ.ಜೆ.ಕಾರಕೂನರವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಕೊನೆಯಲ್ಲಿ ಶ್ರೀ ಸೂರ್ಯಕಾಂತ ದ್ಯಾಕಲೆಯವರು ವಂದಿಸಿದರು. ತರಬೇತಿಯಲ್ಲಿ 24 ಸೌಹಾರ್ದ ಸಹಕಾರಿಗಳಿಂದ 45 ಪ್ರತಿನಿಧಿಗಳು ಭಾಗವಹಿಸಿದ್ದರು. ತರಬೇತಿ ಅವಧಿಯಲ್ಲಿ ಡಾ.ಎಸ್.ಎ.ಸಿದ್ಧಾಂತಿ, ಶ್ರೀ ಹೆಚ್.ಎಸ್.ನಾಗರಾಜಯ್ಯ, ಶ್ರೀ ಭಾಸ್ಕರ ಹೆಗಡೆ ಕಾಗೇರಿ ಮತ್ತು ಡಾ.ನಂದೀಶ ಹಿರೇಮಠರವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

# 10 ದಿನಗಳ 19ನೇ ತಂಡದ ವ್ಯಕ್ತಿತ್ವ ವಿಕಸನದ ಶಿಬಿರಾರ್ಥಿಗಳ ಆಯ್ದ ಅನಿಸಿಕೆಗಳು



- **ಶ್ರೀ ಧನ್ಯ ರಘುಪತಿ ಹೆಗಡೆ,** ಕದಂಬ ಸೌಹಾರ್ದ ಸಹಕಾರಿ ನಿ., ಶಿರಸಿ, ಉತ್ತರ ಕನ್ನಡ – **ತರಬೇತಿಯು ಅತ್ಯುತ್ತಮವಾಗಿತ್ತು, ಹೀಗೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ಆಶಿಸುತ್ತೇನೆ.**
- **ಶ್ರೀ ಪ್ರಶಾಂತ ಎ.ಆರ್.,** ಮೈಸೂರು ಕುರುಹಿನಶೆಟ್ಟಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮೈಸೂರು – **ವಿವೇಚನೆ ಮತ್ತು ಆಚರಣೆಗಳಲ್ಲಿ ಬದಲಾವಣೆ ತಂದ ಶಿಬಿರ.**
- **ಶ್ರೀ ಪುಂಡಲೀಕ ಅ. ನಾಯಕ,** ಜೈ ಜವಾನ ಜೈ ಕಿಸಾನ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ – **ಸಹಕಾರಿಗಳ ಬೆಳವಣಿಗೆ ಬಗ್ಗೆ ತುಂಬಾ ಚೆನ್ನಾಗಿ ತಿಳಿದುಕೊಂಡೆವು.**
- **ಶ್ರೀ ಶ್ರೀನಿವಾಸ ಕುಲಕರ್ಣಿ,** ನಿರ್ಧನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ – **ತರಬೇತಿಯ ವ್ಯವಸ್ಥೆ ಉತ್ತಮವಾಗಿದೆ.**
- **ಶ್ರೀಮತಿ ಶಿಲ್ಪ ರಾಣಿ,** ಶ್ರೀ ಗೋಮಿನಿ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ – **ನಾವು ಜೀವನದಲ್ಲಿ ಶಿಸ್ತನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಹತ್ತು ದಿನದ ಸಂಯುಕ್ತ ಸಹಕಾರಿ ಶಿಬಿರದಲ್ಲಿ ಕಲಿಯಬಹುದು.**
- **ಶ್ರೀ ಸಂತೋಷ ರಾಮ ಮುಕ್ರಿ,** ಕದಂಬ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಶಿರಸಿ – **"ಅಹಂಕಾರ ಅಂಗಿ ಕಳೆದು ಸಹಕಾರದ ಶಾಲು ಹೊದೆಸು".**
- **ಕುಮಾರಿ ಜಯಲಕ್ಷ್ಮೀ ಯ. ಈಳಿಗೇರ,** ಶ್ರೀ ಪುಟ್ಟರಾಜಗವಾಯಿ ಸಚೇತನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬಂಕಾಪೂರ – **ತರಬೇತಿಯು ತುಂಬ ಅತ್ಯುತ್ತಮವಾಗಿತ್ತು.**
- **ಶ್ರೀ ಹೊನಿಕೇರಪ್ಪ ಬಿ. ಪೂಜಾರಿ,** ಓಂ ಸಾಯಿರಾಮ ಸೌಹಾರ್ದ ಸಹಕಾರಿ ನಿ., ಯಾದಗಿರಿ – **ಕನಸಿನ ಹಕ್ಕಿಗೆ, ರೆಕ್ಕೆಯ ಶಕ್ತಿ ನೀಡಿ ಹಾರಾಡಲು ಕಲಿಸಿತು.**
- **ಶ್ರೀ ಬಸವರಾಜ ಮಲ್ಲಿಕಾರ್ಜುನ ಹಳ್ಳಿಕೇರಿ,** ಶಿವಸಂಗಮ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ – **ಗುರಿ ಇಲ್ಲದ ಜೀವನವನ್ನು ಗುರಿಯನ್ನಾಗಿ ಮಾಡಿದ ತರಬೇತಿ.**
- **ಶ್ರೀ ಜಗದೀಶ ಗಂಗಾಧರ ದೇಶಭಂಡಾರಿ,** ಕದಂಬ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಶಿರಸಿ – **ಈ ರೀತಿಯ ತರಬೇತಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಇರಲಿ.**
- **ಶ್ರೀ ರಾಜೇಶ ಡಿ. ಹೆಗಡೆ,** ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶಿರಸಿ – **ಸಹಕಾರ ಜೀವನದ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ಅತ್ಯುತ್ತಮ ಅವಕಾಶ.**
- **ಕುಮಾರಿ ದಿವ್ಯಾ ಆರ್.,** ಕುರುಹಿನಶೆಟ್ಟಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಬೆಂಗಳೂರು – **ಇಲ್ಲಿಗೆ ಬಂದು ನಾವು ತುಂಬ ಕಲಿತಿದ್ದೇವೆ.**

- **ಶ್ರೀ ಸೋಮನಾಥ ಬಿ. ನಿಂಬರ್ಗಿ,** ಶ್ರೀ ಧನಲಕ್ಷ್ಮೀ ಗ್ರಾಮೀಣ ಅಭಿವೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ಆಳಂದ – **ನನ್ನ 7 ವರ್ಷದ ಸೇವೆಯಲ್ಲಿ ಪಡೆದ ಅನುಭವವನ್ನು ಈ 10 ದಿನದ ತರಬೇತಿಯಲ್ಲಿ ಪರಿಪಕ್ವವಾಯಿತು.**
- **ಶ್ರೀ ಶ್ರೀಶೈಲ ಮ. ಹಿರೇಮಠ,** ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿ., ಜಮಖಂಡಿ – **ಕಲಿಕೆಗೆ ಉತ್ತಮ ವೇದಿಕೆ.**
- **ಕುಮಾರಿ ಪೂರ್ಣಿಮಾ ಐ.ವಿ.,** ತುಮಕೂರು ಕಲ್ಪತರು ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು – **ಹೊಸ ವಿಷಯಗಳನ್ನು ತಿಳಿದುಕೊಂಡೆ.**
- **ಶ್ರೀ ಮಂಜುನಾಥ ಎಸ್.,** ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು – **ತರಬೇತಿಯು ಸಹಕಾರಿಗಳ ಸಿಬ್ಬಂದಿಗೆ ತಮ್ಮ ವ್ಯಕ್ತಿತ್ವ ಮತ್ತು ಕಾರ್ಯಕ್ಷಮತೆಯನ್ನು ದ್ವಿಗುಣಗೊಳಿಸಲು ಬೇಕಾಗುವ ಶಕ್ತಿಯನ್ನು ನೀಡಿದೆ.**
- **ಕುಮಾರಿ ಜ್ಯೋತಿ ಬಿ. ಕುಂಬಾರ್,** ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ., ಯಾದಗಿರಿ – **ರಾಜ್ಯ ಸಹಕಾರಿಗಳಿಗೆ ದಾರಿದೀಪ, ಸಿಬ್ಬಂದಿಗಳಿಗೆ ಜ್ಞಾನ ನೀಡುವ ಸುರಭಿ.**
- **ಶ್ರೀ ಪ್ರವೀಣಕುಮಾರ ಅಶೋಕ ನೇಮಣ್ಣವರ,** ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಜಮಖಂಡಿ – **ಈ ತರಬೇತಿ ಒಳ್ಳೆಯ ಸಹಕಾರ, ಒಳ್ಳೆಯ ಆಲೋಚನೆ, ಉಪಯುಕ್ತ ಹಾಗೂ ಮಾದರಿ.**
- **ಶ್ರೀ ಬಸವರಾಜು ಶ. ಪಾಟೀಲ,** ಕಲಬುರಗಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ – **ಸಮಯ ಪಾಲನೆಗೆ ಹೆಚ್ಚು ಒತ್ತು ಕೊಡುವುದನ್ನು ಕಲಿತೆ.**
- **ಶ್ರೀ ಶಿವಕುಮಾರ,** ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು – **ಉತ್ತಮ ತರಬೇತಿ.**
- **ಶ್ರೀ ಅಶೋಕ್ ಸಂಗಪ್ಪ ಜಮಖಂಡಿ,** ಶ್ರೀ ಚನ್ನಗಿರೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಮುಧೋಳ – **ಒಳ್ಳೆಯ ಮಾತು, ಒಳ್ಳೆಯ ವಿಚಾರ.**

## ತರಬೇತಿ ಕಾರ್ಯಕ್ರಮ : ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ
## (ನ್ಯಾಷನಲ್ ಕೋಆಪರೇಟಿವ್ ಯೂನಿಯನ್ ಆಫ್ ಇಂಡಿಯಾ)

ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ ವತಿಯಿಂದ ದೇಶದ ಸಹಕಾರಿ ಸಂಸ್ಥೆಗಳಿಗಾಗಿ ನಾಯಕತ್ವ ಅಭಿವೃದ್ಧಿ ತರಬೇತಿಯನ್ನು (Leadership Development Programme) ಆಯೋಜಿಸಲಾಗಿದೆ.

ದಿನಾಂಕ : 16 – 18 ಆಗಸ್ಟ್ 2018ರವರೆಗೆ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳು/ ಮಹಿಳಾ ನಿರ್ದೇಶಕರುಗಳಿಗಾಗಿ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ ಇಲ್ಲಿ ಆಯೋಜಿಸಲಾಗಿದೆ. ಭಾಗವಹಿಸುವ ಪ್ರತಿನಿಧಿಗಳ ಸಂಖ್ಯೆ 30 ಮಾತ್ರ.

ದಿನಾಂಕ : 23 – 25 ಆಗಸ್ಟ್ 2018ರವರೆಗೆ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳು/ ಎಸ್/ಎಸ್‌ಟಿ ನಿರ್ದೇಶಕರುಗಳಿಗಾಗಿ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ ಇಲ್ಲಿ ಆಯೋಜಿಸಲಾಗಿದೆ. ಭಾಗವಹಿಸುವ ಪ್ರತಿನಿಧಿಗಳ ಸಂಖ್ಯೆ 40 ಮಾತ್ರ.

ತರಬೇತಿಯಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರದಿಂದ 1) III ಟೈರ್ ಎಸಿ/ ಸಾಮಾನ್ಯ ಬಸ್ ಪ್ರಯಾಣ ದರವನ್ನು (to and fro) ಪಾವತಿಸಲಾಗುವುದು. (ಮೂಲ ಟಿಕೆಟ್ಟಿನ ಜೆರಾಕ್ಸ್ ಪ್ರತಿಯನ್ನು ಒದಗಿಸಿದ ನಂತರ), 2) ಊಟೋಪಹಾರ, ವಸತಿ ವ್ಯವಸ್ಥೆಗಳನ್ನು ತರಬೇತಿ ಅವಧಿಗೆ ಮಾತ್ರ ಒದಗಿಸಲಾಗುವುದು. 3) ತರಬೇತಿ ಮತ್ತು ತರಬೇತಿ ಅಧ್ಯಯನ ಸಾಹಿತ್ಯ ಒದಗಿಸಲಾಗುವುದು. 4) ಅಧ್ಯಯನ ಪ್ರವಾಸ ವ್ಯವಸ್ಥೆಗಳನ್ನು ಒದಗಿಸುತ್ತಾರೆ.

ತರಬೇತಿಯು ರಾಷ್ಟ್ರಮಟ್ಟದಾಗಿರುವುದರಿಂದ ರಾಜ್ಯದ ಸೌಹಾರ್ದ ಸಹಕಾರಿಗಳಿಂದ ಒಟ್ಟಾರೆ 2–3 ಪ್ರತಿನಿಧಿಗಳಿಗೆ ಭಾಗವಹಿಸುವ ಅವಕಾಶ ಇದೆ. ತಮ್ಮ ಸಹಕಾರಿಯಿಂದ ಪ್ರತಿನಿಧಿಯನ್ನು ಕಳುಹಿಸಿ, ಕಾರ್ಯಕ್ರಮದ ಪ್ರಯೋಜನ ಪಡೆಯಲು ತಿಳಿಸಿದೆ. ತಮ್ಮ ಭಾಗವಹಿಸುವಿಕೆಯ ನೋಂದಣಿಯನ್ನು ಖಚಿತಪಡಿಸಿಕೊಂಡ ನಂತರವೇ ದೆಹಲಿಗೆ ತೆರಳಲು ತಿಳಿಸಿದೆ. ಭಾಗವಹಿಸುವ ಪ್ರತಿನಿಧಿಗಳು ಆಧಾರ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ತಮ್ಮೊಂದಿಗೆ ತರುವುದು ಕಡ್ಡಾಯ. ಹೆಚ್ಚಿನ ಮಾಹಿತಿಗಾಗಿ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನಂ.3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಅಗಸ್ಟ್ ಕ್ರಾಂತಿ ಮಾರ್ಗ, ನವದೆಹಲಿ – 110016, ದೂರವಾಣಿ ಸಂಖ್ಯೆ 011–40349141, E-mail : nccend@yahoo.co.in, Website : www.ncui.coop ಅನ್ನು ಸಂಪರ್ಕಿಸುವುದು.

## ಬೆಳಗಾವಿ ವಿಭಾಗ : ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ಮತ್ತು ಚುನಾವಣಾ ವಿಷಯದ ಕುರಿತು ತರಬೇತಿ



**ಚಿಕ್ಕೋಡಿ** : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ ಮತ್ತು ರಾಯಭಾಗ ತಾಲ್ಲೂಕುಗಳಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ/ ಆಡಳಿತ ಮಂಡಲಿ ಸದಸ್ಯರಿಗೆ ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ಮತ್ತು ಚುನಾವಣಾ ವಿಷಯದ ಕುರಿತು ತರಬೇತಿಯನ್ನು ದಿನಾಂಕ 05.06.2018ರಂದು ಹೋಟೆಲ್ ಹುಲಿಗೆಮ್ಮ ರೆಸಿಡೆನ್ಸಿ, ಚಿಕ್ಕೋಡಿ ಇಲ್ಲಿ ಏರ್ಪಡಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಕೆ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ಅಧ್ಯಕ್ಷತೆಯನ್ನು ವಹಿಸಿ ಮಾತಾನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಬೆಳಗಾವಿ ಜಿಲ್ಲೆಯು ಸೌಹಾರ್ದ ಸಹಕಾರಿ ಚಳುವಳಿಯ ಪ್ರಮುಖ ಪಾತ್ರದಾರ ಜಿಲ್ಲೆಯಾಗಿದ್ದು, ಸಂಖ್ಯಾತ್ಮಕವಾಗಿ ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದ್ದು, ಗುಣಾತ್ಮಕವಾಗಿ ತುಂಬಾ ಹಿಂದೆ ಉಳಿದಿದೆ. ಅದನ್ನು ಸರಿಪಡಿಸುವ ಸಲುವಾಗಿ ಸಂಯುಕ್ತ ಸಹಕಾರಿಯು ವಿಷಯಾಧಾರಿತ ತರಬೇತಿಗಳನ್ನು ಆಯೋಜಿಸುತ್ತಿದೆ. ಇದರ ಉಪಯೋಗವನ್ನು ಸದಸ್ಯ ಸಹಕಾರಿಗಳು ಪಡೆದುಕೊಳ್ಳಬೇಕು. ಸೌಹಾರ್ದ ಸಹಕಾರಿಗಳ ಬೇಡಿಕೆಯ ಮೇಲೆ ಸಹಕಾರಿಗಳಿಗೆ ಅನುಕೂಲವಾಗಲೆಂದು ದಾವಾ ಪಂಚಾಯತಿ ನ್ಯಾಯಾಲಯದ ಸಂಚಾರಿ ಪೀಠವನ್ನು ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ ಸ್ಥಾಪಿಸಲಾಗಿದ್ದು, ಅದಕ್ಕೆ ಪ್ರತ್ಯೇಕ ಸಿಬ್ಬಂದಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಸಹಕಾರಿಗಳು ಇದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು. ನಂತರ ಸಹಕಾರಿಗಳೊಂದಿಗೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಿದ ಅವರು ಸಹಕಾರಿಗಳು ಎದುರಿಸುತ್ತಿರುವ ಕೆಲವು ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಲು ಕ್ರಮವಿಡುವುದಾಗಿ ತಿಳಿಸಿದರು.

ತರಬೇತಿ ಅವಧಿಯಲ್ಲಿ ಶ್ರೀ ಭಾಸ್ಕರ ಹೆಗಡೆ ಕಾಗೇರಿರವರು ಚುನಾವಣೆಯ ಕುರಿತು ಮತ್ತು ಶ್ರೀ ಮಹಾಬಲಗಿರಿರವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕ್ರಮಗಳ ಕುರಿತು ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 60 ಸೌಹಾರ್ದ ಸಹಕಾರಿಗಳಿಂದ 90 ಪ್ರತಿನಿಧಿಗಳು ಹಾಜರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರ್ ಧರಣೆರವರು ಸ್ವಾಗತಿಸಿದರೆ, ಕಿರಿಯ ಅಧಿಕಾರಿಯಾದ ಶ್ರೀ ದರ್ಶನ್.ಕೆ ಇವರು ವಂದಿಸಿದರು.

---

**ಯರಗಟ್ಟಿ** : ಬೆಳಗಾವಿ ಜಿಲ್ಲೆಯ ಗೋಕಾಕ, ಸವದತ್ತಿ, ರಾಮದುರ್ಗ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ/ ಆಡಳಿತ ಮಂಡಲಿ ಸದಸ್ಯರಿಗೆ ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ಮತ್ತು ಚುನಾವಣಾ ವಿಷಯದ ಕುರಿತು ತರಬೇತಿಯನ್ನು ದಿನಾಂಕ 06.06.2018ರಂದು ಹೋಟೆಲ್ ಹುಲಿಗೆಮ್ಮ ರತ್ನ ಸಂಗಮ, ಯರಗಟ್ಟಿ, ಸವದತ್ತಿ ಇಲ್ಲಿ ಏರ್ಪಡಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮಹಾಬಲ ಗಿರಿರವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕೆ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ವಹಿಸಿ, ಮಾತನಾಡಿದರು. ತರಬೇತಿಯ ಅವಧಿಯಲ್ಲಿ ಶ್ರೀ ಮಹಾಬಲಗಿರಿರವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕ್ರಮಗಳ ಕುರಿತು ಮತ್ತು ಶ್ರೀ ಭಾಸ್ಕರ ಹೆಗಡೆ ಕಾಗೇರಿರವರು ಚುನಾವಣೆಯ ಕುರಿತು ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 85 ಸೌಹಾರ್ದ ಸಹಕಾರಿಗಳಿಂದ 105 ಪ್ರತಿನಿಧಿಗಳು ಹಾಜರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರ್ ಧರಣೆರವರು ಸ್ವಾಗತಿಸಿದರೆ, ಕಿರಿಯ ಅಧಿಕಾರಿಯಾದ ಶ್ರೀ ದರ್ಶನ್.ಕೆ ಇವರು ವಂದಿಸಿದರು.

---

**ಬೆಳಗಾವಿ** : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ ಮತ್ತು ರಾಯಭಾಗ ತಾಲ್ಲೂಕುಗಳಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ/ ಆಡಳಿತ ಮಂಡಲಿ ಸದಸ್ಯರಿಗೆ ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ಮತ್ತು ಚುನಾವಣಾ ವಿಷಯದ ಕುರಿತು ತರಬೇತಿಯನ್ನು ದಿನಾಂಕ 07.06.2018ರಂದು ಹೋಟೆಲ್ ಮಧುಬನ ರೆಸಿಡೆನ್ಸಿ, ಗೋವಾವೇಸ್, ಬೆಳಗಾವಿ ಇಲ್ಲಿ ಏರ್ಪಡಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿಗಳ

ಸಹಾಯಕ ನಿಬಂಧಕ(ನಿ)ರಾದ ಶ್ರೀ ಎ.ಬಿ. ಬಂಕಾಪುರೆ ಇವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕೆ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿರವರು ವಹಿಸಿ, ಮಾತನಾಡಿದರು.

ತರಬೇತಿಯ ಅವಧಿಯಲ್ಲಿ ಶ್ರೀ ಭಾಸ್ಕರ ಹೆಗಡೆ ಕಾಗೇರಿರವರು ಚುನಾವಣೆಯ ಕುರಿತು ಮತ್ತು ಶ್ರೀ ಎ.ಬಿ. ಬಂಕಾಪುರೆರವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕ್ರಮಗಳ ಕುರಿತು ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 85 ಸೌಹಾರ್ದ ಸಹಕಾರಿಗಳಿಂದ 110 ಪ್ರತಿನಿಧಿಗಳು ಹಾಜರಿದ್ದರು. ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ವೆಂಕಟೇಶ ರಾಠೋಡ್‌ರವರು ಸ್ವಾಗತಿಸಿದರೆ, ಕಿರಿಯ ಅಧಿಕಾರಿಯಾದ ಶ್ರೀ ದರ್ಶನ್.ಕೆ ಇವರು ವಂದಿಸಿದರು.

**ಬೆಳಗಾವಿ :** ಬೆಳಗಾವಿ ಜಿಲ್ಲೆಯ ಖಾನಾಪೂರ ಮತ್ತು ಬೆಳಗಾವಿ ತಾಲ್ಲೂಕುಗಳಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ/ ಆಡಳಿತ ಮಂಡಲಿ ಸದಸ್ಯರಿಗೆ ಸಾಲ ವಸೂಲಾತಿ ಹಾಗೂ ದಾವಾ ದಾಖಲಾತಿ ಮತ್ತು ಚುನಾವಣಾ ವಿಷಯದ ಕುರಿತು ತರಬೇತಿಯನ್ನು ದಿನಾಂಕ 08.06.2018ರಂದು ಹೋಟೆಲ್ ಮಧುಬನ, ಗೋವಾವೇಸ್, ಬೆಳಗಾವಿ ಇಲ್ಲಿ ಏರ್ಪಡಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಕೆ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿ, ಮಾತನಾಡಿದರು.

ತರಬೇತಿ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿರವರು ಚುನಾವಣೆಯ ಕುರಿತು ಮತ್ತು ಶ್ರೀ ಎ.ಬಿ.ಬಂಕಾಪುರೆರವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕ್ರಮಗಳ ಕುರಿತು ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 60 ಸೌಹಾರ್ದ ಸಹಕಾರಿಗಳಿಂದ 90 ಪ್ರತಿನಿಧಿಗಳು ಹಾಜರಿದ್ದರು. ಕಿರಿಯ ಅಧಿಕಾರಿಯಾದ ಶ್ರೀ ದರ್ಶನ್ ಕೆ. ಇವರು ಸ್ವಾಗತಿಸಿದರೆ, ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ವೆಂಕಟೇಶ ರಾಠೋಡ್‌ರವರು ವಂದಿಸಿದರು.

## ಮೈಸೂರು ವಿಭಾಗ : ಆಡಳಿತ ಪರಿಣತಿ ತರಬೇತಿ

**ಉಡುಪಿ :** ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಹಿಳಾ ಸಿಬ್ಬಂದಿಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿಯ ಉದ್ಘಾಟನೆಯನ್ನು ದಿನಾಂಕ 22.06.2018ರಂದು ಉಡುಪಿಯ ನೈವೇದ್ಯ ಹೋಟೇಲ್‌ನ ಸಭಾಂಗಣದಲ್ಲಿ ಹಿರಿಯ ಮಹಿಳಾ ಸಹಕಾರಿಗಳು, ಉಡುಪಿ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಸರಳಾ ಕಾಂಚನ್ ಇವರು ನೆರವೇರಿಸಿದರು. ನಂತರ ಮಾತನಾಡಿದ ಅವರು ನಗುಮೊಗದ ಸೇವೆಯಿಂದ ಸಹಕಾರ ಕ್ಷೇತ್ರದ ಬೆಳವಣಿಗೆಯಾಗಲು ಸಾಧ್ಯವಾಗಿರುತ್ತದೆ. ಅದರಲ್ಲೂ ಮಹಿಳಾ ಸಿಬ್ಬಂದಿಗಳು ನಗುಮೊಗದ ಸೇವೆಯ ಜೊತೆಗೆ ಸಹಕಾರಿ ಸಂಸ್ಥೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಮಂಜುನಾಥ. ಎಸ್.ಕೆ., ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಮಾತನಾಡಿ ಖಾಸಗಿ ಸಂಸ್ಥೆಯಲ್ಲಿನ ಸಫಲತೆಯನ್ನು ಪಡೆದಿರುವ ಪೆಪ್ಸಿ ಕಂಪನಿಯ ಮಹಿಳಾ ಸಿ.ಇ.ಓ. ಆದ ಇಂದ್ರ ನೂಯಿಯಂತಹ ಮಹಿಳಾ ಸಿ.ಇ.ಓ.ಗಳಂತೆ ಸಹಕಾರಿ ಸಂಸ್ಥೆಯ ಸಿಬ್ಬಂದಿಗಳು ಪ್ರಾದೇಶಿಕವಾಗಿ ತಮ್ಮ ಪರಿಸರದಲ್ಲಿ ಉತ್ತಮ ಹೆಸರನ್ನು ಮಾಡುವ ಮೂಲಕ ಸಹಕಾರಿ ಸಂಸ್ಥೆಯ ಬೆಳವಣಿಗೆಗೆ ಪ್ರೇರಕರಾಗಬೇಕು ಎಂದು ತಿಳಿಸಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಎಂ.ಜೆ. ಚಂದ್ರಪ್ರತಿಮ ಇವರು ಮಾತನಾಡಿ ಮಹಿಳೆಯರು ಕೌಟುಂಬಿಕ ಜೀವನದ ಒತ್ತಡದ ನಡುವೆ ತಾನು ದುಡಿಯುವ ಸಂಸ್ಥೆಯಲ್ಲಿನ ಒತ್ತಡವನ್ನು ನಿರ್ವಹಿಸುವ ಅನಿವಾರ್ಯತೆ ಇದೆ. ಇದನ್ನು ಮಹಿಳೆಯರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಈ ಮೂಲಕ ವೈಯಕ್ತಿಕ ಜೀವನ ಮತ್ತು ವ್ಯಾವಹಾರಿಕ ಜೀವನದಲ್ಲಿ ಸಫಲತೆಯನ್ನು ಕಾಣಲು ಸಾಧ್ಯ ಎಂದು ತಿಳಿಸಿದರು.

ಉಪಪ್ರಧಾನ ವ್ಯವಸ್ಥಾಪಕರು ಹಾಗೂ ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್ ಇವರು ಪ್ರಾಸ್ತವಿಕವಾಗಿ ಮಾತನಾಡಿದರು. ಮೈಸೂರು ವಿಭಾಗದ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಸ್ವಾಗತಿಸಿದರು. ಶ್ರೀಮತಿ ಡೇಬ್ರ ಡಿಸೋಜಾರವರು ವಂದಿಸಿದರು. ಶ್ರೀ ಬಿ.ಅನಂತರಾಮ ಭಟ್ ಇವರು ಕಾರ್ಯಕ್ರಮ ನಿರೂಪಿಸಿದರು.

## ಬೆಂಗಳೂರು ವಿಭಾಗ : ಹಣಕಾಸು ನಿರ್ವಹಣೆ ತರಬೇತಿ

**ಬೆಂಗಳೂರು :** ದಿನಾಂಕ 23 ಜೂನ್ 2018ರಂದು ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ಒಂದು ದಿನದ "ಹಣಕಾಸು ನಿರ್ವಹಣೆ ತರಬೇತಿ" ಕಾರ್ಯಕ್ರಮವನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಉದ್ಘಾಟನೆ ನೆರವೇರಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರು ಸಂಯುಕ್ತ ಸಹಕಾರಿಯ ವತಿಯಿಂದ ಅನೇಕ ರೀತಿಯ ತರಬೇತಿಗಳು ಹಾಗೂ ಸಭೆಗಳನ್ನು ನಡೆಸಿಕೊಂಡು ಬರಲಾಗಿದೆ. ಅದೇ ರೀತಿ ನಡೆಸಲಾಗುತ್ತಿರುವ ಈ ಹಣಕಾಸು ನಿರ್ವಹಣೆ ತರಬೇತಿಯಲ್ಲಿ ಹೆಚ್ಚು ಹೆಚ್ಚು ಸೌಹಾರ್ದ ಸಹಕಾರಿಗಳು ಭಾಗವಹಿಸಿ, ಸಲಹೆ ಸೂಚನೆಗಳನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಡಾ. ಆರ್ ಇಳಂಗೋವನ್ ರವರು ಮಾತನಾಡಿ ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಗೊಂಡಿರುತ್ತವೆ. ಸರ್ಕಾರದಿಂದ ಯಾವುದೇ ಹಸ್ತಕ್ಷೇಪವಿಲ್ಲದೇ ನಡೆಸಿಕೊಂಡು ಹೋಗುವ ಏಕೈಕ ಸೌಹಾರ್ದ ಸಹಕಾರಿ ಸಂಸ್ಥೆಗಳು ಎಂದು ತಿಳಿಸಿದರು.



ತರಬೇತಿ ಅವಧಿಯಲ್ಲಿ ಡಾ. ಎಸ್.ಎ.ಸಿದ್ಧಾಂತಿ, ಪ್ರಾಂಶುಪಾಲರು, ಎಎಮ್‌ಸಿ ಕಾಲೇಜು, ಬೆಂಗಳೂರು ಇವರು ಸೌಹಾರ್ದ ಸಹಕಾರಿಗಳಲ್ಲಿ ಪ್ರಮುಖವಾಗಿ ಬರುವಂತಹ ಆಸ್ತಿ–ಜವಾಬ್ದಾರಿ ಬಗ್ಗೆ ತಿಳಿಸಿದರು. ನಂತರ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿಯವರು ಸಹಕಾರಿಗಳಿಗೆ ವೃತ್ತಿ ಜೀವನ ಬಗ್ಗೆ ತಿಳಿಸಿದರು. ತರಬೇತಿಯಲ್ಲಿ 54 ಸೌಹಾರ್ದ ಸಹಕಾರಿಗಳಿಂದ 67 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.

ವಿಭಾಗೀಯ ಅಧಿಕಾರಿಯಾದ ಶ್ರೀ ನಾರಾಯಣ ಹೆಗಡೆರವರು ಕಾರ್ಯಕ್ರಮದ ಸ್ವಾಗತವನ್ನು ನೆರವೇರಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ಅನಿಲ್ ಕುಮಾರ್.ಎಮ್.ರವರು ನಿರೂಪಿಸಿದರು ಮತ್ತು ಶ್ರೀ ರಾಜೇಶ್.ಕೆ.ಎಮ್.ರವರು ವಂದಿಸಿದರು.

## ಮೈಸೂರು ವಿಭಾಗ : ಕೌಶಲ್ಯ ಅಭಿವೃದ್ಧಿ ತರಬೇತಿ

**ಮೈಸೂರು** : ದಿನಾಂಕ : 29–06–2018ರಂದು ಮೈಸೂರು ವಿಭಾಗದ ಮೈಸೂರು, ಮಡಿಕೇರಿ, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ "ಕೌಶಲ್ಯ ಅಭಿವೃದ್ಧಿ ತರಬೇತಿ" ಕಾರ್ಯಕ್ರಮವು ಮೈಸೂರಿನ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನ (ಮೈಸೂರು ಲೋಕಲ್ ಸೆಂಟರ್) ಎಸ್.ಪಿ.ಭಟ್ ಹಾಲ್ ಇಲ್ಲಿ ನಡೆಯಿತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಭಾರತ ಸರ್ಕಾರದ ನೆಹರು ಯುವ ಕೇಂದ್ರದ ರಾಜ್ಯ ನಿರ್ದೇಶಕರಾದ ಶ್ರೀ ಎಂ.ಎಸ್. ನಟರಾಜ್‌ರವರು ನೆರವೇರಿಸಿ, ಯುವ ಜನತೆಯು ಸಹಕಾರ ತತ್ವದಲ್ಲಿ ಮಾಡಬೇಕಾದ ಕೆಲಸವು ಇನ್ನೂ ಇದೆ. ಯುವಕ/ಯುವತಿಯರು ಸಹಕಾರಿ ಸಂಸ್ಥೆಗಳನ್ನು ರಚಿಸಲು ಮುಂದೆ ಬರಬೇಕೆಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಇದರ ಅಧ್ಯಕ್ಷರಾದ ಶ್ರೀ ಎಸ್. ನಾಗರಾಜುರವರು ವಹಿಸಿ, ಸಂಯುಕ್ತ ಸಹಕಾರಿಯಿಂದ ಹಮ್ಮಿಕೊಳ್ಳುವ "ಕೌಶಲ್ಯ ಅಭಿವೃದ್ಧಿ" ತರಬೇತಿಯ ಸದುಪಯೋಗ ಪಡೆದು ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಮಾದರಿ ಸಂಸ್ಥೆಗಳಾಗಿ ಬೆಳೆಸುವಲ್ಲಿ ಪ್ರಯತ್ನಿಸಬೇಕೆಂದು



ತಿಳಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಕೆ.ಆರ್. ವಸಂತ್‌ಕುಮಾರ್, ಪ್ರಾಧ್ಯಾಪಕರು, ಆದಿಚುಂಚನಗಿರಿ ವೈದ್ಯಕೀಯ ವಿದ್ಯಾಲಯ, ಮಂಡ್ಯ ಮತ್ತು ಶ್ರೀ ಶಿವಕುಮಾರ್, ನಿರ್ದೇಶಕರು, ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇವರುಗಳು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಶಿವಕುಮಾರ್ ಬಿರಾದಾರ, ಹಿರಿಯ ಅಧಿಕಾರಿ ಇವರು ಸ್ವಾಗತಿಸಿದರು. ಶ್ರೀ ಗುರುಪ್ರಸಾದ್ ಬಂಗೇರ, ಹಿರಿಯ ಅಧಿಕಾರಿ ಇವರು ವಂದಿಸಿದರು. ಶ್ರೀ ಎಂ. ಚಂದ್ರಶೇಖರಯ್ಯ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

# ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



ದಿನಾಂಕ : 14.06.2018ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್‌ರವರು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಶ್ರೀ ಮಂಜುಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಬೆಳವಣಿಗೆಗೆ ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಿದರು.



ಕುಷ್ಟಗಿ ನಗರದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್‌ರವರನ್ನು ಸನ್ಮಾನಿಸಿದರು.



ಯಲಬುರ್ಗಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್‌ರವರು ಸಹಕಾರಿ ಬೆಳವಣಿಗೆಗಳ ಅಗತ್ಯ ಮಾಹಿತಿ ಹಾಗೂ ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀಯುತರನ್ನು ಸನ್ಮಾನಿಸಿದರು.



ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್‌ರವರು ಯಲಬುರ್ಗಾ ನಗರದಲ್ಲಿರುವ ಶ್ರೀ ವಿಜಯದುರ್ಗಾ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸ್ಪಂದನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ.ಬಿ.ಪತ್ತಾರರವರು ಉಪಸ್ಥಿತರಿದ್ದರು.



ದಿನಾಂಕ : 25.06.2018ರಂದು ಶ್ರೀ ಸಿದ್ದರಾಮಪ್ಪ ಉಪ್ಪಿನ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಕಲಬುರಗಿ ವಿಭಾಗೀಯ ಕಛೇರಿಗೆ ಭೇಟಿ ನೀಡಿದರು. ಕಲಬುರಗಿ ವಿಭಾಗೀಯ ಅಧಿಕಾರಿಗಳು ಸ್ವಾಗತಿಸಿ, ಕಲಬುರಗಿ ವಿಭಾಗೀಯ ಕಛೇರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀ ಗುರುನಾಥ ಜ್ಯಾಂತಿಕರ, ನಿಕಟ ಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಶ್ರೀ ಸಂಜೀವ ಮಹಾಜನ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಹಾಗೂ ಶ್ರೀ ವೈ.ಟಿ.ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರುಗಳು ಉಪಸ್ಥಿತರಿದ್ದರು.



ದಿನಾಂಕ : 25.06.2018ರಂದು ಶ್ರೀ ಸಿದ್ದರಾಮಪ್ಪ ಉಪ್ಪಿನ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಭೇಟಿ ನೀಡಿ, ಸಹಕಾರಿಯ ಆಡಳಿತ ಮಂಡಲಿಯವರೊಂದಿಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗದ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಮತ್ತು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್. ಎಸ್.ಪಾಟೀಲರವರು ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀ ವೈ.ಟಿ.ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಹಾಗೂ ಶ್ರೀ ಶ್ರೀಕಾಂತ ಬರುವೆ, ಉಪ ಪ್ರಧಾನ ವ್ಯವಸ್ಥಾಪಕರು, ಬೆಳಗಾವಿ ವಿಭಾಗ ಇವರುಗಳು ಹಾಗೂ ವಿಜಯಪುರ ಜಿಲ್ಲೆಯ ಕೆಲವು ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

---

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಿಂಧನೂರು ನಗರದಲ್ಲಿರುವ ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಆಸರೆ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮತ್ತು ಯುವ ಭಾರತ ಸೌಹಾರ್ದ ಸಹಕಾರಿ ನಿ., ಸಹಕಾರಿಗಳಿಗೆ ಭೇಟಿ ನೀಡಿ, ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ದಿನಾಂಕ : 21.06.2018ರಂದು ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್‌ರವರು ಮಂಗಳೂರಿನ ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸೌಹಾರ್ದ ಸಹಕಾರಿ ನಿ., ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಾತೃಭೂಮಿ ಸೌಹಾರ್ದ ಸಹಕಾರಿ ನಿ., ಕಟೀಲಿನ ನಂದಿನಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಹಕಾರಿಗಳಿಗೆ ಭೇಟಿ ನೀಡಿ, ಸಹಕಾರಿಯ ಕಾರ್ಯ ಚಟುವಟಿಕೆಗಳ ಕುರಿತು ಚರ್ಚಿಸಿದರು.

## ಇಂದೀಕರಿಸಿದ ಆವೃತ್ತಿ (ಹೊಸ ಮಾದರಿ)ಯ ಇ–ಸ್ಟ್ಯಾಂಪಿಂಗ್ ಕಾಗದ : ದಿನಾಂಕ 06–07–2018 ರಿಂದ ಜಾರಿ

## Upgraded Version of the E-stamping Certificates : With effect from 06-07-2018

ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರು ರಾಷ್ಟ್ರದಾದ್ಯಂತ ಇ–ಸ್ಟ್ಯಾಂಪಿಂಗ್ ವ್ಯವಹಾರವನ್ನು ನಡೆಸುತ್ತಾ ಬಂದಿದ್ದಾರೆ. ಹಾಲಿ ವಿತರಿಸುತ್ತಿರುವ ಇ–ಸ್ಟ್ಯಾಂಪಿಂಗ್ ಪೇಪರ್ ಅನ್ನು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಆಪತ್ತುಗಳನ್ನು ಕಡಿತಗೊಳಿಸಿ ಭದ್ರತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ನಿರಂತರವಾಗಿ ತಂತ್ರಜ್ಞಾನ ಹಾಗೂ ಆಧುನಿಕತೆಯನ್ನು ಅಳವಡಿಸುತ್ತಾ ಬಂದಿರುವ ಭಾಗವಾಗಿ ಇ–ಸ್ಟ್ಯಾಂಪಿಂಗ್ ಕಾಗದವನ್ನು ಇನ್ನೂ ಅಪ್‌ಗ್ರೇಡ್ ಮಾಡಲಾಗಿದೆ ಎಂದು ಶ್ರೀ ಸತೀಶ್.ಕೆ., ಏರಿಯಾ ಮ್ಯಾನೇಜರ್, ಇ–ಸ್ಟ್ಯಾಂಪಿಂಗ್ ವಿಭಾಗ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಇವರು ಸಂಯುಕ್ತ ಸಹಕಾರಿಗೆ ತಿಳಿಸಿದ್ದಾರೆ. ಈ ಹೊಸ ಮಾದರಿಯ ಇ–ಸ್ಟ್ಯಾಂಪಿಂಗ್ ಕಾಗದವು ಅನೇಕ ವಿಶೇಷತೆಗಳನ್ನು ಹೊಂದಿದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಎಸಿಸಿ ಕೇಂದ್ರಗಳು ಸಹಕರಿಸಲು ಕೋರಿದ್ದಾರೆ. ಇ–ಸ್ಟ್ಯಾಂಪಿಂಗ್ ಪೇಪರ್‌ನ ಅಪ್‌ಗ್ರೇಡೆಡ್ ವರ್ಷನ್‌ನ ಪ್ರತಿಯನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.






## ಶ್ರೀ ಬಸವರಾಜ ವಾಲಿರವರಿಗೆ ಅಭಿನಂದನೆ

ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಬಸವರಾಜ ವಾಲಿ ಅವರನ್ನು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಮಹಾಮಂಡಳದ ಅಧ್ಯಕ್ಷರಾದ ಮತ್ತು ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಸ್.ಎಸ್. ಪಾಟೀಲ ಇವರು ಸನ್ಮಾನಿಸಿ, ಅಭಿನಂದಿಸಿದರು.

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ
ವಿಭಾಗೀಯ ಅಧಿಕಾರಿ, ಬೆಳಗಾವಿ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. – ಸಂಪಾದಕರು

**ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಿದ್ಧಾಪೂರ**

**ಪ್ರಶ್ನೆ 01 : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997 ಕಲಂ 24 ರಲ್ಲಿ ಯಾರನ್ನು ಸಹಮತ ನಿರ್ದೇಶಕರು ಅಂತಾ ಸೇರಿಸಿಕೊಳ್ಳಬೇಕು ಅಂತಾ ಕಾಯ್ದೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದು ಇದ್ದು, ಆದರೆ ಒಂದು ಸಹಕಾರಿಯು ಮೂರಕ್ಕೆ ಮೀರದ ಕಾರ್ಯನುಗುಣ ನಿರ್ದೇಶಕರು (Functional Directors) ಸಹ ಅವಶ್ಯವಿದ್ದಲ್ಲಿ, ಮಂಡಲಿಯ ಸದಸ್ಯರಾಗಿರತಕ್ಕದ್ದು ಅಂತಾ ತಿಳಿಸಿದ್ದಾರೆ. ಆದರೆ ಯಾರನ್ನು ಸೇರಿಸಿಕೊಳ್ಳಬೇಕು ಹಾಗೂ ಇವರ ಅರ್ಹತೆ ಬಗ್ಗೆ ತಿಳಿಸಿ.**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 24ರನ್ವಯ ಸಹಕಾರಿಯು ಅವಶ್ಯವಿದ್ದಲ್ಲಿ ಸಹಮತದ ಮೂಲಕ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರನ್ನು ಹೊಂದಬಹುದಾಗಿರುತ್ತದೆ. ಕಾರ್ಯಾನುಗುಣ ನಿರ್ದೇಶಕರನ್ನು ಹೊಂದುವುದು ಕಡ್ಡಾಯವಲ್ಲ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ಕಾರ್ಯಾನುಗುಣ ನಿರ್ದೇಶಕರ ಪರಿಭಾಷೆಯನ್ನು ನೀಡಿರುವುದಿಲ್ಲ. ಆದರೆ, ಪ್ರಚಲಿತ ಪದ್ಧತಿಯನ್ವಯ ಬಹುರಾಜ್ಯ ಸಹಕಾರ ಸಂಘಗಳ ಅಧಿನಿಯಮದಡಿ ಕಾರ್ಯನಿರ್ವಹಿಸುವ ಹಲವು ಸಹಕಾರ ಸಂಸ್ಥೆಗಳು ನಿರ್ದೇಶಕ ಹಣಕಾಸು, ನಿರ್ದೇಶಕ ಮಾನವ ಸಂಪನ್ಮೂಲ, ನಿರ್ದೇಶಕ ಮಾರುಕಟ್ಟೆ ಎಂಬಿತ್ಯಾದಿ ಹುದ್ದೆಗಳಲ್ಲಿ ಸಹಕಾರ ಸಂಸ್ಥೆಯ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಇಂತಹ ಸಿಬ್ಬಂದಿಗಳು ತಮ್ಮ ಹುದ್ದೆಯ ಸಾಮರ್ಥ್ಯದ ಮೇಲೆ ಸಹಕಾರ ಸಂಸ್ಥೆಯ ಆಡಳಿತ ಮಂಡಲಿಯಲ್ಲಿ ಕಾರ್ಯಾನುಗುಣ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಇವರನ್ನೇ ಕಾರ್ಯಾನುಗುಣ ನಿರ್ದೇಶಕರೆಂದು ಕರೆಯಲಾಗುತ್ತದೆ.

**ಜೀವನ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ., ಸಾಗರ**

**ಪ್ರಶ್ನೆ 02 : ಸೌಹಾರ್ದ ಸಹಕಾರಿಗಳು ಕೃಷಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಬಹುದೇ? ಕೃಷಿ ಜಮೀನು ಖರೀದಿಸಲು ಅವಕಾಶ ಇದೆಯೇ?**

**ಉತ್ತರ** : ಸೌಹಾರ್ದ ಸಹಕಾರಿಗಳು ತಮ್ಮ ಉಪವಿಧಿಯಲ್ಲಿ ಪ್ರಾವಧಾನವನ್ನು ಹೊಂದಿ, ಉಪವಿಧಿಯ ಪ್ರಾವಧಾನದಂತೆ ಕೃಷಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಬಹುದಾಗಿರುತ್ತದೆ. ಸೌಹಾರ್ದ ಸಹಕಾರಿಗಳು ಕೃಷಿ ಜಮೀನು ಖರೀದಿಸಲು ಅವಕಾಶವಿರುವುದಿಲ್ಲ.

**ಪ್ರಶ್ನೆ 03 : ಸಹಕಾರಿಗಳು ವಿವಿಧೋದ್ದೇಶಗಳಲ್ಲಿ ಕ್ರೆಡಿಟ್ ಹೊರತುಪಡಿಸಿದರೆ ಉತ್ತಮ ಆದಾಯ ಕೊಡಬಲ್ಲ ಸ್ವತಂತ್ರ ಕ್ಷೇತ್ರ ಯಾವುದು?**

**ಉತ್ತರ** : ಸಹಕಾರಿಯ ಬಂಡವಾಳ ತೊಡಗಿಸುವ ಸಾಮರ್ಥ್ಯ ಮತ್ತು ಕಾರ್ಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ವಿಧಾನದ ಆಧಾರದ ಮೇಲೆ ಉತ್ತಮ ಆದಾಯವು ಅವಲಂಬಿತವಾಗಿರುತ್ತದೆ. ಇಂತಹ ಹಲವಾರು ಕ್ಷೇತ್ರಗಳಿವೆ. ಉದಾಹರಣೆಗೆ ಉದ್ಯಮಗಳ ಸ್ಥಾಪನೆ, ಆಸ್ಪತ್ರೆಗಳು, ಸೂಪರ್ ಮಾರ್ಕೆಟ್, ಪೆಟ್ರೋಲ್ ಪಂಪ್‌ಗಳು ಇತ್ಯಾದಿ.

**ಪ್ರಶ್ನೆ 04 : ಸೌಹಾರ್ದ ಸಹಕಾರಿಗಳು ಪಿಗ್ಮಿ ಸಂಗ್ರಹಣೆ ಮೂಲಕ ಠೇವಣಿ ಸಂಗ್ರಹಣೆಗೆ ಇಳಿಯಬಹುದೇ? ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಪಿಗ್ಮಿ ಸಂಗ್ರಹಕ್ಕೆ ಅವಕಾಶ ಇಲ್ಲ ಎನ್ನುತ್ತಾರೆ. ಹೌದೇ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ಸೌಹಾರ್ದ ಸಹಕಾರಿಗಳು ಪಿಗ್ಮಿ ಸಂಗ್ರಹಿಸಲು ಯಾವುದೇ ನಿರ್ಬಂಧವಿರುವುದಿಲ್ಲ. ಸಹಕಾರಿಗಳು ಪಿಗ್ಮಿ ಸಂಗ್ರಹಿಸ ಬಹುದಾಗಿರುತ್ತದೆ.

**ಪ್ರಶ್ನೆ 05 : ಲಾಭ-ನಷ್ಟರಹಿತ, ಸಮಾಜ ಸೇವೆಯ ಮಾದರಿಯಲ್ಲಿ ನಮ್ಮ ಸಹಕಾರಿಯಿಂದ ಸೇವೆ ನೀಡಬೇಕೆಂದಿದೆ. ಯಾವ ಕ್ಷೇತ್ರ ಇದಕ್ಕೆ ಸೂಕ್ತ ಎಂಬುವುದನ್ನು ಮಾರ್ಗದರ್ಶನ ನೀಡಿ.**

ಉತ್ತರ : ಲಾಭ-ನಷ್ಟರಹಿತ, ಸಮಾಜ ಸೇವೆಯ ಮಾದರಿಯ ಸೇವೆಯನ್ನು ಸಹಕಾರಿಯ ಸದಸ್ಯರಿಗೆ ನೀಡಲು ಇಂತಹುದೇ ಕ್ಷೇತ್ರವೆಂಬುದಿಲ್ಲ. ಯಾವುದೇ ಕ್ಷೇತ್ರವನ್ನಾದರೂ ಆಯ್ಕೆ ಮಾಡಿಕೊಳ್ಳ ಬಹುದು. ಆದರೆ, ತಾವು ಇಚ್ಛಿಸುವ ಕಾರ್ಯಚಟುವಟಿಕೆ ಕೈಗೊಳ್ಳಲು ಸಹಕಾರಿಯ ಉಪವಿಧಿಯಲ್ಲಿ ಪ್ರಾವಧಾನ ಹೊಂದಿರ ಬೇಕಾಗುತ್ತದೆ. ಇಂತಹ ಹಲವಾರು ಸಹಕಾರ ಸಂಸ್ಥೆಗಳು ರಾಜ್ಯದಲ್ಲಿದ್ದು, ಭೇಟಿ ನೀಡಿ ಅಧ್ಯಯನ ಮಾಡಬಹುದಾಗಿರುತ್ತದೆ.

ಮುಂದಿನ ಪುಟಕ್ಕೆ...

# ಸೌಹಾರ್ದ ಸಹಕಾರಿಗಳಿಗಾಗಿ ಕಾಮನ್ ಸಾಫ್ಟ್‌ವೇರ್ ಅಂತಿಮ ಪಟ್ಟಿ : ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಿಂದ ಅನುಮೋದನೆ

ರಾಜ್ಯದ ಸೌಹಾರ್ದ ಸಹಕಾರಿಗಳ ಬಹುದಿನದ ಬೇಡಿಕೆಯಾಗಿದ್ದ ಕಾಮನ್ ಸಾಫ್ಟ್‌ವೇರ್ ಒದಗಿಸುವ ಬಗ್ಗೆ ಸಂಯುಕ್ತ ಸಹಕಾರಿಯು ದಿನಾಂಕ : 08–02–2018ರಂದು ನಡೆಸಲಾದ ಡೆಮೋ ಆಧಾರದ ಮೇಲೆ 14 ಸಂಸ್ಥೆಗಳನ್ನು ಗುರುತಿಸಲಾಗಿತ್ತು ಮತ್ತು ಅವುಗಳಿಂದ ದರಪಟ್ಟಿಗಳನ್ನು ಪಡೆಯಲಾಗಿತ್ತು. ದಿನಾಂಕ 25–04–2018ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ತೀರ್ಮಾನಿಸಿದಂತೆ ಎಲ್ಲಾ ಸಂಸ್ಥೆಗಳ ಜೊತೆಗೆ ಮತ್ತೊಮ್ಮೆ ಚರ್ಚಿಸಿ, ಪರಿಷ್ಕೃತ ದರಪಟ್ಟಿಯನ್ನು ಪಡೆದ ನಂತರ ದಿನಾಂಕ : 19–06–2018ರಂದು ನಡೆದ ಆಡಳಿತ ಮಂಡಲಿ ಸಭೆಯಲ್ಲಿ ಈ ಕೆಳಕಂಡ 7 ಕಂಪನಿಗಳನ್ನು ಅವುಗಳ ಮುಂದೆ ನಿಗದಿಪಡಿಸಿದ ಬಾಡಿಗೆ ದರದಲ್ಲಿ ಆಯ್ಕೆ ಮಾಡಿಕೊಳ್ಳಲು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ (ಸುತ್ತೋಲೆ ಮೂಲಕ) ತಿಳಿಸಬಹುದೆಂದು ತೀರ್ಮಾನಿಸಲಾಗಿದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ಪ್ರತಿ ಶಾಖೆಗೆ ಬಾಡಿಗೆ | ಕೇಂದ್ರ ಕಛೇರಿಗೆ ಬಾಡಿಗೆ | ಇತರ ಅಂಶಗಳು | |
|---|---|---|---|---|---|
| 1 | ಸಿ–ಎಡ್ಜ್ | ರೂ.1,999.00 | ರೂ. 999.00 | | ಡಾಟಾ ಮೈಗ್ರೇಷನ್/ ತರಬೇತಿ ಇತ್ಯಾದಿ ಪ್ರತ್ಯೇಕ ದರ |
| 2 | ಓವರ್ ಡ್ರೈವ್ | ರೂ.1,950.00 | ರೂ. 1,950.00 | ಶಾಖೆಗಳನ್ನು ಹೊಂದಿರದ ಸಂಸ್ಥೆಗಳಿಗೆ ಪ್ರತ್ಯೇಕ ಬಾಡಿಗೆ ಇರುವುದಿಲ್ಲ | |
| 3 | ಆಟೋಮೇಷನ್ | ರೂ.2,000.00 | ರೂ. 1,000.00 | | |
| 4 | ವಿ–ಸಾಫ್ಟ್ | ರೂ.2,000.00 | ರೂ. 800.00 | ಹತ್ತಕ್ಕಿಂತ ಹೆಚ್ಚು ಶಾಖೆಗಳಿದ್ದಲ್ಲಿ ಕೇಂದ್ರ ಕಛೇರಿಗೆ ಬಾಡಿಗೆ ಪಾವತಿಸಬೇಕಿಲ್ಲ. | |
| 5 | ಫಾರ್ಚ್ಯೂನ್ ಇನ್ಫೋಸರ್ವ್ | ರೂ.2,000.00 | ರೂ. 2,000.00 | ಶಾಖೆಗಳನ್ನು ಹೊಂದಿರದ ಸಂಸ್ಥೆಗಳಿಗೆ ಮಾಸಿಕ ಬಾಡಿಗೆ ಒಟ್ಟು ರೂ.3,000/– | |
| 6 | ಸಿದ್‌ಸಾಫ್ಟ್ | ರೂ.2,000.00 | ರೂ. 2,000.00 | ಶಾಖೆಗಳನ್ನು ಹೊಂದಿರದ ಸಂಸ್ಥೆಗಳಿಗೆ ಪ್ರತ್ಯೇಕ ಬಾಡಿಗೆ ಇರುವುದಿಲ್ಲ | |
| 7 | ಮೆಗಾಸಾಫ್ಟ್ | ರೂ.1,850.00 | ರೂ. 1,850.00 | | |

ರಾಜ್ಯದ ಸೌಹಾರ್ದ ಸಹಕಾರಿಗಳು ಈ ಮೇಲ್ಕಂಡ ಸಾಫ್ಟ್‌ವೇರ್ ಕಂಪನಿಗಳಲ್ಲಿ ತಮ್ಮ ಸಹಕಾರಿಗೆ ಸೂಕ್ತವಾಗುವ ಸಾಫ್ಟ್‌ವೇರ್ ಕಂಪನಿಗಳೊಡನೆ ಚರ್ಚಿಸಿ ಅಗತ್ಯ ಕ್ರಮವಿಡಬಹುದಾಗಿದೆ.

## ನಿಮ್ಮ ಪ್ರಶ್ನೆ – ನಮ್ಮ ಉತ್ತರ

....ಹಿಂದಿನ ಪುಟದಿಂದ

**ಪ್ರಶ್ನೆ 06 : ವ್ಯವಹಾರ ಕ್ಷೇತ್ರದಲ್ಲಿ ಬೇರೆ ವಾಣಿಜ್ಯೋದ್ಯಮಗಳೊಂದಿಗೆ ಒಪ್ಪಂದ ಮೂಲಕ ಜಂಟಿ ಕಾರ್ಯಚರಣೆ ಮಾಡಬಹುದೇ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 16ರನ್ವಯ ಯಾವುದೇ ಸೌಹಾರ್ದ ಸಹಕಾರಿ ಅಥವಾ ಸಹಕಾರಿಗಳು, ಸರ್ಕಾರದಿಂದ ಅನುಮೋದಿತವಾದ ಇತರೆ ಸಂಸ್ಥೆ ಅಥವಾ ಸಂಸ್ಥೆಗಳೊಂದಿಗೆ ಅಂಥ ಸಹಕಾರಿ ಅಥವಾ ಸಹಕಾರಿಗಳ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ವ್ಯವಹಾರಗಳನ್ನು ನಡೆಸುವುದಕ್ಕಾಗಿ ಸಹೋದ್ಯಮದಲ್ಲಿ ತೊಡಗಬಹುದು ಮತ್ತು ಸಹೋದ್ಯಮದ ನಂತರ ಅಂಥ ಸಂಸ್ಥೆಯು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಣಿಯಾಗಬಹುದು. ಅಗತ್ಯವಾಗಿರುವಲ್ಲಿ, ಅದನ್ನು ಯಾವ ಉದ್ದೇಶಗಳಿಗಾಗಿ ಸೃಜಿಸಲಾಯಿತೋ ಆ ಉದ್ದೇಶಗಳ ಪೂರೈಕೆಗಾಗಿ ಅಂಥ ಕಾನೂನಿನ ಅಡಿಯಲ್ಲಿನ ಒಂದು ಸಂಸ್ಥೆ ಎಂಬುದಾಗಿ ನೋಂದಾಯಿಸತಕ್ಕದ್ದು ಮತ್ತು ಸಹೋದ್ಯಮವನ್ನು ಪ್ರತಿ ವರ್ಷ ಸಹಕಾರಿಯ ಸಾಮಾನ್ಯ ನಿಕಾಯವು ಪುನರವಲೋಕನ ಮಾಡತಕ್ಕದ್ದು.

## ಸಚಿವರಾದ ಶ್ರೀ ವೆಂಕಟರಾವ್ ನಾಡಗೌಡರವರಿಗೆ ಅಭಿನಂದನೆ

### ರಾಜ್ಯದ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಅಗತ್ಯ ನೆರವು ನೀಡಲು ಬದ್ಧ - ಶ್ರೀ ವೆಂಕಟರಾವ್ ನಾಡಗೌಡ, ಮಾನ್ಯ ಸಚಿವರು, ಪಶುಸಂಗೋಪನೆ ಹಾಗೂ ಮೀನುಗಾರಿಕಾ ಇಲಾಖೆ



**ಸಿಂಧನೂರು :** ದಿನಾಂಕ : 28-06-2018ರಂದು ಸಿಂಧೂ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯಲ್ಲಿ ಮಾನ್ಯ ಸಚಿವರಾದ ಶ್ರೀ ವೆಂಕಟರಾವ್ ನಾಡಗೌಡರವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಮತ್ತು ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ.ರಾಜಶೇಖರರವರು ಮಾನ್ಯ ಸಚಿವರನ್ನು ಸ್ವಾಗತಿಸಿ, ಸನ್ಮಾನಿಸಿ, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯನ್ನು ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ತಿದ್ದುಪಡಿಗಳನ್ನು ಮಾಡಿಕೊಡಲು ನೆರವಾಗಬೇಕೆಂದು ವಿನಂತಿಸಿದರು. ನಂತರ ಮಾನ್ಯ ಸಚಿವರು ಮಾತನಾಡುತ್ತಾ ರಾಜ್ಯದ ಸಹಕಾರ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಾಕಷ್ಟು ವಿಷಯ ತಿಳಿದಿದ್ದೇನೆ. ಸಹಕಾರ ಕ್ಷೇತ್ರ ಸಾಮಾನ್ಯ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವ ಕ್ಷೇತ್ರವಾಗಿದೆ. ವಿಶೇಷವಾಗಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿದ್ದೇನೆ. ಈ ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ಅಗತ್ಯ ತಿದ್ದುಪಡಿಗಳನ್ನು ಮಾಡಿಕೊಡಲು ಮಾನ್ಯ ಸಹಕಾರ ಸಚಿವರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

## ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



**ಮೂಡಲಗಿ :** ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯ 2017-18ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಣ್ಣ ಕಡಾಡಿರವರ ಅಧ್ಯಕ್ಷತೆಯಲ್ಲಿ ಸಹಕಾರಿಯ ಸಭಾ ಭವನದಲ್ಲಿ ನಡೆಯಿತು.

ನಂತರ ಸಭೆಯಲ್ಲಿ ಮಾತನಾಡಿದ ಅವರು ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ಸದಸ್ಯರ ಹಾಗೂ ಸಿಬ್ಬಂದಿಗಳ ಸಹಕಾರದಿಂದ ರೂ.33 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಸಹಕಾರಿಯ ಸದಸ್ಯರಿಗೆ ಶೇ.19ರಷ್ಟು ಲಾಭಾಂಶ ವಿತರಿಸಲಾಗುವುದು ಎಂದು ಘೋಷಿಸಿದರು.

ಸಹಕಾರಿಯು 2197 ಸದಸ್ಯರು, ರೂ.10.39 ಲಕ್ಷ ಶೇರು ಬಂಡವಾಳ ಹೊಂದಿದ್ದು, ಗ್ರಾಹಕರಿಂದ ಒಟ್ಟು ಠೇವುಗಳು ರೂ.8.02 ಕೋಟಿ ಸಂಗ್ರಹವಿದ್ದು, ಗ್ರಾಹಕರಿಗೆ ವಿವಿಧ ಸಾಲಗಳ ಮೇಲೆ ರೂ.8.35 ಕೋಟಿ ಸಾಲ ವಿತರಿಸಲಾಗಿದೆ ಎಂದು ತಿಳಿಸಿದರು.

ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ರಾಜಪ್ಪ ಗೋಸಬಾಳ, ನಿರ್ದೇಶಕರುಗಳು ಮತ್ತು ಬೆಟಗೇರಿ ಶಾಖೆಯ ಸಲಹಾ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಅತಿಥಿ ಗ್ರಾಹಕರುಗಳು ಉಪಸ್ಥಿತರಿದ್ದರು.

ಪ್ರಧಾನ ವ್ಯವಸ್ಥಾಪಕರಾದ ಶ್ರೀ ಹಣಮಂತ ಕಲಕುಟ್ರೆ ಸ್ವಾಗತಿಸಿದರು. ಶ್ರೀ ಪರಪ್ಪ ಗಿರೆಣ್ಣವರ ವಾರ್ಷಿಕ ವರದಿ ಓದಿದರು. ಶ್ರೀ ಶಂಕರ ಕೌಜಲಗಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಹಣಮಂತ ಪಾಟೀಲ ವಂದಿಸಿದರು.

## ದಿ. ಲಕ್ಷ್ಮೀಬಾಯಿ ಕುಂಬಾರ ಮಹಿಳಾ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ

**ಚಿಂಚಣಿ :** ದಿ. ಲಕ್ಷ್ಮೀಬಾಯಿ ಕುಂಬಾರ ಮಹಿಳಾ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಂಚಣಿ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17-06-2018ರಂದು ಶ್ರೀ ಸಿದ್ಧಪ್ರಭು ಕನ್ನಡ ಭವನ, ಚಿಂಚಣಿ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಸುಮಿತ್ರ ಶ್ರೀಪಾಲ ಕುಂಬಾರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ದಿವ್ಯ ಸಾನಿಧ್ಯವನ್ನು ಶ್ರೀ ಅಲ್ಲಮಪ್ರಭು ಮಹಾಸ್ವಾಮಿಗಳು, ಸಿದ್ಧ ಸಂಸ್ಥಾನ ಮಠ, ಚಿಂಚಣಿ ಇವರು ವಹಿಸಿದ್ದರು. ಸಭೆಯಲ್ಲಿ ಗಮನಾರ್ಹ ಸಾಧನೆಗೈದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ



ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು. ವಿಶ್ವ ಪರಿಸರ ದಿನ ನಿಮಿತ್ಯ ಉಚಿತ ಸಸಿ ವಿತರಣೆ ಮಾಡಲಾಯಿತು.

## ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ 5ನೇ ಶಾಖೆಯ ಉದ್ಘಾಟನೆ

**ಬೆಂಗಳೂರು :** ಬೆಂಗಳೂರು ನಗರದ ಬನ್ನೇರುಘಟ್ಟ ರಸ್ತೆಯ ಹುಳಿಮಾವುನಲ್ಲಿ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ 5ನೇ ಶಾಖೆಯಾದ ಅರಕೆರೆ ಶಾಖೆಯನ್ನು ದಿನಾಂಕ : 13-05-2018ರಂದು ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಸಿ.ಪ್ರಸಾದ್ ರೆಡ್ಡಿರವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಸಹಕಾರಿ ಬ್ಯಾಂಕುಗಳು ನಗರದಲ್ಲಿ ಕೇಂದ್ರೀಕೃತವಾಗದೇ ಗ್ರಾಮಾಂತರ ಪ್ರದೇಶದತ್ತ ವಿಸ್ತರಿಸಬೇಕು. ಜನಪ್ರಿಯ ನಾಣ್ನುಡಿಯಂತೆ ಆಡು ಮುಟ್ಟದ ಸೊಪ್ಪಿಲ್ಲ, ಸಹಕಾರಿ ತಲುಪದ ಗ್ರಾಮವಿಲ್ಲ ಎಂಬ ಮಾತು ಜನಜನಿತವಾಗಿರುವಂತೆ ಸಹಕಾರಿ ಬ್ಯಾಂಕುಗಳು ಎಲ್ಲೆಡೆ ಪಸರಿಸುತ್ತಿವೆ. ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸಹಕಾರಿ ಬ್ಯಾಂಕುಗಳು ಪೈಪೋಟಿ ನೀಡುವುದು ಕಷ್ಟಕರವಾದ ಪರಿಸ್ಥಿತಿಯಲ್ಲಿ ಸಹಕಾರಿ ಬ್ಯಾಂಕುಗಳು ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿವೆ ಎಂದರು.

ನಂತರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವರೆಡ್ಡಿಯವರು ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ ಎಲ್ಲಾ ಗಣ್ಯರಿಗೂ ಸ್ವಾಗತ ಕೋರಿದರು ಹಾಗೂ ನಂತರ ಮಾತನಾಡಿದ ಅವರು ನಮ್ಮ ಬ್ಯಾಂಕು ಮಾರ್ಚ್ 2018ರ ಅಂತ್ಯಕ್ಕೆ 8477 ಸದಸ್ಯರುಗಳನ್ನು ಹೊಂದಿದ್ದು, ರೂ.13.80 ಕೋಟಿ ಶೇರು ಬಂಡವಾಳವನ್ನು ಕ್ರೋಢೀಕರಿಸಿದೆ, ರೂ.205 ಕೋಟಿಗೂ ಅಧಿಕ ಠೇವಣಿ ಸಂಗ್ರಹಣೆ ಮಾಡಿ ರೂ.138 ಕೋಟಿಗಳ ಸಾಲ ಸೌಲಭ್ಯಗಳನ್ನು ನೀಡಿದೆ ಹಾಗೂ ಬ್ಯಾಂಕಿನ



ವ್ಯವಹಾರವು ರೂ.330 ಕೋಟಿಗಳಷ್ಟಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ಕೊಟ್ಟ ಸಾಲಗಳನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡಿ ಸತತವಾಗಿ ಎರಡು ವರ್ಷಗಳಿಂದ ಶೂನ್ಯ ಎನ್.ಪಿ.ಎ. ಪ್ರಮಾಣವನ್ನು ಕಾಪಾಡಿಕೊಂಡು ಬಂದಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ರೂ.3.65 ಕೋಟಿ ಲಾಭ ಗಳಿಸಿದೆ ಎಂದು ತಿಳಿದರು.

ನಿವೃತ್ತ ಐ.ಪಿ.ಎಸ್. ಅಧಿಕಾರಿಗಳು ಹಾಗೂ ಬ್ಯಾಂಕಿನ ಸದಸ್ಯರಾದ ಶ್ರೀ ರಾಮಸುಬ್ಬು, ಸಹಕಾರಿಗಳ ಹೆಚ್ಚುವರಿ ನಿಬಂಧಕರಾದ ಶ್ರೀ ವೆಂಕಟರೆಡ್ಡಿ, ವಿಲ್ಸನ್ ಗಾರ್ಡನ್ ಕ್ಲಬ್‌ನ ಅಧ್ಯಕ್ಷರು ಹಾಗೂ ಸಮಾಜ ಸೇವಕರಾದ ಶ್ರೀ ಟಿ.ಆರ್.ಶ್ರೀನಿವಾಸರೆಡ್ಡಿ, ಕೋದಂಡರಾಮಸ್ವಾಮಿ ದೇವಾಲಯದ ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳಾದ ಶ್ರೀ ಟಿ.ಶ್ರೀನಿವಾಸ ರೆಡ್ಡಿ, ಶ್ರೀ ಹೆಚ್.ಕೆ.ಮುತ್ತಪ್ಪ, ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರುಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ATM ಯಂತ್ರದ ಉದ್ಘಾಟನೆ

**ಬೆಂಗಳೂರು :** ದಿನಾಂಕ 19-05-2018ರಂದು ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ ವಿ.ವಿ.ಪುರಂ ಶಾಖೆಯ ಸ್ವಂತ ಕಟ್ಟಡದ ಆವರಣದಲ್ಲಿ ಅಳವಡಿಸಿರುವ ಎ.ಟಿ.ಎಂ. ಯಂತ್ರವನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವರೆಡ್ಡಿರವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಬ್ಯಾಂಕಿನ ಗ್ರಾಹಕರಿಗೆ ವಿಶೇಷ ಚಿಪ್ ಹಾಗೂ ಮ್ಯಾಗ್ನೆಟಿಕ್‌ಸ್ಟ್ರೈಪ್ ಹೊಂದಿರುವ ಆಧುನಿಕ 'Rupay ATM/ Debit Card'ಗಳನ್ನು ವಿತರಿಸಲಾಗುತ್ತಿದ್ದು, ಸದರಿ ಡೆಬಿಟ್ ಕಾರ್ಡ್‌ಗಳನ್ನು ಯಾವುದೇ ಬ್ಯಾಂಕಿನ ಎ.ಟಿ.ಎಂ.ಗಳಲ್ಲಿ ಬಳಕೆ ಮಾಡಬಹುದಾಗಿದೆ ಹಾಗೂ ಇತರೆ ಬ್ಯಾಂಕುಗಳ ಎ.ಟಿ.ಎಂ. ಕಾರ್ಡ್‌ಗಳನ್ನು ಇಲ್ಲಿಯೂ ಬಳಸಬಹುದಾಗಿದೆ ಎಂದರು. ಈ ಸಂದರ್ಭದಲ್ಲಿ ಆಡಳಿತ ಮಂಡಲಿಯ ನಿರ್ದೇಶಕರುಗಳು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿಯ 6ನೇ ಶಾಖೆಯ ಉದ್ಘಾಟನೆ

**ಸಿಂಧನೂರು** : ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯ 6ನೇ ಶಾಖೆಯನ್ನು ಸಿಂಧನೂರಿನಲ್ಲಿ ದಿನಾಂಕ : 21-06-2018ರಂದು ಉದ್ಘಾಟಿಸಲಾಯಿತು.

ಸಾನಿಧ್ಯವನ್ನು ಶ್ರೀ ಷ.ಬ್ರ. ಸೋಮನಾಥ ಶಿವಾಚಾರ್ಯ ಸ್ವಾಮಿಗಳು, ಬಾಳೆಹೊನ್ನೂರು ಖಾಸಾ ಶಾಖಾ ಮಠ, ಸಿಂಧನೂರು ಮತ್ತು ಪರಮ ಪೂಜ್ಯ ಶ್ರೀ ವರರುದ್ರಮುನಿ ದೇವರು, ಗಚ್ಚಿನ ಹಿರೇಮಠ, ಮಸ್ಕಿ ಅವರು ವಹಿಸಿಕೊಂಡಿದ್ದರು. ಶ್ರೀ ಪ್ರತಾಪಗೌಡ ಪಾಟೀಲ್, ಮಾನ್ಯ ಶಾಸಕರು, ಮಸ್ಕಿ ಕ್ಷೇತ್ರ, ಶ್ರೀ ಹಂಪನಗೌಡ ಬಾದರ್ಲಿ, ಮಾನ್ಯ ಮಾಜಿ ಶಾಸಕರು & ಅಧ್ಯಕ್ಷರು, ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು, ಶ್ರೀ ವಿರುಪಾಕ್ಷಪ್ಪ.ಕೆ, ಮಾನ್ಯ ಮಾಜಿ ಸಂಸದರು, ಕೊಪ್ಪಳ ಲೋಕಸಭಾ ಕ್ಷೇತ್ರ, ಶ್ರೀ ಮನೋಹರ ಮಸ್ಕಿ, ಮಾನ್ಯ ಮಾಜಿ ವಿಧಾನ ಪರಿಷತ್ ಸದಸ್ಯರು & ಮಾಜಿ (ಸಂಸ್ಥಾಪಕ) ಅಧ್ಯಕ್ಷರು, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್, ಬಳ್ಳಾರಿ, ಶ್ರೀ ಐ.ಎಸ್.ಗಿರಡ್ಡಿ, ಜಂಟಿ ನಿಬಂಧಕರು, ಗುಲ್ಬರ್ಗಾ ಪ್ರಾಂತ ವಿಭಾಗ, ರಾಯಚೂರು, ಶ್ರೀ ತಿಮ್ಮಯ್ಯ ಶೆಟ್ಟಿ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು,




ಶ್ರೀ ರಾಜಶೇಖರ ಬಿ., ವೃತ್ತಿಪರ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀ ಪಂಪಣ್ಣ ಗುಂಡಳ್ಳಿ, ಉಪಾಧ್ಯಕ್ಷರು, ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಕಾರಿಯ ಅಧ್ಯಕ್ಷರಾದ ಡಾ. ಶಿವಶರಣಪ್ಪ ಇತ್ಲಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಹಕಾರಿಯ ಸಿಬ್ಬಂದಿಯಾದ ಶ್ರೀ ವೀರಯ್ಯರವರು ನೆರವೇರಿಸಿದರು.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಗ್ರಾಹಕರ ಸಮ್ಮಿಲನ ಮತ್ತು ಪುಸ್ತಕ ಬಿಡುಗಡೆ

## ಸಾಮಾಜಿಕ ಚಟುವಟಿಕೆಯಲ್ಲೂ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ತೊಡಗಿಸಿಕೊಂಡಿದೆ - ಶ್ರೀ ಎಸ್.ಆರ್.ಸತೀಶ್ಚಂದ್ರ

**ಪುತ್ತೂರು** : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಹಾಗೂ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪುತ್ತೂರಿನ ಎಂಎಸ್ ರಸ್ತೆ ಶಾಖೆಯ 13ನೇ ವರ್ಷದ ಸಂಭ್ರಮಾಚರಣೆ ಪ್ರಯುಕ್ತ ನಡೆದ ಗ್ರಾಹಕರ ಸಮ್ಮಿಲನ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರರವರು ಸಹಕಾರಿ ತತ್ವದ ಮೂಲಕ ಪುತ್ತೂರಿನಲ್ಲಿ ಆರಂಭಗೊಂಡ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯು ಇಂದು ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಯ ಮೂಲಕ ರಾಜ್ಯದಲ್ಲಿ ಗುರುತಿಸುವಂತೆ ಮಾಡಿದೆ. ಇದಕ್ಕೆ ಸರ್ವ ಗ್ರಾಹಕರ ಬೆಂಬಲ ಹಾಗೂ ಸಹಕಾರ ಕಾರಣವಾಗಿದೆ ಎಂದು ತಿಳಿದರು. ಜೊತೆಗೆ ಚಾರಿಟೇಬಲ್ ಟ್ರಸ್ಟ್ ಮೂಲಕ ಸಾಮಾಜಿಕ ಕಾರ್ಯವನ್ನೂ ನಡೆಸುತ್ತಿದ್ದು, ಈ ಎಲ್ಲಾ ಕಾರ್ಯಕ್ಕೆ ಎಲ್ಲಾ ಗ್ರಾಹಕರು ಸಹಕಾರ ನೀಡುತ್ತಿರುವುದೇ ಇಂದು ರಾಜ್ಯ ಮಟ್ಟದಲ್ಲಿ ಗುರುತಿಸುವಂತಾಗಲು ಕಾರಣವಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ, ಸಾವಯವ ತರಕಾರಿ ಕೃಷಿಯ "ಸ್ವಾಭಿಮಾನದ ಖುಷಿ ಸಾವಯವ ಕೃಷಿ" ಪುಸ್ತಕ ಬಿಡುಗಡೆಗೊಳಿಸಿದ ಪುತ್ತೂರು ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಮಹೇಶ್ ಪುಚ್ಚಪ್ಪಾಡಿರವರು ಮಾತನಾಡಿ ಪುಸ್ತಕ ಬಿಡುಗಡೆಯಂತಹ




ಕಾರ್ಯಕ್ರಮ ಸಹಕಾರಿಯೊಂದು ಮಾಡುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಲೇಖಕರು, ಪ್ರಗತಿಪರ ಕೃಷಿಕರೂ ಆದ ಶ್ರೀ ಶಂಕರನಾರಾಯಣ ಭಟ್ ಖಂಡಿಗೆರವರು ಮಾತನಾಡಿ, ಅನುಭವ ಹೊಂದಿದ ತರಕಾರಿ ಕೃಷಿಯ ಬಗ್ಗೆ ಪುಸ್ತಕದಲ್ಲಿ ದಾಖಲಿಸಲಾಗಿದೆ. ಸಾವಯವ ಕೃಷಿಯನ್ನೇ ಮಾಡುವುದರಿಂದ ಆರೋಗ್ಯ ಹಾಗೂ ಪರಿಸರವೂ ಉತ್ತಮಗೊಳ್ಳಲಿದೆ ಎಂದರು. ವೇದಿಕೆಯಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಭವಾನಿ ಪ್ರಭು ಉಪಸ್ಥಿತರಿದ್ದರು. ಇದೇ ಸಂದರ್ಭ ಗ್ರಾಹಕರ ಪರವಾಗಿ ಸಹಕಾರಿಯ ಸದಸ್ಯರಾದ ಶ್ರೀ ಬಾಲಕೃಷ್ಣ ನಾಯಕ್ ಅನಿಸಿಕೆ ವ್ಯಕ್ತಪಡಿಸಿದರು. ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿ ಶ್ರೀ ಸುನಿಲ್ ಬೋರ್ಕರ್‌ರವರು ಟ್ರಸ್ಟ್‌ನ ಮುಂದಿನ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

## ವಿಶ್ವ ಪರಿಸರ ದಿನಾಚರಣೆ



**ಸಸಾಲಟ್ಟಿ :** ಶ್ರೀ ವೀರರುದ್ರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಸಸಾಲಟ್ಟಿ ಸಹಕಾರಿಯು ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರ ಜಾಗೃತಿಯನ್ನು ಸಸಿಯನ್ನು ಕೊಡುವ ಮುಖಾಂತರ ಮತ್ತು ಸಸಿಯನ್ನು ನೆಡುವ ಮುಖಾಂತರ ವಿವಿಧ ಶಾಲಾ–ಕಾಲೇಜುಗಳಿಗೆ ಸಸಿಯನ್ನು ಕೊಟ್ಟು ಪರಿಸರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪರಪ್ಪ ಚ. ಮದನಮಟ್ಟಿ ಮತ್ತು ಉಪಾಧ್ಯಕ್ಷರಾದ ಶ್ರೀ ಪ್ರಕಾಶ ಚ. ಮರಡಿ ಮತ್ತು ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಯೋಗ ದಿನಾಚರಣೆ



ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸಹಕಾರಿಯ ಬಹುತೇಕ ಶಾಖೆಗಳಲ್ಲಿ ದಿನಾಂಕ 21.06.2018ರಂದು ಸಂಜೆ 5.30 ರಿಂದ 6.00 ಗಂಟೆಯವರೆಗೆ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಧಾನ ಕಛೇರಿಯ ಎಲ್ಲಾ ಸಿಬ್ಬಂದಿಗಳು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರೋಸಲಿನ್ ಫರ್ನಾಂಡಿಸ್‌ರವರ ಮುಖಂಡತ್ವದಲ್ಲಿ ಯೋಗಾಚರಣೆ ಮಾಡಲಾಯಿತು. ಪ್ರಾರಂಭದಲ್ಲಿ ಅಧ್ಯಕ್ಷರು ಯೋಗದ ಕುರಿತು ಮಾತನಾಡಿ "ಮನುಷ್ಯನು ಆರೋಗ್ಯವಂತನಾಗಿದ್ದಲ್ಲಿ ಮಾತ್ರ ಯಾವುದೇ ರೀತಿಯ ಸಂಪತ್ತನ್ನು ಗಳಿಸಲು ಸಾಧ್ಯ, ಆರೋಗ್ಯ ಸರಿಯಾಗಿರಬೇಕಾದರೇ ಯೋಗ ಮಾಡುವುದು ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಯೋಗವು ಒಂದು ದಿನಕ್ಕೆ ಮಾತ್ರ ಸೀಮಿತವಾಗಿರದೇ ನಿರಂತರವಾಗಿರಬೇಕು" ಎಂದು ತಿಳಿಸಿದರು.

ಸಹಕಾರಿಯ ಎಲ್ಲಾ 72 ಶಾಖೆಗಳಲ್ಲಿ ಶಾಖಾ ವ್ಯವಸ್ಥಾಪಕರು ಯೋಗದ ಮಹತ್ವವನ್ನು ಸಿಬ್ಬಂದಿಗಳಿಗೆ ತಿಳಿಸಿ, ಅವರವರ ಶಾಖೆಗಳಲ್ಲಿ ಒಟ್ಟಿಗೆ ಯೋಗಾಸನದಲ್ಲಿ ಪಾಲ್ಗೊಳ್ಳುವ ಮೂಲಕ ಯೋಗ ದಿನಾಚರಣೆಯನ್ನು ಆಚರಿಸಿದರು.

## ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಯಲ್ಲಿ ಯೋಗ ದಿನಾಚರಣೆ

**ಗದಗ :** ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ ಸಹಕಾರಿಯಲ್ಲಿ 4ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಂಸ್ಥೆಯ ಆವರಣದಲ್ಲಿ ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ವಿ.ಎಸ್.ಶಿವಕಾಳಿಮಠ, ಮುಖ್ಯ ಅತಿಥಿಗಳಾದ ಡಾ|| ಕುನಾಲ್ ಅಳ್ಳೊಳ್ಳಿರವರು ಮಾತನಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಎಂ.ಜಿ.ಗಾಣಿಗೇರ್ ಮತ್ತು ವ್ಯವಸ್ಥಾಪಕರಾದ ಶ್ರೀ ಬಿ.ಎಂ.ಹಳ್ಳಿಕೇರಿ, ಶ್ರೀ ಜೆ.ವಿ.ಹುಡೇದ, ಶ್ರೀ ಎಸ್.ಎಸ್.ಹಳ್ಳಿಕೇರಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ಯೋಗ ದಿನಾಚರಣೆಯನ್ನು ಯಶಸ್ವಿಗೊಳಿಸಿದರು.

ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಉಡುಪಿ ಸಹಕಾರಿಗೆ ಶ್ರೀ ವೈ.ವಿ.ಗುಂಡುರಾವ್ ಇವರ ಭೇಟಿ.



# 2017-18ನೇ ಸಾಲಿಗೆ ಅಂತ್ಯಗೊಂಡಿರುವ ಸೌಹಾರ್ದ ಸಹಕಾರಿಗಳ ಆರ್ಥಿಕ ಪ್ರಗತಿಯ ಅಂಕಿ-ಅಂಶಗಳು

## ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ

| ದಿನಾಂಕ : 31-03-2018ರ ಪ್ರಗತಿ ನೋಟ | |
|---|---|
| ಒಟ್ಟು ಸದಸ್ಯರು | 3150 |
| ಶೇರು ಬಂಡವಾಳ | ರೂ.81,42,500 |
| ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು | ರೂ.7,22,79,089 |
| ಠೇವಣಿಗಳು | ರೂ.17,01,39,333 |
| ಸಾಲ | ರೂ.20,22,23,028 |
| ಗುಂತಾವಣೆಗಳು | ರೂ.4,29,95,400 |
| ನಿವ್ವಳ ಲಾಭ | ರೂ.1,35,71,674 |
| ವಸೂಲಾತಿ | 100 % |
| ವಹಿವಾಟು (ವರ್ಷದ) | ರೂ.104 ಕೋಟಿ 94 ಲಕ್ಷ |
| ದುಡಿಯುವ ಬಂಡವಾಳ | ರೂ.25,05,60,923 |
| ಶೇರು ಡಿವಿಡೆಂಡ್ | 25 % |



ಸಂಸ್ಥಾಪಕ ಅಧ್ಯಕ್ಷರು :
'ಶ್ರೇಷ್ಠ ಸಹಕಾರಿ'
ಶ್ರೀ ಬಾಳಪ್ಪಾ ಬಸಪ್ಪಾ ಬೆಳಕೂಡ
ಉಪಾಧ್ಯಕ್ಷರು : ಶ್ರೀ ಶಿವರುದ್ರ ಬಾಳಪ್ಪಾ ಬಿ॥ ಪಾಟೀಲ
ನಿರ್ದೇಶಕರು : ಶ್ರೀ ಭೀಮಪ್ಪ ಸತ್ತೆಪ್ಪ ಕಡಾಡಿ, ಶ್ರೀ ಬಸಗೌಡ ಶಿವಗೌಡ ಪಾಟೀಲ, ಶ್ರೀ ಬಸವಣ್ಣೆಪ್ಪ ಶೆಟ್ಟೆಪ್ಪ ಗೋರೋಶಿ, ಶ್ರೀ ಮಲ್ಲಪ್ಪ ಬಾಳಪ್ಪ ಖಾನಾಪೂರ, ಶ್ರೀ ರಾಮಪ್ಪ ಬೀಮಪ್ಪ ದಬಾಡಿ, ಶ್ರೀ ಶಿವಪ್ಪ ಬಸಪ್ಪ ಹೆಬ್ಬಾಳ, ಶ್ರೀ ಹಣಮಂತ ದುಂಡಪ್ಪ ಪರಕನಟ್ಟಿ, ಶ್ರೀ ಸುಭಾಸ ಮಲ್ಲಪ್ಪ ಖಾನಾಪೂರ, ಶ್ರೀ ರವಿಕಾಂತ ನಾಗಪ್ಪ ಶಿರಗಾಂವಕರ, ಶ್ರೀಮತಿ ಬಾಯವ್ವಾ ಬಾಳಪ್ಪ ಕಂಕಣವಾಡಿ, ಶ್ರೀಮತಿ ಗೀತಾ ಅಶೋಕ ಹೊಟ್ಟಿಹೊಳಿ.
ಪ್ರಧಾನ ವ್ಯವಸ್ಥಾಪಕರು : ಹಣಮಂತ ಸತ್ತೆಪ್ಪಾ ಖಾನಗೌಡ್ರ

## ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಚಳ್ಳಕೆರೆ

| ದಿನಾಂಕ 31-03-2018ಕ್ಕೆ ಇದ್ದಂತೆ (ರೂ. ಲಕ್ಷಗಳಲ್ಲಿ) | |
|---|---|
| ಸದಸ್ಯರ ಸಂಖ್ಯೆ | 1335 |
| ವಸೂಲಾದ ಶೇರು ಬಂಡವಾಳ | ರೂ.147.39 |
| ಕಾಯ್ದಿಟ್ಟ ನಿಧಿ ಮತ್ತು ಇತರ ನಿಧಿಗಳು | ರೂ.854.96 |
| ಠೇವಣಿಗಳು ಮತ್ತು ದುಡಿಯುವ ಬಂಡವಾಳ | ರೂ.3411.34 |
| ಸಾಲಗಳು | ರೂ.2059.19 |
| ಒಟ್ಟು ವಹಿವಾಟು | ರೂ.7090.00 |
| ನಿವ್ವಳ ಲಾಭ | ರೂ.203.59 |
| ಲಾಭಾಂಶ ನೀಡಲಿರುವುದು | 25% |
| ಸಾಲ ವಸೂಲಾತಿ | ಶೇ.99 |
| ಪ್ರತಿ ಶೇರಿನ ಗಳಿಕೆ | ರೂ.13.81 |
| ಎನ್.ಪಿ.ಎಮ್ | 9.96 |
| ಒಟ್ಟು ಆದಾಯ | ರೂ.452.42 |
| ಸಹಕಾರಿಯ ಹೂಡಿಕೆಗಳು | ರೂ.1168.53 |

## ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ವಾಟರ್ ಕೂಲರ್ ಕೊಡುಗೆ



**ಕೋಡಿ ಕನ್ಯಾಣ :** ಕೋಡಿ ಕನ್ಯಾಣ ಕನ್ನಡ ಮಾಧ್ಯಮ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಅವಶ್ಯಕತೆ ಇರುವುದರಿಂದ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಾಲಾಭಿವೃದ್ಧಿ ಸಮಿತಿಯ ಸದಸ್ಯರ ವಿನಂತಿಯ ಮೇರೆಗೆ ಅವರ ಮನವಿಗೆ ಒಗೊಟ್ಟು ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಚರ್ಚಿಸಿ, ನಿರ್ಣಯಿಸಿದಂತೆ ವಾಟರ್ ಕೂಲರ್ ಖರೀದಿಗೆ ತಗಲುವ ಮೊತ್ತ ರೂ.30,520/-ರ ಚೆಕ್ಕನ್ನು ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಶಾಲಾಭಿವೃದ್ಧಿ ಸಮಿತಿಗೆ ಸಹಕಾರಿಯ ಕಛೇರಿಯಲ್ಲಿ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಭು ಶಂಕರ್, ಉಪಾಧ್ಯಕ್ಷರಾದ ಶ್ರೀ ಮಹಾಬಲ ಕುಂದರ್ ಹಾಗೂ ಎಲ್ಲಾ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗ ಹಾಗೂ ಶಾಲಾಭಿವೃದ್ಧಿ ಸಮಿತಿಯ ಎಲ್ಲಾ ಸದಸ್ಯರು ಹಾಜರಿದ್ದರು.

# ಸಹಕಾರ ಕ್ಷೇತ್ರದಲ್ಲಿ ಬಹುಮುಖ ಹಾಗೂ ಸಾರ್ಥಕ ಸೇವೆಗೆ ಹೆಸರುವಾಸಿ ಶಿರಸಿಯ ತೋಟಗಾರ್ಸ್ ಸಹಕಾರ ಸಂಘ (ಟಿ.ಎಸ್.ಎಸ್)

ಭಾಸ್ಕರ ಹೆಗಡೆ ಕಾಗೇರಿ, ಉಪಾಧ್ಯಕ್ಷರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಉತ್ತರ ಕನ್ನಡ.






ಸಂಸ್ಥಾಪಕ ಅಧ್ಯಕ್ಷರಾದ ದಿ. ಎಸ್.ಆರ್.ಹೆಗಡೆ ಕಡವೆರವರ ಭಾವಚಿತ್ರದೊಂದಿಗೆ ಪ್ರಸ್ತುತ ಅಧ್ಯಕ್ಷರಾದ ಶ್ರೀ ಶಾಂತಾರಾಮ ವಿ. ಹೆಗಡೆ

ಸೇವೆಯನ್ನೇ ಉದ್ದೇಶವಾಗಿಟ್ಟುಕೊಂಡು ಸಹಕಾರಿ ತತ್ವದಡಿಯಲ್ಲಿ ಬೆಳೆದ ಸಂಸ್ಥೆಯೊಂದು ಎಷ್ಟೊಂದು ಬಗೆಯಲ್ಲಿ ಸದಸ್ಯರಿಗೆ, ಗ್ರಾಹಕರಿಗೆ ನೆರವಾಗಬಹುದು? ಇಂಥ ಪ್ರಶ್ನೆಗೆ ಇಲ್ಲೊಂದು ಅಪರೂಪದ ಉತ್ತರವಿದೆ. ಅದುವೇ ಶಿರಸಿಯ ಅಡಿಕೆ ಬೆಳೆಗಾರರ ಸಂಸ್ಥೆ ಟಿ.ಎಸ್.ಎಸ್. ಎಂದೇ ಚಿರಪರಿಚಿತವಾಗಿರುವ ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿ., ಶಿರಸಿ (ಉ.ಕ.).

ಸಾಮಾನ್ಯವಾಗಿ ಸಹಕಾರ ಸಂಘಗಳು ಸೇವೆಯ ಉದ್ದೇಶದಿಂದಲೇ ಹುಟ್ಟಿಕೊಳ್ಳುತ್ತವೆ. ಬಹುತೇಕವಾಗಿ ನಿರ್ದಿಷ್ಟ ಉದ್ದೇಶಗಳಿಗಾಗಿ ಸ್ಥಾಪಿತಗೊಂಡು ಅವನ್ನು ಈಡೇರಿಸುವಲ್ಲಿ ಯಶಸ್ವಿಯಾದ ಬಹಳಷ್ಟು ಸಹಕಾರ ಸಂಘಗಳು ನಮ್ಮ ಕಣ್ಣೆದುರಿವೆ. ಆದರೆ ಸ್ಥಾಪಿತ ಉದ್ದೇಶದ ಜೊತೆಯಲ್ಲಿ ಸದಸ್ಯರ ಅಗತ್ಯಗಳ ಈಡೇರಿಕೆಗಾಗಿ ವೈವಿಧ್ಯಮಯ ಸೇವೆಗಳನ್ನು ಯಶಸ್ವಿಯಾಗಿ ನೀಡುತ್ತಿರುವುದರಿಂದಾಗಿ ಟಿ.ಎಸ್.ಎಸ್. ಉಳಿದ ಸಹಕಾರ ಸಂಘಗಳಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ತನ್ನ ಬಹುಮುಖಿ ಸೇವೆಯಿಂದಲೇ ಸದಸ್ಯರಿಗೆ ಅಭಯ ನೀಡಿದ್ದಲ್ಲದೇ, ಅಡಿಕೆ ಮಾರುಕಟ್ಟೆಯ ಸ್ಥಿರತೆಗೂ ಬಲವಾದ ಹೆಜ್ಜೆ ಇಟ್ಟಿದೆ.

ಖಾಸಗಿ ವಲಯದಿಂದ ಶೋಷಣೆಗೊಳಗಾಗುತ್ತಿದ್ದ ಅಡಿಕೆ ಬೆಳೆಗಾರರ ಹಿತ ಕಾಪಾಡಲು ಸಮಾನ ಮನಸ್ಕರು 1923ರಷ್ಟು ಹಿಂದೆಯೇ ಆರಂಭಿಸಿದ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಬರೋಬ್ಬರಿ ಒಂಭತ್ತು ದಶಕಗಳಿಗೂ ಅಧಿಕ ಕಾಲದಿಂದ ಸದಸ್ಯರಿಗೆ ವೈವಿಧ್ಯಮಯ ಸೇವೆ ಸಲ್ಲಿಸುವುದರೊಂದಿಗೆ ಸಂಸ್ಥಾಪಕರ ಕನಸುಗಳನ್ನು ಸಾಕಾರಗೊಳಿಸುತ್ತಿದೆ. ಸದಸ್ಯರ ರಕ್ಷಣೆಯನ್ನೇ ಪರಮೋಚ್ಚ ಗುರಿಯನ್ನಾಗಿಸಿಕೊಂಡು ಸಹಕಾರ ಕ್ಷೇತ್ರದ ವ್ಯಾಪ್ತಿಯನ್ನು ವಿಸ್ತಾರಗೊಳಿಸುವ ಮೂಲಕ ದಿನದಿಂದ ದಿನಕ್ಕೆ ಹೊಸ ಹೊಸ ಸೇವೆಗಳನ್ನು ನೀಡುತ್ತಿದೆ.

**ಪ್ರಮುಖ ಸೇವಾ ಚಟುವಟಿಕೆಗಳು :** ಅಡಿಕೆ, ಕಾಳುಮೆಣಸು, ಯಾಲಕ್ಕಿ ಇತ್ಯಾದಿ ತೋಟದ ಬೆಳೆಗಳಿಗೆ ಪಾರದರ್ಶಕ ಮಾರುಕಟ್ಟೆ ವ್ಯವಸ್ಥೆ, ಸದಸ್ಯರು ಸಂಘದ ಮೂಲಕ ಮಾಡುವ ವಿಕ್ರಿ ಆಧರಿಸಿ ಸಾಲ ಸೌಲಭ್ಯ, ಸದಸ್ಯರಿಂದ ಆಕರ್ಷಕ ಬಡ್ಡಿದರದಲ್ಲಿ ಠೇವಣಿ ಸಂಗ್ರಹಣೆ, ದೈನಂದಿನ ಅಗತ್ಯದ ದಿನಸಿ ಸಾಮಾಗ್ರಿಗಳಿಂದ ಹಿಡಿದು ಕೃಷಿ ಸಲಕರಣೆಗಳು, ರಸಗೊಬ್ಬರ, ಕೀಟನಾಶಕಗಳು, ಪಶು ಆಹಾರ, ಗೃಹೋಪಯೋಗಿ ಸಾಧನಗಳು, ನೀರಾವರಿ ಯಂತ್ರೋಪಕರಣಗಳು ಇತ್ಯಾದಿಗಳನ್ನು ಅತ್ಯಂತ ಸ್ಪರ್ಧಾತ್ಮಕ ದರದಲ್ಲಿ ಸದಸ್ಯರಿಗೆ ಪೂರೈಸುವ ವ್ಯವಸ್ಥೆ, ಅಡಿಕೆ ದರ ಸ್ಥಿರೀಕರಣಕ್ಕಾಗಿ ಸ್ವಂತ ಅಡಿಕೆ ಖರೀದಿ, ಖರೀದಿಸಿದ ಅಡಿಕೆಗಳನ್ನು ಟಿ.ಎಸ್.ಎಸ್. ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡುವುದು, ಮೌಲ್ಯವರ್ಧಿತ ಉತ್ಪನ್ನವಾಗಿ ಪರಿವರ್ತಿಸಿ ಮಾರಾಟ ಮಾಡುವುದು, ಅಕ್ಕಿಗಿರಣಿ ವ್ಯವಸ್ಥೆ, ಅತಿಥಿಗೃಹ ವ್ಯವಸ್ಥೆ, ಸ್ಪರ್ಧಾತ್ಮಕ ದರದಲ್ಲಿ ಸರಕು ಸಾಗಾಣಿಕೆ ವಾಹನಗಳ ವ್ಯವಸ್ಥೆ, ಮಾರುಕಟ್ಟೆ ಮಾಹಿತಿ ಪಡೆಯಲು ಎಸ್.ಎಮ್.ಎಸ್. ಸೇವೆ, ಹೀಗೆ ಸಂಘವು ನೀಡುತ್ತಿರುವ ಸೇವೆಗಳ ಯಾದಿ ಬೆಳೆಯುತ್ತಲೇ ಇದೆ. ದಿನದಿಂದ ದಿನಕ್ಕೆ ಹೊಸ ಹೊಸ ಸೇವೆಗಳನ್ನು ಆರಂಭಿಸಲಾಗುತ್ತಿದೆ.

ಸಂಘವು ಯಾವುದೇ ಸೇವೆಯನ್ನು ಆರಂಭಿಸಿದರೂ ಅದನ್ನು ಪರಿಪೂರ್ಣವಾಗಿಯೇ ಸದಸ್ಯರಿಗೆ ನೀಡುತ್ತದೆ.

**ಖರೀದಿ ಮತ್ತು ಮಾರುಕಟ್ಟೆ ವ್ಯವಸ್ಥೆ :** ಅಡಿಕೆ ಬೆಳೆಗಾರರಿಗೆ ಮಾರುಕಟ್ಟೆ ವ್ಯವಸ್ಥೆ ಎಂದರೆ ಕೇವಲ ಮಾರಾಟಕ್ಕೆ ಜಾಗ ನೀಡುವುದು ಮಾತ್ರವಲ್ಲ; ಸದಸ್ಯ ಅಡಿಕೆಯನ್ನು ಮಾರಾಟಕ್ಕೆ ತಂದು ಸಂಘದಲ್ಲಿ ಹಾಕಿದರೆ ಮತ್ತೆ ಖಾಲಿ ಚೀಲ ಹಾಗೂ ಹಣ ಒಯ್ಯುವುದಷ್ಟೇ ಆತ ಮಾಡಬೇಕಾಗಿರುವ ಕೆಲಸ! ಬಂದ ಅಡಿಕೆಯನ್ನು ತೂಕ ಮಾಡಿ ವ್ಯಾಪಾರಕ್ಕೆ ಹಾಕಲಾಗುತ್ತದೆ.ಟೆಂಡರ್ ಪ್ರಕ್ರಿಯೆ ಸಂಪೂರ್ಣ ಗಣಕೀಕೃತಗೊಂಡಿದೆ. ಇದರಿಂದಾಗಿ ಪಾರದರ್ಶಕತೆ ಹಾಗೂ ನಿಖರತೆಗೆ ಇನ್ನಷ್ಟು ಒತ್ತು ಕೊಟ್ಟಂತಾಗಿದೆ. ಅಡಿಕೆಗೆ ದರ ಘೋಷಣೆಯಾದ ನಂತರ ಸದಸ್ಯನಿಗೆ ಇಷ್ಟವಾಗದಿದ್ದಲ್ಲಿ ಆ ಮಾರಾಟವನ್ನು ನಿರಾಕರಿಸುವ ಹಕ್ಕು ಆತನಿಗೆ ಇರುತ್ತದೆ. ಮಾರಾಟವಾದ ನಂತರ ಅಡಿಕೆಯನ್ನು ತೂಕ ಮಾಡಿ ಖರೀದಿಸಿದ ವ್ಯಾಪಾರಸ್ಥರಿಗೆ ವಹಿಸಿಕೊಡಲಾಗುತ್ತದೆ.

ಅಲ್ಲದೇ ಮಾರಾಟದ ಹಣವನ್ನು ವ್ಯಾಪಾರಸ್ಥ ಪಾವತಿಸದೇ ಇದ್ದರೂ ತಕ್ಷಣ ಆಯಾ ಸದಸ್ಯರ ಖಾತೆಗೆ ಜಮಾ ಮಾಡಲಾಗುತ್ತದೆ. ಇದು ಬಹುಷಃ ಶಿರಸಿ, ಸಿದ್ದಾಪುರ ಹಾಗೂ ಯಲ್ಲಾಪುರದ ಅಡಿಕೆ ಮಾರುಕಟ್ಟೆಗಳಲ್ಲಿ ಮಾತ್ರ ಚಾಲ್ತಿಯಲ್ಲಿರುವ ರೈತ ಸ್ನೇಹಿ ವ್ಯವಸ್ಥೆಯಾಗಿದೆ. ನಂತರ ಆ ಹಣವನ್ನು ವ್ಯಾಪಾರಸ್ಥರಿಂದ ವಸೂಲಿ ಮಾಡಿಕೊಳ್ಳುವ ಜವಾಬ್ದಾರಿ ಸಂಘದ್ದಾಗಿರುತ್ತದೆ. ಸಂಘದ ಈ ವ್ಯವಸ್ಥೆಯಿಂದಾಗಿ ವ್ಯಾಪಾರಸ್ಥರಿಗೂ ಖರೀದಿಗೆ ಆರ್ಥಿಕ ನೆರವು ದೊರೆತು ಸ್ಪರ್ಧಾತ್ಮಕ ದರ ದೊರೆಯಲು ಅನುಕೂಲವಾಗುತ್ತದೆ.

ಇದರಲ್ಲೂ ಖಾಸಗಿ ವ್ಯಾಪಾರಸ್ಥರು ಹಂಗಾಮಿನ ಸಮಯದಲ್ಲಿ ಉದ್ದೇಶಪೂರ್ವಕವಾಗಿ ದರ ಕಡಿಮೆ ಮಾಡಲೆತ್ನಿಸಿದ್ದರಿಂದ ಅಡಿಕೆ ದರದ ಸ್ಥಿರತೆ ಕಾಪಾಡಲು ಸಂಘವು ಸ್ವಂತ ಬಂಡವಾಳದಿಂದ ಅಡಿಕೆ ಖರೀದಿಗೂ ಆರಂಭಿಸಿದೆ. ಇದೀಗ ಸುಮಾರು ಶೇ.40ರಷ್ಟು ಅಡಿಕೆಯನ್ನು ಸಂಘವೇ ಖರೀದಿಸುತ್ತಿದೆ. ಈ ರೀತಿ ಖರೀದಿಸಿದ ಅಡಿಕೆಯನ್ನು ಬೇರೆ ಬೇರೆ ನಮೂನೆಗಳಿಗಾಗಿ ವರ್ಗೀಕರಣ ಮಾಡಿ ಸಂಘದ "ಟಿ.ಎಸ್.ಎಸ್." ಬ್ರ್ಯಾಂಡಿನಲ್ಲಿ ದೇಶಾದ್ಯಂತ ಮಾರಾಟ ಮಾಡಲಾಗುತ್ತಿದೆ. ಅಡಿಕೆಯ ಬಳಕೆಯ ಸ್ವರೂಪ ಬದಲಾದಂತೆಲ್ಲ ಮಾರಾಟದ ಸ್ವರೂಪವನ್ನೂ ಬದಲಿಸುವ ಮೂಲಕ ಸಂಘವು ಸ್ಪಂದಿಸುತ್ತಿದೆ. ಅಡಿಕೆಯನ್ನು ಮೌಲ್ಯವರ್ಧಿಸಿ "ಟಿ.ಎಸ್.ಎಸ್. ಟೈಗರ್" ಬ್ರ್ಯಾಂಡಿನಲ್ಲಿ ಸಿಹಿ ಅಡಿಕೆ ಪುಡಿ ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಈ ಸಿಹಿ ಅಡಿಕೆ ಪುಡಿ ಇಂದು ದೇಶಾದ್ಯಂತ ಜನಪ್ರಿಯಗೊಂಡಿದೆ.

**ಅಡಿಕೆ ಸಂಸ್ಕರಣ ಹಾಗೂ ಗ್ರೇಡಿಂಗ್ ಮತ್ತು ವಿವಿಧ ಚಟುವಟಿಕೆಗಳು**





**ಟಿ.ಎಸ್.ಎಸ್. ಸೂಪರ್ ಮಾರ್ಕೆಟ್ :** ಸದಸ್ಯರ ಬೆಳೆಯನ್ನು ಮಾರಾಟ ಮಾಡಿಸಲು ಶೋಷಣಾ ರಹಿತವಾದ ವ್ಯವಸ್ಥೆಯನ್ನು ಅನುಕೂಲ ಮಾಡಿಕೊಟ್ಟಂತೆಯೇ ಅವರಿಗೆ ಅಗತ್ಯದ ಸಾಮಗ್ರಿಗಳನ್ನು ಖರೀದಿಸಲು ಸಹ ಸದಸ್ಯರಿಗಾಗುವ ಶೋಷಣೆಯನ್ನು ತಪ್ಪಿಸಲು ಸಂಘವು ಅನೇಕ ಸೇವೆಗಳನ್ನು ನೀಡುತ್ತಿದೆ. ಮೊದಲಿನಿಂದಲೂ ಸದಸ್ಯರಿಗೆ ದಿನಸಿ ಸಾಮಗ್ರಿಗಳನ್ನು ಪೂರೈಸುತ್ತಿದ್ದ ಕಿರಾಣಿ ಹಾಗೂ ಕೃಷಿ ವಿಭಾಗವನ್ನು ಮೇಲ್ದರ್ಜೆಗೇರಿಸಿ ಟಿ.ಎಸ್.ಎಸ್. ಸೂಪರ್ ಮಾರ್ಕೆಟ್ ಆರಂಭಿಸಲಾಗಿದೆ.

ಇಂದು ಈ ಸೂಪರ್ ಮಾರ್ಕೆಟ್ ಈ ಭಾಗದಲ್ಲಿ ಅತ್ಯಂತ ಜನಪ್ರಿಯವಾಗಿರುವುದಲ್ಲದೇ ಸದಸ್ಯರಿಗೆ ಅಗತ್ಯವುಳ್ಳ ಸಾಮಗ್ರಿಗಳನ್ನು ಒದಗಿಸುತ್ತಿದೆ. ದಿನಸಿ ಸಾಮಗ್ರಿಗಳು, ಕೃಷಿ ಸಲಕರಣೆಗಳು, ರಸಗೊಬ್ಬರ ಹಾಗೂ ಕೀಟನಾಶಕ, ನೀರಾವರಿ ಯಂತ್ರೋಪಕರಣಗಳು, ಪೈಪ್‌ಗಳು, ರೂಫಿಂಗ್ ಶೀಟ್, ಗೃಹೋಪಯೋಗಿ ಸಲಕರಣೆಗಳು, ಬಟ್ಟೆ, ಸ್ಟೀಲ್ ಸಾಮಗ್ರಿಗಳು, ಬೆಳ್ಳಿ ಸಾಮಗ್ರಿಗಳು, ಪಾದರಕ್ಷೆಗಳು ಹೀಗೆ ಸೂಪರ್ ಮಾರ್ಕೆಟಿನಲ್ಲಿ ಎಲ್ಲವೂ ಲಭ್ಯವಿದೆ. ಅದೂ ಅತ್ಯಂತ ಕಡಿಮೆ ದರದಲ್ಲಿ! ಈ ವಿಭಾಗದಲ್ಲಿ ಸದಸ್ಯರ ಸಾಮರ್ಥ್ಯಕ್ಕನುಗುಣವಾಗಿ ಉದ್ರಿ ಸೌಲಭ್ಯವನ್ನೂ ನೀಡಲಾಗುತ್ತಿದೆ.

**ಬಹುಮುಖಿ ಸೇವಾ ಚಟುವಟಿಕೆಗಳು :**

1. ಮಲೆನಾಡಿನಲ್ಲಿ ಹೈನುಗಾರಿಕೆ ರೈತರ ಜೀವನದ ಅವಿಭಾಜ್ಯ ಅಂಗವೆಂದರೆ ತಪ್ಪಾಗಲಿಕ್ಕಿಲ್ಲ. ಇದಕ್ಕೆ ಉತ್ತೇಜಿಸಲು ಸಂಘವು ಸ್ವತಃ 'ಧಾರಾ' ಪಶುಆಹಾರ ಕೂಡ ತಯಾರಿಕೆ ಮಾಡಲಾಗುತ್ತಿದೆ. ಯೂರಿಯಾ ರಹಿತವಾಗಿರುವ ಈ ಪಶುಆಹಾರವು ಉತ್ತಮ ದರ್ಜೆಯ ಕಚ್ಚಾವಸ್ತುಗಳಿಂದ ತಯಾರಾಗುವುದರಿಂದ ಉತ್ತಮ ಗುಣಮಟ್ಟ ಹೊಂದಿದೆ.
2. ಸದಸ್ಯರ ಸರಕು ಸಾಗಾಣಿಕೆಗಾಗಿ ಸಂಘವು ಸ್ಪರ್ಧಾತ್ಮಕ ದರದಲ್ಲಿ 6 ವಾಹನಗಳನ್ನು ಒದಗಿಸುತ್ತಿದೆ. ಸಂಘವು ಉತ್ತಮ ಸೌಲಭ್ಯವನ್ನು ಹೊಂದಿದ ಒಟ್ಟಾರೆ 62 ಸುಸಜ್ಜಿತ ಕೊಠಡಿಗಳಿರುವ ಸಾಮ್ರಾಟ್ ಅತಿಥಿಗೃಹವನ್ನು ಹೊಂದಿದೆ.
3. 2010 ರಿಂದ ಅಡಿಕೆ ಸಂಘದಲ್ಲಿ ಅಡಿಕೆಯ ಮೌಲ್ಯವರ್ಧನೆಯನ್ನು ಪ್ರಾರಂಭಿಸಲಾಗಿದೆ. ಸುವಾಸಿತ ಸಿಹಿ ಅಡಿಕೆ ಪುಡಿಯನ್ನು ತಯಾರಿಸುತ್ತಿದ್ದು, ಅವುಗಳನ್ನು ದೇಶದಾದ್ಯಂತ ಮಾರುಕಟ್ಟೆ ಮಾಡಲಾಗುತ್ತಿದೆ. ಗುಟ್ಕಾ ನಿಷೇಧದ ನಂತರ ಅಡಿಕೆ ಬಳಕೆಯ ವಿಧಾನದಲ್ಲಾದ ಪರಿವರ್ತನೆಗೆ ಪೂರಕವಾಗಿ ಗುಜರಾತ್ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿನ ಮಾರುಕಟ್ಟೆಗಳ ಬೇಡಿಕೆಗೆ ಅನುಗುಣವಾಗಿ ಅಡಿಕೆಯನ್ನು ಸ್ಲೈಸ್ ಹಾಗೂ ಕಟಿಂಗ್ ಮಾಡಿ ಸ್ವಂತ ಬ್ರ್ಯಾಂಡಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಈಗಾಗಲೇ ಪ್ರತಿದಿನ 30 ಲಕ್ಷ ಅಡಿಕೆ ಪೊಟ್ಟಣವನ್ನು ಹೊರ ರಾಜ್ಯಗಳಿಗೆ ಕಳುಹಿಸಲಾಗುತ್ತಿದೆ. ಸಂಸ್ಥೆಯ ನೂತನ ಮಾರ್ಕೆಟಿನಲ್ಲಿ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಎಲ್ಲ ಅಗತ್ಯಗಳನ್ನು ಪೂರೈಸಲು ಪ್ರಯತ್ನಿಸುತ್ತಿದೆ.
4. **ವೈದ್ಯಕೀಯ ವಿಜ್ಞಾನ ಸಂಸ್ಥೆ :** ಶಿರಸಿ ಭಾಗದ ಜನರಿಗೆ ವಾರದ 7 ದಿನ ದಿನದ 24 ಗಂಟೆಗಳ ತುರ್ತು ಚಿಕಿತ್ಸೆ ನೀಡುವ ಸಲುವಾಗಿ ಸಂಘದ ಸದಸ್ಯರಿಗೆ ಕೊಡತಕ್ಕ ಬೋನಸ್ ರಖಂನಿಂದ ಸುಸಜ್ಜಿತ ಆಸ್ಪತ್ರೆಯನ್ನು ನಿರ್ಮಿಸಿ ಸಂಘದ ಸದಸ್ಯರಿಗೆ ಶೇ.25 ರಿಯಾಯಿತಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಹಾಗೂ ಔಷಧಿಯಲ್ಲಿ ಶೇ.5 ರಿಯಾಯಿತಿ ನೀಡಲಾಗುತ್ತಿದೆ.

**ಪ್ರಶಸ್ತಿ ಪುರಸ್ಕಾರಗಳು :** ಈ ಎಲ್ಲಾ ಸಾಧನೆಗಳಿಗಾಗಿ ಸಂಘಕ್ಕೆ 1962ರಲ್ಲಿ ಸಾರ್ವಜನಿಕ ಸೇವಾ ಪ್ರಶಸ್ತಿ, 1989ರಲ್ಲಿ ಇಫ್ಕೋ ಕ್ಯಾಷ್ ಅವಾರ್ಡ್, 2005ರಲ್ಲಿ ಉತ್ತಮ ಸಹಕಾರಿ ಸಂಘ ಜತೆಗೆ ಕೆ.ಡಿ.ಸಿ.ಸಿ. ಬ್ಯಾಂಕಿನಿಂದ ಉತ್ತಮ ಸಹಕಾರಿ ಸಂಘ ಪ್ರಶಸ್ತಿಗಳು ಅರಸಿ ಬಂದಿವೆ. ಆರ್ಥಿಕ ಸದೃಢತೆಯನ್ನು ಬಿಂಬಿಸುವ ಕ್ರಿಸಿಲ್ ರೇಟಿಂಗ್ BBB+(Stable) ಹೊಂದಿದೆ.

ಸಂಸ್ಥೆಯ ಅಭಿವೃದ್ಧಿಗೆ ಅಧ್ಯಕ್ಷರಾದ ಶ್ರೀ ಶಾಂತಾರಾಮ ಹೆಗಡೆ ಶೀಗೇಹಳ್ಳಿ ಅವರೊಂದಿಗೆ ನಿರ್ದೇಶಕರುಗಳು, ಪ್ರಧಾನ ವ್ಯವಸ್ಥಾಪಕರಾದ ಶ್ರೀ ರವೀಶ ಹೆಗಡೆ ಅವರ ಜೊತೆಗೆ ಸಂಸ್ಥೆಯ ಸಿಬ್ಬಂದಿಗಳು, ಸದಸ್ಯರು ಹೆಗಲಿಗೆ ಹೆಗಲು ಕೊಟ್ಟಿದ್ದಾರೆ. ಒಂದು ದೊಡ್ಡ ಸಂಸ್ಥೆಯ ಅಧ್ಯಕ್ಷರಾದರೂ ಶ್ರೀ ಶಾಂತಾರಾಮ ಹೆಗಡೆ ಅವರ ಸರಳ ಸೌಜನ್ಯಪೂರಿತ ನಡೆ ನುಡಿ ಎದ್ದು ಕಾಣುತ್ತದೆ. ವ್ಯವಸ್ಥಾಪಕರಾದ ಶ್ರೀ ರವೀಶ ಹೆಗಡೆ ಅವರಲ್ಲಿ ವೃತ್ತಿಪರತೆ, ಸಂಘದ ಮೇಲಿನ ಪ್ರೀತಿ ಕಾಣುತ್ತದೆ.

ಒಂದು ಸಂಸ್ಥೆ ಎಷ್ಟೊಂದು ಕೆಲಸ ಸಮಾಜಮುಖಿಯಾಗಿ ಮಾಡಬಹುದು ಎಂಬುದಕ್ಕೆ ಟಿ.ಎಸ್.ಎಸ್. ಪದೇ ಪದೇ ಸಾಕ್ಷಿಯಾಗುತ್ತಿದೆ. ಸದಸ್ಯರೊಂದಿಗೆ ಹೊಸತನಕ್ಕೆ ತೆರೆದುಕೊಳ್ಳುತ್ತಲೇ ಸಾಗುತ್ತಿದೆ. ಟಿ.ಎಸ್.ಎಸ್. ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕಡವೆ ಶ್ರೀಪಾದ ಹೆಗಡೆ ಅವರು ಇಂದಿಲ್ಲ. ಆದರೆ, ಅವರ ಕನಸುಗಳು ಇಂದು ಒಂದೊಂದಾಗಿ ಸಾಕಾರಗೊಳ್ಳುತ್ತಿವೆ. ಸದಸ್ಯರು ಬಯಸಿದರೆ ಯಾವುದೇ ಸೇವೆಯನ್ನು ಆರಂಭಿಸುತ್ತೇವೆ.... ಎಂದು ಹೇಳುತ್ತಿದ್ದ ಅವರ ಸದಸ್ಯಮುಖೀ ಕನಸುಗಳು ಇಂದಿನ ಸಮರ್ಥ ಆಡಳಿತ ಮಂಡಳಿಯ ನೇತೃತ್ವದಲ್ಲಿ ದಕ್ಷ ಸಿಬ್ಬಂದಿಗಳಿಂದ ಸಾಕಾರಗೊಳ್ಳುತ್ತಿವೆ. ಸದಸ್ಯರ ಉತ್ಪನ್ನಕ್ಕೆ ತಕ್ಕ ಬೆಲೆ ದೊರಕಿಸಿಕೊಡುವುದು ಸಂಘದ ಮೂಲ ಉದ್ದೇಶ. ಅದಕ್ಕೆ ಪೂರಕವಾಗಿ ಬೆಳೆ ತೆಗೆಯಲು ಅಗತ್ಯವಾದ ಸಾಲ ಸೌಲಭ್ಯವೂ ಲಭ್ಯ. ರೈತರಿಗೆ ಅಗತ್ಯವಾದ ಕೃಷಿ ಸಾಮಾಗ್ರಿಗಳು, ಕೀಟನಾಶಕಗಳು, ರಸಗೊಬ್ಬರ ಒಂದೇ ಸೂರಿನಡಿ ಸಿಗುವುದು ರೈತರಲ್ಲಿ ಮುಗುಳು ನಗೆಯನ್ನು ಚಿಮ್ಮಿಸುತ್ತದೆ. ಕೃಷಿ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸಂಸ್ಥೆಯಲ್ಲಿ ಪರಿಣಿತ ಕೃಷಿ ಸಲಹೆಗಾರರ ಸೇವೆಯೂ ಲಭ್ಯವಿದೆ. ಅಗತ್ಯವುಳ್ಳವರಿಗೆ ಸ್ಥಳದಲ್ಲಿಯೇ ಪರಿಹಾರ ಹೇಳುವುದಲ್ಲದೇ ಅನಿವಾರ್ಯದ ಸಂದರ್ಭಗಳಲ್ಲಿ ಆಯಾ ರೈತರ ಜಮೀನುಗಳಿಗೇ ಭೇಟಿ ನೀಡಿ ಸಲಹೆ ಸೂಚನೆ, ಮಾರ್ಗದರ್ಶನ ನೀಡಲಾಗುತ್ತದೆ. ಕಾಲಕಾಲಕ್ಕೆ ಕೃಷಿ ಸಂಬಂಧಿತ ವಿವಿಧ ವಿಷಯ ತಜ್ಞರುಗಳನ್ನು ಕರೆಸಿ ವಿಚಾರ ಸಂಕಿರಣಗಳನ್ನು ನಡೆಸಲಾಗುತ್ತದೆ.

ಒಮ್ಮೆ ಸಂಘದ ಆವರಣ ಪ್ರವೇಶಿಸಿದರೆ ಸಹಕಾರ ಶಕ್ತಿಯ ವಿರಾಟರೂಪ ಪ್ರದರ್ಶನವಾಗುತ್ತದೆ. ಒಂದು ಭಾಗದಲ್ಲಿ ರೈತರಿಗೆ ಅಗತ್ಯವಾದ ವಸ್ತುಗಳ ಮಾರಾಟ, ಕೃಷಿಗೆ ಅಗತ್ಯವಾದ ಪದಾರ್ಥಗಳ ವಿತರಣೆ, ಮತ್ತೊಂದು ಭಾಗದಲ್ಲಿ ಅಡಿಕೆ

ಹರಾಜು ವ್ಯವಸ್ಥೆ, ಮಗದೊಂದು ಭಾಗದಲ್ಲಿ ಅಡಿಕೆಯನ್ನು ಮೌಲ್ಯವರ್ಧನೆಗೊಳಪಡಿಸಿ, ಬ್ಯಾಗ್ ಸಿದ್ಧತೆ, ಬೃಹತ್ ಪ್ರಮಾಣದ ಗೋದಾಮುಗಳು, ಸ್ವಚ್ಛ ವಾತಾವರಣ ಎಲ್ಲ ವ್ಯವಹಾರವೂ ಟಿ.ಎಸ್. ಎಸ್. ಚಿಹ್ನೆಯಡಿ ನಡೆಯುತ್ತದೆ. ಅಡಿಕೆ ಪೊಟ್ಟಣದ ಮೇಲೆ "ಟೈಗರ್" ಬ್ರ್ಯಾಂಡ್ ಮುದ್ರಣ, ಸಂಘದ ಚಟುವಟಿಕೆ, ವ್ಯವಹಾರ, ವ್ಯವಧಾನ, ಸಿಬ್ಬಂದಿಯ ಲಕ್ಷ್ಯ, ಬದ್ಧತೆ ನೋಡಿದರೆ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಯ ನೆನಪು ಮೂಡುತ್ತದೆ. ಇಷ್ಟಾದರೂ ಅಧ್ಯಕ್ಷರ, ಪ್ರಧಾನ ವ್ಯವಸ್ಥಾಪಕರ, ಅಧಿಕಾರಿಗಳ ಸಿಬ್ಬಂದಿಯವರ ವರ್ತನೆ ಸರಳ. ಮಾತು ವಿರಳ, ಅವರ ಕೆಲಸಗಳು, ಸಾಧನೆಗಳು ಮಾತ್ರ ಮಾತನಾಡುತ್ತವೆ ಎಂಬುದೂ ಅತಿಶಯೋಕ್ತಿಯಲ್ಲ.

### ಸಂಘದಿಂದ ದೊರೆಯುವ ಸೌಲಭ್ಯಗಳು

- ಸದಸ್ಯರ ಮಹಸೂಲು ಮಾರಾಟಕ್ಕೆ ವ್ಯವಸ್ಥಿತವಾದ ಮಾರುಕಟ್ಟೆ ಸೌಲಭ್ಯ, ಸದಸ್ಯರ ಹಿತ ಕಾಪಾಡಲು ಸ್ವತಃ ಖರೀದಿ ಮತ್ತು ಮಾರಾಟ ಯೋಜನೆ.
- ಸದಸ್ಯರ ಮಹಸೂಲು ಶೇಖರಣೆಗೆ ಸುಸಜ್ಜಿತ ಗೋದಾಮು ಮತ್ತು ಶೈತ್ಯಾಗಾರದ ಸೌಲಭ್ಯ.
- ಸದಸ್ಯರ ಮಹಸೂಲು ಸಾಗಾಟಕ್ಕೆ ಕಡಿಮೆ ದರದಲ್ಲಿ ವಾಹನ ವ್ಯವಸ್ಥೆ.
- ಪ್ರತಿಯೊಂದು ವಿಭಾಗದಲ್ಲಿ ಗಣಕಯಂತ್ರ ಅಳವಡಿಕೆ, ತನ್ಮೂಲಕ ಸದಸ್ಯರಿಗೆ ಶೀಘ್ರ ಸೇವೆ.
- ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ, ಸದಸ್ಯರಿಂದ ಠೇವಣಿ ವ್ಯವಸ್ಥೆ, ಸಮೃದ್ಧಿ ಚಿನ್ನದ ಉಳಿತಾಯ ಯೋಜನೆ.
- ಸದಸ್ಯರಿಗೆ ಎ.ಟಿ.ಎಂ. (ತ್ವರಿತ ನಗದು ಸೇವೆ) ಸೌಲಭ್ಯ.
- ಸದಸ್ಯರ ಮಕ್ಕಳಿಗೆ ಶಿಕ್ಷಣ ಸಾಲ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ.
- ಅಡಿಕೆಗೆ ಬೇಡಿಕೆ ಹೆಚ್ಚಿಸಲು ಸುಗಂಧಿತ ಸಿಹಿ ಅಡಿಕೆಪುಡಿ ತಯಾರಿಕೆ.
- ಸ್ವಚ್ಛ-ಸುಗಮ-ಶೀಘ್ರ ಕಿರಾಣಿ ದಿನಸುಗಳ ಪೂರೈಕೆಗಾಗಿ ಸುಪರ್ ಮಾರ್ಕೆಟ್ ವ್ಯವಸ್ಥೆ, ಉತ್ತಮ ಗುಣಮಟ್ಟದ ಕಿರಾಣಿ ಸಾಮಾನುಗಳು, ಕೃಷಿ ಸಾಮಗ್ರಿಗಳು ಹಾಗೂ ರಾಸಾಯನಿಕಗಳ ಪೂರೈಕೆ.
- ಪಶು ಆಹಾರ ಪೂರೈಕೆಗಾಗಿ ಉತ್ತಮ ಗುಣಮಟ್ಟದ ಹಾಗೂ ಪೌಷ್ಠಿಕ ಪಶು ಆಹಾರ ಉತ್ಪಾದನೆ ಮತ್ತು ಮಾರಾಟ.
- ಬೈಫ್ ಮತ್ತು ಸುರಧೇನುವಿನ ಸಹಯೋಗದೊಂದಿಗೆ ಪಶುತಳಿ ಅಭಿವೃದ್ಧಿ ಕೇಂದ್ರಗಳು.
- ಶಿರಸಿಯಲ್ಲಿ ಸದಸ್ಯರ ಅನುಕೂಲಕ್ಕಾಗಿ ಸುಸಜ್ಜಿತ ಅತಿಥಿಗೃಹ.
- ಸ್ಪರ್ಧಾತ್ಮಕ ದರದಲ್ಲಿ ಭತ್ತದ ಗುಣಮಟ್ಟದ ಮಿಲ್ಲಿಂಗ್ ವ್ಯವಸ್ಥೆ.
- ಸಂಘದ ಸ್ವಂತ ಬ್ರ್ಯಾಂಡ್‌ನಲ್ಲಿ ಟಿ.ಎಸ್.ಎಸ್. ಮೈಲುತುತ್ತ, ಟಿ.ಎಸ್.ಎಸ್. ಬೋರ್ಡೋ ಸುಣ್ಣ, ಟಿ.ಎಸ್.ಎಸ್. ಗ್ರೀನ್ ಗೋಲ್ಡ್ ಸಾವಯವ ಗೊಬ್ಬರ, ಟಿ.ಎಸ್.ಎಸ್. ಚಹಾಪುಡಿ, ಇತ್ಯಾದಿ ಬ್ರಾಂಡ್‌ಗಳಲ್ಲಿ ಗ್ರಾಹಕ ಉತ್ಪನ್ನಗಳನ್ನು ಸಂಘವು ಮಾರುಕಟ್ಟೆಗೆ ಬಿಡುಗಡೆ.
- ಸದಸ್ಯರ ಅನಾರೋಗ್ಯ ವೆಚ್ಚ ಭರಿಸುವ ಸಲುವಾಗಿ ಟಿ.ಎಸ್. ಎಸ್. ಸದಸ್ಯರ ಆರೋಗ್ಯ ಸುರಕ್ಷಾ ಯೋಜನೆ.
- ಸದಸ್ಯರಿಗೆ ಮಾರುಕಟ್ಟೆ ಸ್ಥಿತಿಗತಿ ತಿಳಿಯಲು ಎಸ್.ಎಂ.ಎಸ್. ಸೇವೆ, ಸದಸ್ಯರಿಗೆ ವೆಬ್‌ಸೈಟ್ ಮೂಲಕ ದಿನದ ಟೆಂಡರ್ ಮಾಹಿತಿ ಸೌಲಭ್ಯ.
- ಸದಸ್ಯರ ಅನುಕೂಲಕ್ಕಾಗಿ ಸಂಘದಲ್ಲಿಯೇ ಭೋಜಾ ದಾಖಲಿಸುವ ಹಾಗೂ ಪಹಣಿ ಪತ್ರಿಕೆ ಒದಗಿಸುವ ವ್ಯವಸ್ಥೆ.
- ಕೃಷಿ ವಿದ್ಯಮಾನಗಳ ಮಾಹಿತಿ ನೀಡುವ ಸಲುವಾಗಿ "ತೋಟಗಾರ್ಸ್ ವಾರ್ತಾಪತ್ರ" ತ್ರೈಮಾಸಿಕ ಪ್ರಕಟಣೆ ಮತ್ತು ಉಚಿತ ವಿತರಣೆ.
- ಕಡಿಮೆ ದರದಲ್ಲಿ ಪಾನ್ ಕಾರ್ಡ್ ಮಾಡಿಸಿಕೊಡುವ ವ್ಯವಸ್ಥೆ, ಸದಸ್ಯರ ಅನುಕೂಲಕ್ಕಾಗಿ ಐ.ವಿ.ಆರ್.ಎಸ್. ವ್ಯವಸ್ಥೆ ಹಾಗೂ ಮಾಹಿತಿ ಕಿಯೋಸ್ಕ್ ಆರಂಭ.
- ಎಲ್ಲಾ ಮೊಬೈಲ್ ಕರೆನ್ಸಿ ರೀಚಾರ್ಜ್, ಬಸ್ ಟಿಕೆಟ್ ಬುಕಿಂಗ್, ಡಿಶ್ ಟಿ.ವಿ. ಕರೆನ್ಸಿ ರೀಚಾರ್ಜ್, ಝೆರಾಕ್ಸ್ ಮಾಡಿಕೊಡುವ ಸೇವೆಗಳ ಆರಂಭ.
- ಸದಸ್ಯರ ಅನುಕೂಲಕ್ಕಾಗಿ ಕೊಡು-ಕೊಳ್ಳುವವರ ಮಾಹಿತಿ ವಿನಿಮಯ ಕೇಂದ್ರದ ವ್ಯವಸ್ಥೆ, ಉತ್ತಮ ಕೃಷಿ ನಿರ್ವಹಣೆಗೆ ಕೃಷಿ ತಜ್ಞರ ಲಭ್ಯತೆ ಮತ್ತು ಸಲಹೆ ಸೂಚನೆಗಳು.
- ಜನೌಷಧಿ ಕೇಂದ್ರ, ಆಹಾರ ಕೇಂದ್ರ, ವಿಶ್ರಾಂತಿ ಕೊಠಡಿಗಳ ಸೌಲಭ್ಯ.

### ತೋಟಗಾರ್ಸ್ ಸಹಕಾರಿ ಸಂಸ್ಥೆಯ ವಿವಿಧ ಉತ್ಪನ್ನಗಳು



# "ತಂದೆ ಬಗೆಯಿಂ ಬಗೆದು ಶಾಸನೋಗ್ರವನಿನಿತು ಕುಂದಿಸಲಿಕಾಗದೇಂ"



ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಎಲ್ಲೆಲ್ಲಿ ಜನರು ಬಹು ಸಂಖ್ಯೆಯಲ್ಲಿ ಸೇರಿರುವರೋ ಅಲ್ಲಿ ಕೇಳಿ ಬರುವ ಮಾತೆಂದರೆ, "ಹಿಂದಿನ ನಮ್ಮ ಕಾಲ ನ್ಯಾಯಯುತವಾಗಿತ್ತು. ಇಂದು ಎಲ್ಲೆಡೆ ಅನ್ಯಾಯ, ಭ್ರಷ್ಟಾಚಾರ, ಅನಾಚಾರಗಳು ತಲೆ ಎತ್ತಿ ಕೇಕೆ ಹಾಕುತ್ತಿವೆ" ಎಂಬುದಾಗಿದೆ. ಇಂತಹ ವಿಮರ್ಶೆ ಮಾಡುವ ಜನರೂ ಪ್ರಸ್ತುತದ ದಿವಸಗಳಲ್ಲಿ ಅನ್ಯಾಯವೆಸಗುತ್ತಿರುವವರೇ ಆಗಿರುತ್ತಾರೆ. ಇದಕ್ಕೆಲ್ಲ ಕೊನೆ ನೀಡಿ ಸತ್ಯಸಂಧತೆ, ನ್ಯಾಯಬದ್ಧತೆ ಬಾಳಿನಲ್ಲಿ ಹಾಸುಹೊಕ್ಕಾಗಿ ಬರಬೇಕಾದರೆ ಸರ್ವರೂ ಸಹ ನಾವೆಲ್ಲ ಭಗವಂತನ ಮಕ್ಕಳು, ಇನ್ನೋರ್ವನ ಸರಿ ತಪ್ಪುಗಳನ್ನು ವೈಭವೀಕರಿಸದೇ ಉತ್ಪ್ರೇಕ್ಷೆ ಮಾಡದೇ ಸೂಕ್ತ ನಿರ್ದೇಶನ ಹಾಗೂ ಕಿರು ಶಿಕ್ಷೆ ನೀಡಿ ಅಂತಹ ತಪ್ಪು ದಾರಿಯ ಜನರನ್ನು ಸಹ ಸರಿದಾರಿಗೆ ತರಬಹುದೆಂಬ ಡಿ.ವಿ.ಜಿ.ಯವರ ಈ ಪದ್ಯವನ್ನು ಗಮನಿಸಿ,

"ದಂಡನಿರ್ಣಯದಿ ನೀಂ ಕ್ಷಮಿಸೆನಲ್ ನ್ಯಾಯಪತಿ
ಹಿಂದಿನಾ ನಿನ್ನೊಳ್ಳಿತನವನ್ ಅಂದಿನಳಲನ್
ತಂದೆಬಗೆಯಿಂ ಬಗೆದು ಶಾಸನೋಗ್ರವನಿನಿತು
ಕುಂದಿಸಲಿಕಾಗದೇಂ?
– ಮಂಕುತಿಮ್ಮ"

"ನಡೆಯುವವನೆಡವುವನಲ್ಲದೇ ಮಲಗಿದವನೆಡಹುವನೆ" ಎಂಬ ಧ್ಯೇಯವಾಕ್ಯ ತಿಳಿಸುವಂತೆ ನಮ್ಮ ನಮ್ಮ ಜೀವನ ಸಮಯದಲ್ಲಿ ಆ ಅನರ್ಥಗಳಿಗೆ, ಅಪರಾಧಗಳಿಗೆ ಭಗವಂತನಲ್ಲಿ ಸರ್ವತ್ರ ಬೇಡಿಕಾ ಪ್ರಾರ್ಥನೆಯನ್ನು ಪ್ರಾಮಾಣಿಕ ಸಂವೇದನಾಶೀಲರಾಗಿ ಸಲ್ಲಿಸಿದಲ್ಲಿ ಜಗತ್ತಿನ ಸರ್ವತ್ರ ತಂದೆ ಸಲಹುವ ಪರಮಾತ್ಮನು ಖಂಡಿತಾ ನಮ್ಮನ್ನು ಕ್ಷಮಿಸುತ್ತಾನೆಂಬುದು ಪದ್ಯದ ಸಾರ.

ನ್ಯಾಯ ನಿರ್ಣಯ ನೀಡಿಕೆಯು ಬಾಯಿ ಮಾತಾಡಿದಷ್ಟು ಸುಲಭದ ಮಾತಲ್ಲ. ಒಂದು ಚಿಕ್ಕ ಕಥೆಯೊಡನೆ ಇಂದಿನ ಪದ್ಯ ಸಾರವನ್ನು ಮುಕ್ತಾಯಗೊಳಿಸುತ್ತೇನೆ.

ಆಗರ್ಭ ಶ್ರೀಮಂತರೂ ಹಾಗೂ ದೊಡ್ಡ ಮನೆತನವೊಂದರ ಮನೆಯ ತಂದೆಯು ನಿಧನರಾಗಿ ಆ ಮನೆಗೆ ವಾರಸುದಾರನಾಗಿ ಒಂದು ಮಗು ಮಾತ್ರ ಉಳಿದಿರುತ್ತದೆ. ತುಂಬಾ ಧನ ಹಾಗೂ ಆಸ್ತಿಗಳಿದ್ದ ಕಾರಣ ಆ ಮಗುವಿಗೆ ಇಬ್ಬರು ಹೆಂಗಸರು ತಾನು ಇದರ ತಾಯಿ ಹಾಗೂ ತಾನು ಇದರ ತಾಯಿ ಎಂಬ ವಿವಾದವು ತಾರಕಕ್ಕೇರಿ ನ್ಯಾಯಾಲಯದ ಮೆಟ್ಟಿಲೇರುತ್ತದೆ. ವಿಚಾರಣಾ ಹಂತದಲ್ಲಿ ಈರ್ವರ ಕಡೆಯಿಂದಲೂ ಸಾಕ್ಷಿಗಳಾಗಿ ಪ್ರದರ್ಶಿಸಿದ ಜಾತಕವನ್ನೂ, ಮಗುವಿಗೆ ನಾಮಕರಣ ಮಾಡಿದ ಜೋಯಿಸರೆಂಬುವವರನ್ನು ಕರೆದು ಸಾಕ್ಷಿ ವಿಚಾರಣೆಯಾಗಿರುತ್ತದೆ. ಎರಡೂ ಕಡೆಗೂ ಸಮಬಲದ ಸಾಕ್ಷಿಗಳೇ ದೊರೆಯುತ್ತವೆ.

ನ್ಯಾಯಾಧೀಶರಿಗೆ ಈ ಬಗ್ಗೆ ಇನ್ನೂ ಸ್ವಲ್ಪ ಸಾಕ್ಷಿ ಬೇಕೆಂದು ರಕ್ತದ ಪರೀಕ್ಷೆಗೂ ಆದೇಶಿಸಲಾಗಿ, ಆ ಪರೀಕ್ಷಾ ವರದಿಗಳೂ ಸಹ ಎರಡೂ ತಾಯಂದಿರ ಮಗುವೆಂದು ದೃಢೀಕರಣ ನೀಡುವಂತಹದ್ದಾಗಿರುತ್ತದೆ. ಗೊಂದಲಕ್ಕೀಡಾದ ನ್ಯಾಯಾಧೀಶರು ಮಗುವಿನ ನೈಜ ತಾಯಿಯ ಪತ್ತೆಹಚ್ಚುವಿಕೆಗಾಗಿ ಒಂದು ವಿಸ್ಮಯಕಾರಿ ಆದೇಶವನ್ನು ನೀಡುತ್ತಾರೆ. ಅದೇನೆಂದರೆ, ಮುಂದಿನ ಸೋಮವಾರದಂದು ಆ ಮಗುವನ್ನು ಸಮನಾಗಿ ಎರಡು ತುಂಡು ಮಾಡಿ ಈರ್ವರೂ ಕಕ್ಷಿದಾರರಿಗೂ ಹಂಚಲಾಗುತ್ತದೆಂದು.

ಈ ಆದೇಶ ಹೊರಬೀಳುತ್ತಿದ್ದಂತೆಯೇ ಮಗುವಿಗೆ ಜನ್ಮ ನೀಡಿದ ನಿಜವಾದ ತಾಯಿಯಾಗಿದ್ದವಳು ನ್ಯಾಯಾಧೀಶರಿಗೆ ಕೈ ಮುಗಿದು "ಸ್ವಾಮಿ ನನ್ನ ಮಗು ಸುಖವಾಗಿ ಜೀವಿಸಿದ್ದರೆ ಸಾಕು, ದೂರದಿಂದಲೇ ನೋಡಿ ಸಂತೋಷಪಡುತ್ತೇನೆ. ತುಂಡರಿಸಿ ಹಂಚುವ ಆದೇಶದ ಪ್ರಸ್ತಾವವನ್ನು ಕೈಬಿಡಬೇಕೆಂದು" ಕೋರುತ್ತಾಳೆ. ನ್ಯಾಯಾಧೀಶರಿಗೆ ನಿಜವಾದ ತಾಯಿಯಾರೆಂದು ಅರಿವಾಯಿತು. ಸೂಕ್ತ ಆದೇಶ ಹೊರಡಿಸಿ ನೈಜ ತಾಯಿಗೆ ಮಗುವು ದಕ್ಕತಕ್ಕದ್ದೆಂದು ಆದೇಶಿಸಿದರು.

ಭಗವಂತನೂ ಸಹ ದೊಡ್ಡ ನ್ಯಾಯಾಧೀಶನೆ. ನಮ್ಮೆಲ್ಲರ ಮನದ ನೈಜ ವಿಜ್ಞಾಪನೆಯನ್ನು ಪರಿಶೀಲಿಸಿ ಸೂಕ್ತ ನೆರವನ್ನು ಹಾರೈಸುತ್ತಾನೆಂದು ತಿಳಿದು ಸರ್ವಾತ್ಮರನ್ನೂ ತನ್ನ ಸಹೋದರರಂತೆ ಕಾಣುವ ಮೂಲಕ ಉತ್ತಮ "ಸಹಕಾರಿಗಳಾಗಿ"ರೆಂಬುದೇ ಈ ಪದ್ಯದ ಪರಮ ಸಾರಾವಾಗಿದೆ.

# ಸಹಕಾರಿ ಸಂಘಟನೆಗಳಲ್ಲಿ ಪರಿಣಾಮಕಾರಿ ನಾಯಕತ್ವ

▸▸ ಯಶವಂತ ಡೋಂಗ್ರೆ

... ಹಿಂದಿನ ಸಂಚಿಕೆಯಿಂದ

## ಸಹಕಾರಿ ನಾಯಕತ್ವದ ಗುಣಲಕ್ಷಣಗಳು

ಪರಿಣಾಮಕಾರಿ ಸಹಕಾರಿ ನಾಯಕತ್ವವು ಹಲವು ಅಂಶಗಳ ಸಂಗಮವಾಗಿದೆ. ಕಾಲದಿಂದ ಕಾಲಕ್ಕೆ ಈ ಅಂಶಗಳಲ್ಲಿ ಬದಲಾವಣೆಯಾಗುವುದು ಸಾಧ್ಯವಾದರೂ, ಎಲ್ಲ ಕಾಲಕ್ಕೂ ಸಲ್ಲುವ ಹಲವು ಅಂಶಗಳೂ ಇವೆ. ಅಂತಹ ಮುಖ್ಯ ಅಂಶಗಳನ್ನು ಗಮನಿಸೋಣ.

(ಅ) ಸಹಕಾರಿ ಮಾರ್ಗದ ಬಗ್ಗೆ ಪೂರ್ಣ ನಂಬಿಕೆ ಮತ್ತು ವಿಶ್ವಾಸ (Faith and Confidence) ಅತ್ಯಂತ ಪ್ರಾಥಮಿಕ ಅಂಶ. ಸಹಕಾರ ಕ್ಷೇತ್ರವನ್ನು ಬೇರೆ ಪರ್ಯಾಯಗಳಿಲ್ಲದ ಕಾರಣಕ್ಕೆ ಆಯ್ಕೆ ಮಾಡಿಕೊಂಡರೆ ಅಥವಾ ಈ ಕ್ಷೇತ್ರದಲ್ಲಿ ವೈಯಕ್ತಿಕ ಲಾಭಗಳಿವೆ ಎಂಬ ಕಾರಣಕ್ಕಾಗಿ ಆಯ್ಕೆ ಮಾಡಿಕೊಂಡರೆ, ಅಂತಹ ವ್ಯಕ್ತಿಗಳಿಂದ ಉತ್ತಮ ನಾಯಕತ್ವ ದೊರೆಯಲಾರದು. ಸಹಕಾರಿ ಮಾರ್ಗವು ಸಮುದಾಯದ ವಿವಿಧ ಸಮಸ್ಯೆಗಳ ನಿವಾರಣೆಗೆ ಮತ್ತು ವಿವಿಧ ಅಗತ್ಯಗಳ ಪೂರೈಕೆಗೆ ಎಲ್ಲಕ್ಕಿಂತ ಉತ್ತಮ ಮಾರ್ಗ ಎಂಬ ನಂಬಿಕೆ ಮತ್ತು ದೃಷ್ಟಿ ಖಚಿತತೆ (clarity of vision) ಹೊಂದಿದವರು ಮಾತ್ರ ಉತ್ತಮ ನಾಯಕರಾಗಬಲ್ಲರು.

(ಆ) ರಾಜಕೀಯ ಮತ್ತು ಧಾರ್ಮಿಕ ತಟಸ್ಥತೆ (Political and Religious Neutrality) ಸಹಕಾರಿ ನಾಯಕರುಗಳಿಗಿರಬೇಕಾದ ಇನ್ನೊಂದು ಪ್ರಮುಖ ಗುಣ. ಸಹಕಾರವೇ ತನ್ನ ರಾಜಕೀಯ ಮತ್ತು ಧಾರ್ಮಿಕ ನೆಲೆಗಟ್ಟು ಎಂಬ ನಂಬಿಕೆ ಇಲ್ಲದಿದ್ದಲ್ಲಿ ಪರಿಣಾಮಕಾರಿ ಸಹಕಾರಿ ನಾಯಕರಾಗುವುದು ಸಾಧ್ಯವಿಲ್ಲ. ಪಕ್ಷ ಮತ್ತು ಧರ್ಮದ ವಿಧಿಗಳು ನಮ್ಮನ್ನು ಸಂಕುಚಿತ ಚೌಕಟ್ಟಿಗೆ ತಳ್ಳುತ್ತವೆ. ಸಹಕಾರಿ ಸಂಸ್ಥೆಗಳು ಇಂತಹ ಚೌಕಟ್ಟನ್ನು ಮೀರಿದ ಮತ್ತು ಎಲ್ಲರನ್ನು ಸಮಾನ ಪಾಲುದಾರರನ್ನಾಗಿ ನೋಡುವ ಸಂಸ್ಥೆಗಳು. ಆದುದರಿಂದ ಸಹಕಾರಿ ಸಂಘಟನೆಗಳ ನಾಯಕರು ಯಾವುದೇ ರಾಜಕೀಯ ಪಕ್ಷದ, ಧರ್ಮದ ಅಥವಾ ಜಾತಿ ಸಂಘಟನೆಗಳ ಪದಾಧಿಕಾರಿಗಳಾಗಿರಬಾರದು.

(ಇ) ವೃತ್ತಿಪರತೆ (Professionalism) ಉತ್ತಮ ನಾಯಕತ್ವದ ಪ್ರಮುಖ ಗುಣಲಕ್ಷಣಗಳಲ್ಲೊಂದು. ನಾವು ಒಪ್ಪಿಕೊಳ್ಳುವ ಯಾವುದೇ ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ತಿಳಿದಿರುವುದು ಮತ್ತು ಅಂತಹ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಬೇಕಾದ ತಾಂತ್ರಿಕ ಜ್ಞಾನವನ್ನು ಪಡೆದುಕೊಳ್ಳುವುದು ಅತ್ಯಂತ ಮುಖ್ಯ. ಉತ್ತಮ ನಾಯಕನಾಗಬೇಕಾದರೆ ಕೇವಲ ಉತ್ತಮ ಉದ್ದೇಶಗಳಿದ್ದರೆ ಸಾಲದು, ಉತ್ತಮ ಕೌಶಲ ಮತ್ತು ಸರಿಯಾದ ಜ್ಞಾನ ಅತ್ಯಂತ ಅವಶ್ಯಕ.

(ಈ) "ಎರಡನೆ ಮತ್ತು ಮೂರನೆ ಹಂತದ ನಾಯಕರನ್ನು ಸಿದ್ಧಪಡಿಸುವವರೇ ಉತ್ತಮ ನಾಯಕರು" ಎನ್ನುವ ಸಾಮಾನ್ಯ ವ್ಯಾಖ್ಯಾನ ಸಹಕಾರಿ ನಾಯಕತ್ವಕ್ಕೂ ಅನ್ವಯಿಸುತ್ತದೆ. ಪರಿಣಾಮಕಾರಿ ನಾಯಕತ್ವವು ಸಂಸ್ಥೆಯ ದೀರ್ಘಾವಧಿ ಸ್ಥಿರತೆ (Long term stability)ಯನ್ನು ಸಾಧ್ಯವಾಗಿಸಬೇಕು. ಅಂತೆಯೇ ಯಾವೊಬ್ಬ ವ್ಯಕ್ತಿಯು ಸಂಸ್ಥೆಗೆ ಅನಿವಾರ್ಯವಲ್ಲ ಎಂಬ ವಾತಾವರಣವನ್ನು ಮೂಡಿಸುವವರೇ ನಿಜವಾದ ನಾಯಕರು.

(ಉ) ಸಹಕಾರಿ ಸಂಸ್ಥೆಯ ಬೆಳವಣಿಗೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮತ್ತು ಸಮಯಾಧಾರಿತ (Specific time bond) ಯೋಜನೆಗಳನ್ನು ಹೊಂದಿರುವುದು ನಾಯಕತ್ವದ ಇನ್ನೊಂದು ಪ್ರಮುಖ ಗುಣ. ತಾನು ಸಹಕಾರಿ ಸಂಸ್ಥೆಯ ಪದಾಧಿಕಾರಿಯಾಗಿರುವ ಅವಧಿಯಲ್ಲಿ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು ಮತ್ತು ಅವುಗಳನ್ನು ಯಾವ ಹಂತಕ್ಕೆ ಮುಟ್ಟಿಸಬೇಕು ಎಂಬ ಬಗ್ಗೆ ನಿಖರತೆ ಮತ್ತು ಕಾರ್ಯತಂತ್ರ ನಾಯಕರಲ್ಲಿರಬೇಕು. ಹೀಗಿದ್ದಾಗ ಮಾತ್ರ ಸಹಕಾರಿ ಸಂಸ್ಥೆಗಳು ಹಂತ ಹಂತವಾಗಿ ಅಭಿವೃದ್ಧಿ ಹೊಂದುವುದು ಸಾಧ್ಯ.

(ಊ) ಸಹಕಾರಿ ಸಂಸ್ಥೆಗಳು ತನ್ನ ವೈಯಕ್ತಿಕ ಯಶಸ್ಸಿಗೆ ಒಂದು ಮೆಟ್ಟಿಲು ಎಂದು ಭಾವಿಸುವುದಾಗಲಿ ಅಥವಾ ವೈಯಕ್ತಿಕ ಅಪಯಶಸ್ಸಿನ ನಿವಾರಣೆಗೆ ತಾತ್ಕಾಲಿಕ ಆಶ್ರಯ ಎಂದು ಒಪ್ಪಿಕೊಳ್ಳುವುದಾಗಲಿ ಸಹಕಾರಿ ನಾಯಕರ ಗುಣಲಕ್ಷಣಗಳಲ್ಲ. ಸಹಕಾರಿ ಸಂಸ್ಥೆಯಲ್ಲಿನ ತನ್ನ ಪಾತ್ರ ಸಹಕಾರಿ ಸಮುದಾಯದ ಏಳಿಗೆಗಾಗಿ ಮುಡಿಪಾದುದು ಎಂಬ ಭಾವನೆ ಅತಿ ಮುಖ್ಯ.

(ಋ) "ತಾನು ನಾಯಕ ಎಂದು ಭಾವಿಸುವವನು ನಾಯಕನಲ್ಲ, ಇತರರಿಂದ ನಾಯಕ ಎಂದು ಗುರುತಿಸಲ್ಪಡುವವನು ನಾಯಕ" ಎಂಬುದು ನಾಯಕತ್ವದ ಬಗೆಗೆ ಚಾಲ್ತಿಯಲ್ಲಿರುವ ಇನ್ನೊಂದು ಸಾಮಾನ್ಯ ತಿಳುವಳಿಕೆ. ಸಹಕಾರಿ ಸಂಘಟನೆಗಳ ಸಂದರ್ಭದಲ್ಲಿ

ಇದು ತುಂಬಾ ಪ್ರಸ್ತುತ. ಪರಿಣಾಮಕಾರಿ ನಾಯಕರು ತಮ್ಮನ್ನು ತಾವು ಇತರರ ಮೇಲೆ ಹೇರಿಕೊಳ್ಳುವುದಿಲ್ಲ ಬದಲಿಗೆ ಹಲವರ ವಿಶ್ವಾಸದಿಂದ ನಾಯಕರಾಗಿ ಹೊರಹೊಮ್ಮುತ್ತಾರೆ. ಆದುದರಿಂದ ಸಹಕಾರಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡು ನಾಯಕರಾಗಿ (Evolved Leaders) ಉತ್ತಮ ನಾಯಕರಾಗುತ್ತಾರೆ. ಆದರೆ ಯಾವುದೇ ಒಂದು ಶಕ್ತಿಯಿಂದಾಗಿ ಹೇರಲ್ಪಡುವವರು (Imposed Leaders) ಉತ್ತಮ ನಾಯಕರಾಗಲಾರರು.

ಮೇಲಿನ ಅಂಶಗಳನ್ನು ಪ್ರತಿ ಸಹಕಾರಿ ಸದಸ್ಯರು ನೆನಪಿನಲ್ಲಿಡಬೇಕು. ಯಾವುದೇ ಯಶಸ್ವಿ ನಾಯಕತ್ವವು ಕೆಲವೇ ಅಂಶಗಳನ್ನು ಅವಲಂಬಿಸಿರುವುದಿಲ್ಲ. ನಾಯಕತ್ವದ ಅಗತ್ಯಗಳು ಕಾಲ ಮತ್ತು ಸ್ಥಳವನ್ನವಲಂಬಿಸಿ ಬದಲಾಗುತ್ತದೆ. ಹಾಗೆಯೇ ನಾಯಕತ್ವಕ್ಕೆ ಸಂಬಂಧಿಸಿದಂತೆ ನೂರಾರು ಗುಣಲಕ್ಷಣಗಳನ್ನು ಪಟ್ಟಿ ಮಾಡುವುದು ಸಾಧ್ಯವಿದೆ. ಆದುದರಿಂದ ಸಹಕಾರಿ ಸಂಘಟನೆಗಳ ಸಂದರ್ಭದಲ್ಲಿ ಪರಿಣಾಮಕಾರಿ ನಾಯಕತ್ವವು ಸಮೂಹ ನಾಯಕತ್ವವಾಗಿರುತ್ತದೆ (Collective Leadership) ಎಂಬುದನ್ನು ಮತ್ತು ವೈಯಕ್ತಿಕ ಶಕ್ತಿ ಹಾಗೂ ಕೌಶಲ್ಯಕ್ಕಿಂತ ಸಹಕಾರಿ ಸಂಸ್ಥೆಯ ಅನನ್ಯತೆಯ ಅರಿವನ್ನು ಅವಲಂಬಿಸಿರುತ್ತದೆ ಎಂಬುದನ್ನು ಎಲ್ಲ ಸಹಕಾರಿಗಳೂ ನೆನಪಿನಲ್ಲಿರಿಸಿಕೊಳ್ಳಬೇಕು.

## Conversion of Urban Cooperative Banks means entry of Corporate money lenders : Marathe




Satish Marathe, Director, NCCT & a Banking Expert who is strongly opposed to conversion of Urban Co-op Banks into Joint Stock Companies is clueless as to how the matter came up in the meeting of the Monetary Policy Committee (MPC) of RBI held last week.

Explaining the long-term damage to the cooperative sector because of this move Marathe said “when co-op banks would convert into Small Finance Banks this would go into the hands of those who have deep pockets and whose sole aim is to maximize profits.”

This would lead to desertions of socially committed cooperators making a mockery of co-operative goals, Marathe underlined. “This amounts to instigating corporate money lenders – modern avatars of village traditional money lenders, against whom the co-operative movement had risen in the first place”, said Marathe who has been riled by the move.

Marathe also said that he had personally raised the matter before Union Finance Minister Arun Jaitley who had promised not to encourage privatization of urban cooperative banks.

“We are dead sure that we would not allow this to happen; first we would petition the govt and if there is a need we would launch agitation”, he stated.

It bears recall that in the bimonthly meeting of the Monetary Policy Committee (MPC) held on Wednesday, Reserve Bank of India, among other things, has accepted the recommendations of the R Gandhi committee on voluntary conversion of urban cooperative banks.

The idea of financial inclusion goes for a toss with this move of RBI, said Marathe. “We are on the same page so far as tight regulations of UCBs are concerned and we don’t mind if the govt reviews the Banking Act or the functioning of TAFCUB after 10 years of its operation but allowing conversion of UCBs is a dangerous proposition”, he felt.

# Co-operative Governance in the Context of Sustainable Development

Dr. S Mahendrakumar, Professor of Co-operation,
Dos in Economics and Co-operation, University of Mysore, Mysuru.

## Introduction

Cooperatives are well-placed to contribute to sustainable development's triple bottom line of economic, social and environmental objectives plus the governance agenda, not least because they are enterprises that endeavour to meet the economic progress of members while satisfying their socio cultural interests and protecting the environment. They offer an alternative model for social enterprise, with contributions to sustainable development well beyond job creation.

Since cooperatives' share in GDP and total enterprises is currently relatively small in most countries, their promotion and expansion could be an important instrument for achieving the Sustainable Development Goals (SDGs).

The role of co-operative governance (COG) has been identified as a 'new vehicle' towards more effective sustainable development (SD). The effective COG could facilitate and enhance improved SD and acknowledge that COG is regarded as a new approach to governance (Department of Environmental Affairs, Online, 2003). In this new approach, there is a shift away from the narrow focus of governance to a broader focus. This includes the process by which governments are selected, monitored and replaced; the capacity of the government to effectively formulate and implement sound public policies; and the respect of citizens and the state for the institutions that govern economic and social interactions among them.

In a broader focus, a wider range of governance mechanisms are used which are concerned with the growing positions and roles of associations and partnerships that reflect the dynamic and interactive nature of co-ordination and integration (Department of Environmental Affairs, 2006:16-18).

## Governance

Governance is a system of structuring operating and controlling a company with a view to achieve long term objectives to satisfy shareholders, creditors, employees, customers and suppliers with the legal and regulatory requirement, apart from meeting environmental and society obligations.

## Why governance matters

Effective governance
Effective performance
Co-op Boards must be accountable to members and abide by co-operative principles.
Not just about the "bottom line"

## Role of Boards and directors

- Leadership
- Stewardship
- Monitoring
- Reporting

## Cooperative Governance

The concept of 'co-operative governance' (COG) has also been termed as 'multilevel governance' (Benz & Eberlein in Bulkeley et al, 2003) and 'co-operative development planning' (Nelana, 2005).

COG implies both the narrower concept of governance and mechanisms shared between different government departments and a broader concept of governance, which includes external groups and influential individuals such as the public / stakeholders and the industrial sector (Forsyth in Boer et al., 2003).

- Cooperative governance is normally associated with the management with absolute powers to:
- Design, control and use of resource,
- ways and means of regularity
- managing or administrating an organization, is a reflection of the quality of management through an appropriate mechanism of cooperative laws,
- bye-laws, and regulations polices controls, systems,

- processes and procedures of functions of a cooperative

**Along this line of reasoning, the following four questions arose:**

- What key dimensions should be contained within a sustainable development context?
- What key dimensions should be contained within a COG context to facilitate sustainable development?
- What are the challenges managers might face in an attempt to implement both sustainable development strategies and activities through effective COG?
- What practical guidelines could managers use to guide them to implement both sustainable development strategies and activities through effective COG?

## Objectives of Cooperative Governance

- The existence of effective organisational arrangements (internal and external) of which two-way communication is first and foremost.
- This should lead to higher levels of visibility
- Transparency
- Accessibility
- Willingness

**COG, effectively facilitated can, inter alia, bring about the following**

- A structured framework for encouraging pluralist inputs, for example, to environmental policy making.
- A mechanism for building consensus.
- Higher flexibility to different circumstances.
- Application across international borders.
- Generation of more stable and legitimate public policy outcomes.
- Provision of context in which expert advice can be introduced in a fruitful manner.
- Provision of a framework which encourages environmental learning. (Meadowcroft, 1999).

## Models of Governance System

Economic organizations adopted several models of governance to achieve their objectives. Some of the important models are presented here

i) **Policy Governance Model -** In policy governance model the board laid down the policy and CEO provides, operational leadership. The board focuses on the vision, mission, values and strategic priorities of the organization and empowers staff to carry out the mission within the established limits.

ii) **Constituent / Representative Model -** Constituent model establishes a clear link between the organizations board and its constituents. The constituents are usually represented on the governing board. This model features centralized decision-making with decentralized output and it implicitly values stability in its operations.

iii) **Entrepreneurial model -** The Entrepreneurial model maintains a constant market orientation to find opportunities and competitive advantage. The emphasis on short-term horizon at the expense of long term development.

iv) **Cellular model -** The cellular model organizations are made up of Self-organizing Sub-systems, self managing teams, autonomous business units, operational parameters etc, which can operate alone but can also interact with other sub-systems to produce potent and competent organizational mechanism. Now organizational theorists (Patricia Shaw, 2007) are suggesting Hybrid models which incorporate features to deal effectively with the environment to achieve its objectives/goals.

## Important Aspects of Good Co-operative Governance

Good governance includes 1, Transparency 2, Good leadership 3, Free from political and governmental interference and 4, Accountability.

Trends in co-operative governance

- Improved accountability
- Board and committee charters
- Board and director evaluations
- Member surveys and focus groups
- On-line disclosures

## Sustainable Development (SD)

- SD originated in relation to explicitly green issues, but has evolved to reflect a process that meets the needs of the present without compromising the ability of future generations to meet their own needs.

- Often called intergenerational equality, the idea is that natural resources should be shared, not just with people who are alive on the planet today but also with future generations of Earth's inhabitants.
- Whilst a certain amount of the planet's resources can be used, the earthlings should never entirely deplete a natural resource (Brundtlandt in Hoverstadt & Bowling, 2005).
- Economic development, especially in India and China, could have a drastic and devastating effect on the already exploited resources on the planet.
- Furthermore, India and China contain two thirds of the total world population which adds increasing pressure.
- There is an urgent need to turn around from the destructive path of inevitable self-destruction towards an integrated, practical, realistic approach to sustainable development (Patra, 2008).

### The major role-players in this dimension of the SD

- Process are primarily the private sector, civil society,
- Influential individuals and
- Government institutions.

### Sustainable development

- Economic
- Environment
- Social

### 1. Environmental dimensions

- The land, water and atmosphere of the earth;
- Micro-organisms, plant and animal life;
- Any part or combination of the aforementioned two aspects and the interrelationships among and between them; and The physical, chemical, aesthetic and cultural properties and conditions of the foregoing that influence human health and well-being (RSA, 1998:Section1.1[xi]).

### 2. Social dimensions

- The diverse needs of all people in existing and future communities,
- Promoting personal well-being,
- Social cohesion and equal opportunity for all.
- The social dimension emphasises the enrichment of human relationships and achievement of individual and group aspirations.

### 3. Economical dimensions

- Economic growth,
- Exports,
- Foreign exchange reserves,
- Foreign
- Direct investment,
- Official exchange rate, and
- Public sector deficits come to the fore

### Challenges

- Multiple definitions and interpretations:
- Lack of an integrated approach:
- Lack of community involvement
- Lack of effective monitoring and evaluation
- COG unsupportive of effective SD:
- Unsustainable rising levels of natural resource abuse

### Practical guidelines for the implementation of COG

- Identify and define the locus and focus
- Define sustainable development for the specific organisation
- Develop and maintain effective partnerships
- Adopt an approach of integration
- Utilise effective communication strategies
- Develop and maintain effective leadership
- Develop and maintain effective systems:
- Implement best practice approaches
- Allocate and effectively manage needed resources:
- Implement a public engagement approach:
- Manage diversity effectively

### Conclusion

The complex integrative nature of SD makes it clear that COG, effective communication and optimum collaboration between all involved actors are essential tools for more effective SD. The interrelationships between the involved actors will inevitably reflect on the state of the environment. It is this interdependence that links them all in the first place. It is within this facilitated and established framework of COG that they must all be identified correctly and valued to their fullest. ■

# RBI NEWS - JUNE 2018



K. Vittal Shetty, Banking Consultant, kohimavittal@Hotmail.com, Mobile : 9845699904

**Jun 06, 2018 :** Second Bi-monthly Monetary Policy Statement, 2018-19 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation at its meeting today, the Monetary Policy Committee (MPC) decided to :

- Increase the policy repo rate under the liquidity adjustment facility (LAF) by 25 basis points to 6.25 per cent.

Consequently, the reverse repo rate under the LAF stands adjusted to 6.0 per cent, and the marginal standing facility (MSF) rate and the Bank Rate to 6.50 per cent.

The decision of the MPC is consistent with the neutral stance of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

| Policy Rates with effect from 06 JUNE 2018. | % |
|---|---|
| POLICY REPO RATE | 6.25% |
| REVERSE REPO RATE UNDER LAF | 6.00% |
| MARGINAL STANDING FACILITY RATE | 6.50% |
| BANK RATE | 6.50% |
| **Reserve Ratios** | % |
| Cash Reserve Ratio | 4.00% |
| Statutory Reserve Ratio WEF 14 OCTOBER 2017 | 19.50% |

Date : Jun 28, 2018

Scheduled Banks' Statement of Position in India as on Friday, June 08, 2018

(Amount in Billions of ₹)

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 09-JUN-2017 | 25-MAY-2018 * | 08-JUN-2018 * | 09-JUN-2017 | 25-MAY-2018 * | 08-JUN-2018 * |
| I | LIABILITIES | | | | | | |
| | a) Deposits | 105249.56 | 113528.22 | 114043.03 | 108061.87 | 116528.8 | 117039.61 |
| | i) Demand | 10645.45 | 11698.82 | 11610.02 | 10901.95 | 11981.18 | 11890.5 |
| | ii) Time | 94604.11 | 101829.36 | 102433.08 | 97159.92 | 104547.58 | 105149.18 |
| II | CASH | 615.41 | 671.52 | 653.53 | 634.48 | 688.78 | 669.54 |
| III | BALANCES WITH R.B.I. (B) | 4424.95 | 4708.54 | 4535.39 | 4546.38 | 4829.59 | 4657.23 |
| IV | INVESTMENTS | 32366.7 | 33737.39 | 34410.3 | 33230.53 | 34680.23 | 35352.21 |
| V | BANK CREDIT | 76313.07 | 85557.95 | 85987.03 | 78649.87 | 88134.15 | 88566.77 |

## IMPORTANT NEWS

1) **Jun 06, 2018 :** Second Bi-monthly Monetary Policy Statement, 2018-19 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation at its meeting today, the Monetary Policy Committee (MPC) decided to:

- increase the policy repo rate under the liquidity adjustment facility (LAF) by 25 basis points to 6.25 per cent.

Consequently, the reverse repo rate under the LAF stands adjusted to 6.0 per cent, and the marginal standing facility (MSF) rate and the Bank Rate to 6.50 per cent.

2) **Jun 25, 2018 : RBI releases draft guidelines on constituting Board of Management in Primary (Urban) Cooperative Banks.**

The Reserve Bank of India released draft guidelines on constituting Board of Management (BoM) for Primary (Urban) Cooperative Banks (UCBs). The guidelines propose that UCBs may constitute a BoM, in addition to the Board of Directors (BoD). It may be recalled that the Expert Committee on licensing of new Urban Cooperative Banks (2010) set up under the chairmanship of Shri Y.H. Malegam had recommended, inter alia, that a BoM be constituted in every UCB, in addition to the BoD which was reiterated by the High Powered Committee on Urban Cooperative Banks (Chairman: Shri R. Gandhi) constituted in January 2015.

Under the present legal framework, the Board of Directors of a UCB performs both the executive and the supervisory roles and has the responsibility to oversee the functioning of the UCB as a co-operative society and as a bank. With a view to strengthening governance in UCBs, and as suggested during discussions with stakeholders, it is proposed to require UCBs to make a provision in their bye laws for setting up a BoM. The guidelines propose that regulatory approvals such as expansion of area of operation and opening of new branches may be allowed only for UCBs that have made such a provision in their bye laws.

Comments on the draft guidelines are invited from banks and other stakeholders by July 24, 2018.The comments/ feedback on the draft guidelines may be forwarded to:
Chief General Manager, Reserve Bank of India
Department of Cooperative Bank Regulation
C-7, First Floor, Bandra Kurla Complex
Bandra (East), Mumbai -400051
Or by email with subject line "Feedback on draft guidelines on Board of Management in UCBs" on the email.

**Directions, Withdrwals, Penalties & Cancellation of Licences of Urban Co-operative Banks/Banks.**

1) **Jun 05, 2018 :** Abhyudaya Mahila Urban Co-operative Bank Ltd., Channapatna, Karnataka – Penalised.
2) **Jun 06, 2018 :** RBI imposed penalty on 510 Army Base Workshop Credit Co-operative Primary Bank Ltd. Meerut Cantt.
3) **Jun 06, 2018 :** The Kuppam Co-operative Town Bank Ltd., Kuppam, Andhra Pradesh – Penalised.
4) **Jun 08, 2018 :** RBI imposes Monetary Penalty. The Secunderabad Co-operative Urban Bank Ltd., Hyderabad, Telangana.
5) **Jun 21, 2018 :** City Co-operative Bank Ltd., Hassan, Karnataka – Penalised.
6) **Jun 26, 2018 :** Urban Co-operative Bank Ltd., Basti – Penalised.
7) **Jun 26, 2018 :** Northern Railway Multi-State Primary Co-operative Bank Ltd., Lucknow- Penalised.

Source: www.rbi.org.in

## ಸಹೃದಯಿ ಬಿ.ಎ. ಮಹದೇವಪ್ಪ ನಿಧನ

**ಮೈಸೂರು :** ಸರಳ ಸಜ್ಜನಿಕೆಯ ವ್ಯಕ್ತಿತ್ವ, ಸ್ನೇಹಜೀವಿ, ಸದಾ ಹಸನ್ಮುಖಿ, ಅಧಿಕಾರಿಗಳಿಗೆ ಮಾದರಿ, ಸಹಕಾರ ಇಲಾಖೆಯ ಅಪರ ನಿಬಂಧಕರಾಗಿ ಸೇವೆ ಸಲ್ಲಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಉತ್ತಮ ತರಬೇತಿದಾರರಾಗಿ ರಾಜ್ಯದ ಉದ್ದಗಲಕ್ಕೂ ನೂರಾರು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯುವಜನರಿಗೆ ಸಹಕಾರ ಕ್ಷೇತ್ರದತ್ತ ಬರುವಂತೆ ಪ್ರೋತ್ಸಾಹ ನೀಡುತ್ತಾ ಬಂದಿದ್ದ ವರ್ಣರಂಜಿತ ವ್ಯಕ್ತಿತ್ವದ ಶ್ರೀಯುತ ಬಿ.ಎ.ಮಹದೇವಪ್ಪರವರು ದಿನಾಂಕ 01–07–2018ರಂದು ಮೈಸೂರಿನ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ. ಕಳೆದ ಕೆಲವು ದಿನಗಳಿಂದ ಅಸ್ವಸ್ಥರಾಗಿ ಕೋಮಾದಲ್ಲಿದ್ದ ಶ್ರೀಯುತರು ಸಹಕಾರ ಇಲಾಖೆಯಲ್ಲಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಅಪಾರ ಅಭಿಮಾನಿಗಳನ್ನು ಮತ್ತು ಹೆಂಡತಿ, ಒಬ್ಬ ಮಗ ಹಾಗೂ ಒಬ್ಬ ಮಗಳು ಮತ್ತು ಕುಟುಂಬದ ಅನೇಕ ಬಂಧುಗಳನ್ನು ಅಗಲಿದ್ದಾರೆ.



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಆಡಳಿತ ಮಂಡಲಿ ಸದಸ್ಯರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ. ಹಿರೇಮಠ ಮುಂತಾದವರು ಶ್ರೀಯುತರ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದಾರೆ.

**ಮೌನಾಚರಣೆ :** ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಯುತರು ಸೌಹಾರ್ದ ಸಹಕಾರಿ ಕ್ಷೇತ್ರ ಬಗ್ಗೆ ಹೊಂದಿದ್ದ ಅಭಿಮಾನ ಹಾಗೂ ಕಾಳಜಿ ಬಗ್ಗೆ ಪ್ರಶಂಸಿಸಲಾಯಿತು ಹಾಗೂ ಶ್ರೀಯುತರ ನಿಧನ ಒಟ್ಟಾರೆ ಸಹಕಾರ ಕ್ಷೇತ್ರಕ್ಕೆ ಹಾಗೂ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ತುಂಬಿಕೊಡಲಾಗದ ನಷ್ಟವೆಂದು ಶ್ರೀ ಶರಣಗೌಡ ಜಿ. ಪಾಟೀಲರವರು ತಿಳಿಸಿದರು. ಮೈಸೂರು ವಿಭಾಗೀಯ ಕಛೇರಿಯ ವಿಭಾಗೀಯ ಅಧಿಕಾರಿ ಶ್ರೀ ವೈ.ಕುಮಾರ ಹಾಗೂ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರರವರು ಸಂಯುಕ್ತ ಸಹಕಾರಿಯ ಪರವಾಗಿ ಶ್ರೀಯುತರ ಮನೆಗೆ ತೆರಳಿ ಗೌರವ ಸಲ್ಲಿಸಿದರು.

**ಸಾವಿನಲ್ಲೂ ಹೃದಯ ವೈಶಾಲ್ಯತೆ ಹಾಗೂ ಪರೋಪಕಾರತೆಯನ್ನು ಮೆರೆದ ಮಹದೇವಪ್ಪ :** ಶ್ರೀಯುತ ಬಿ.ಎ.ಮಹದೇವಪ್ಪನವರು ತಮ್ಮ ಸಾವಿನ ನಂತರ ಅವರ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿಗೆ ದಾನವಾಗಿ ಕೊಡಲು ಸೂಚಿಸಿ ತಮ್ಮ ದೇಹವು ಮಣ್ಣಾಗದೇ ಅಥವಾ ಸುಟ್ಟು ಬೂದಿಯಾಗದೇ ಅಧ್ಯಯನಕ್ಕೆ ಉಪಯೋಗವಾಗಲಿ ಎಂದು ಅಪೇಕ್ಷಿಸಿದಂತೆ ಅವರ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿಗೆ ನೀಡಲಾಗಿದೆ.

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 40




# AUTOMATION Info Solutions Private Ltd.

(An ISO 9001 : 2015 Certified Company)

## Smart-Ogle

### ಕೋ-ಅಪರೇಟಿವ್ ಬ್ಯಾಂಕಿಂಗ್ ಸಾಫ್ಟ್‌ವೇರ್

**Smart-Ogle** ಕೋ-ಅಪರೇಟಿವ್ ಬ್ಯಾಂಕಿಂಗ್ ಸಾಫ್ಟ್‌ವೇರನ್ನು ಕಳೆದ 18 ವರ್ಷಗಳಿಂದ ಕರ್ನಾಟಕ ರಾಜ್ಯದ 25 ಜಿಲ್ಲೆಗಳಲ್ಲಿ **1200+** ಕ್ಕೂ ಮೀರಿ ಸಹಕಾರಿ ಸಂಘಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಈ ಸಾಫ್ಟ್‌ವೇರನ್ನು ಒದಗಿಸಿರುವ ರಾಜ್ಯದ ಏಕೈಕ ಸಂಸ್ಥೆ

**Automation Info Solutions Private Limited, Mangaluru**

**ಸಾಫ್ಟ್‌ವೇರ್‌ನ ವೈಶಿಷ್ಟಗಳು :**

- Core Banking Solutions
- Cloud Solutions
- ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಎಲ್ಲಾ ವರದಿಗಳು ಲಭ್ಯ
- Inventory, GST, TDS
- RBI Reports
- ATM Integration
- Mobile APPS :



  - Pigmy / SHG Collection APP
  - Sahakari APP - ಗ್ರಾಹಕರಿಗೆ / ಮೆಂಬರ್‌ಗಳಿಗೆ
  - Sahakari Administration APP - Management ಗಳಿಗೆ
  - BC-Business Correspondence APP

**ನಮ್ಮ ಗ್ರಾಹಕರು :**

- ಕೃಷಿ ಪತ್ತಿನ ಸಹಕಾರ ಸಂಘ
- ಕ್ರೆಡಿಟ್ / ಪತ್ತಿನ ಸಹಕಾರ ಸಂಘ
- ಸೌಹಾರ್ದ ಸಹಕಾರ
- ಪಟ್ಟಣ ಸಹಕಾರ ಬ್ಯಾಂಕ್
- ನೌಕರರ ಸಹಕಾರಿ ಸಂಘ
- ಟಿ.ಎ.ಪಿ.ಸಿ.ಎಂ.ಎಸ್.
- ವಿವಿದೋದ್ದೇಶ ಸಹಕಾರಿ ಸಂಘ




**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
+91 8123169224
+91 9036478093
Website: www.aisplanet.com
Email: mrk@aisplanet.com

**Automation Info Solutions(P) Ltd,**
Marketing Department:
3rd Floor, Bharath Building,
P. M. Rao Road, Hampankatta,
Mangaluru-575001


ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ. : 080-23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010